ಡಾ. ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

# ಭಗವಂತನೆಂದರೆ?

ತಟವರ್ತಿ ವೀರರಾಘವರಾವ್



ಅನುವಾದ : ಕೆ. ಶೋಭಾಲತ ● ಹೆಚ್.ಎನ್. ಶ್ರೀನಿವಾಸ

# ಭಗವಂತನೆಂದರೆ?

**ತಟವರ್ತಿ ವೀರರಾಘವರಾವು**

ಕನ್ನಡ ಅನುವಾದ : **ಕೆ. ಶೋಭಾಲತ**

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**Bhagavantaneadare?**

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.

**M.: 9449695503, 8050082689, 9886532204**

| | | |
|---|---|---|
| ರಚನೆ | : | ಮೇ 2008 ಪ್ರತಿಗಳು :2000 |
| ಮೊದಲನೇ ಮುದ್ರಣ | : | ಫೆಬ್ರವರಿ 2009 ಪ್ರತಿಗಳು : 3000 |
| ಎರಡನೇ ಮುದ್ರಣ | : | ನವೆಂಬರ್ 2010 ಪ್ರತಿಗಳು:3000 |
| ನಾಲ್ಕನೇ ಮುದ್ರಣ | : | ನವೆಂಬರ್ 2011 ಪ್ರತಿಗಳು : 3000 |
| ಐದನೇ ಮುದ್ರಣ | : | ಫೆಬ್ರವರಿ 2021 ಪ್ರತಿಗಳು:1000 |
| ಆರನೇ ಮುದ್ರಣ | : | ಡಿಸೆಂಬರ್ 2024 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503, 9886532204 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 90/– ರೂ |
| ಪುಟಗಳು | : | iv+108=112 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,
**ಎಚ್.ಎನ್.ಶ್ರೀನಿವಾಸ** ಮತ್ತು
**ಎಸ್.ಎನ್.ವಿಜಯಲಕ್ಷ್ಮಿ ಸಂಸ್ಥಾಪಕರು,** ಶ್ರೀರಾಮಧಾಮ ಧ್ಯಾನಕೇಂದ್ರ

# ವಿಷಯ ಸೂಚಕ


| | | |
|---|---|---|
| 1 | ಭಗವಂತನ ಕುರಿತು ತಿಳಿದುಕೊಳ್ಳಿ ! | 1 |
| 2. | ವಿಗ್ರಹ ಭಗವಂತನೆ? | 4 |
| 3. | "ನಿಜವಾದ ಆರಾಧನೆ" | 7 |
| 4. | "ವಿಗ್ರಹಾರಾಧನೆ ಅಲ್ಲ – ನಿಗ್ರಹಾರಾಧನೆ ಮಾಡಬೇಕು!" | 9 |
| 5. | "ಶ್ರೀ ಮದ್ಭಗದ್ಗೀತೆಯಲ್ಲಿ ಭಗವಾನನು ತನ್ನನು ಕುರಿತು ಹೇಳಿದ ಸಂದೇಶ"! | 11 |
| 6. | ಮಾನವರು ಮಾಡುವುದು ! ಭಗವಂತನು ನೋಡುವುದು ! | 16 |
| 7. | "ಭಗವಂತನ ತಿಳುವಳಿಕೆ ಮಾಡಿಕೊಳ್ಳಬೇಕು" | 19 |
| 8. | "ನಿಜವಾದ ದೇವಾಲಯ !" | 26 |
| 9. | ಭಗವಂತನನ್ನು ಗುರುತಿಸುವ ಇರುವುದೊಂದೆ ಮಾರ್ಗ | 29 |
| 10. | "ಆತ್ಮದೃಷ್ಠಿ ಭಗವತ್ ದೃಷ್ಠಿ" | 31 |
| 11. | ಆತ್ಮವೇ ಭಗವಂತನು ಎಂದು ನಂಬಬೇಕು | 33 |
| 12. | "ಯಾರಿಗೆ ಕೃತಜ್ಞತೆ ತೋರಿಸಬೇಕು" | 35 |
| 13. | "ಭಗವಂತನು ನಿರಾಕನು" | 39 |
| 14. | "ಭಗವಂತನು ಚೈತನ್ಯ ಸ್ವರೂಪನು" | 41 |
| 15. | "ಭಗವಂತನ ಶಕ್ತಿ ಅಪಾರ" | 44 |
| 16. | "ಭಕ್ತಿ ಎಂದರೆ !" | 48 |
| 17. | ಭಕ್ತಿಯಲ್ಲಿರುವ ವಿಧಗಳು | 50 |
| 18. | "ನಿಜವಾದ ಭಕ್ತರು" | 53 |
| 19. | "ಯಾರು ನಿಜಾವಾದ ಭಕ್ತನು"? | 56 |
| 20. | "ದೇವರುಗಳೆಲ್ಲಾ ದಾರಿ ತೋರಿಸಲೆಂದೇ ಬಂದವರು"! | 59 |
| 21. | ಬೆಳೆಯ ಬೇಕೆಂದರೆ ಕೆಳಗಿನ ಸಾಧಿಯಿಯನ್ನು ಬಿಡಬೇಕು | 62 |
| 22. | "ಲೋಕ ಮೆಚ್ಚುವುದನ್ನು ಭಗವಂತನು ಮೆಚ್ಚುವುದಿಲ್ಲ"! | 68 |
| 23. | "ಪೂಜೆಗಿಂತ ಗುಣ ಮುಖ್ಯ"! | 71 |
| 24. | "ರೂಪವನ್ನಲ್ಲ, ಗುಣವನ್ನು ಸರಿಪಡಿಸಿಕೊಳ್ಳಬೇಕು"! | 74 |
| 25. | "ಅಂತರ್ ಶುದ್ಧಿಯೇ ಮುಖ್ಯ"! | 78 |
| 26. | "ಭಾವವನ್ನೇ ಭಗವಂತನು ನೋಡುತ್ತಾನೆ"! | 80 |
| 27. | "ಪ್ರಾರ್ಥನೆ ಎಂದರೆ ಭಗವಂತನನ್ನು ಬದಲಾಯಿಸುವುದಲ್ಲ, ನಾವು ಬದಲಾಗಬೇಕು"! | 83 |
| 28. | ಭಗವಂತನು ಬೀಜಗಳನ್ನೇ ಕೊಡುತ್ತಾನೆ, ಫಲಗಳ ಕೊಡುವುದಿಲ್ಲ | 85 |
| 29. | "ಪ್ರೇಮ ಎನ್ನುವುದು ಸಹಜಗುಣವಾಗಬೇಕು"! | 88 |
| 30. | ನಾವು ಮಾಡುವ ಎಲ್ಲಾ ಪುಣ್ಯಕರ್ಮಗಳು ಒಂದೇ ಫಲಿತಾಂಶವನ್ನು ಕೊಡುವುದಿಲ್ಲ | 91 |
| 31. | ಭಗವಂತನ ಮೆಚ್ಚುಗೆ ಗಳಿಸಬೇಕು | 94 |
| 32. | "ಭಕ್ತಿಯಿಂದ ಮುಕ್ತಿಯನ್ನು ಹೊಂದಿದವರೊಂದಿಗೆ ಹೋಲಿಸಿಕೊಳ್ಳಬಾರದು" | 98 |
| 33. | "ಭಗವಂತನ ಮೇಲೆ ಇಷ್ಟವನ್ನು ಬೆಳೆಸಿಕೊಳ್ಳುವ ಮೊದಲು"! | 101 |
| 34. | "ಭಗವಂತನ ಶಕ್ತಿ ತಗ್ಗಿಸಬಾರದು"! | 103 |

# ಭಗವಂತನ ಕುರಿತು ತಿಳಿದುಕೊಳ್ಳಿ !

1. ಸರ್ವಾಂತರ್ಯಾಮಿ – ಸಕರು ಚರಾಚರ ಸೃಷ್ಟಿಯೆಲ್ಲಾ ವ್ಯಾಪ್ತಿಸಿ ಇರುವವನು.
2. ನಿರಾಕಾರನು – ಆಕಾರವಿಲ್ಲದವನು.
3. ನಾಮರಹಿತನು – ಹೆಸರಿಲ್ಲದವನು.
4. ರೂಪರಹಿತನು – ರೂಪವಿಲ್ಲದವನು.
5. ದರ್ಶನಕ್ಕೆ ಸಿಗದವನು – ಭೌತಿಕವಾದ ಕಣ್ಣುಗಳಿಂದ ನೋಡಲು ಅಸಾಧ್ಯವಾದವನು.
6. ನಿರ್ಗುಣನು – ಗುಣಗಳು ಇಲ್ಲದವನು.
7. ಅವನಾಶಿ – ನಾಶವಿಲ್ಲದನು.
8. ಅನಂತನು – ಆದಿ, ಅಂತ್ಯಗಳಿಲ್ಲದವನು.
9. ಸಚ್ಚಿದಾನಂದ ಸ್ವರೂಪನು – ಯಾವಾಗಲೂ ಆನಂದದಲ್ಲಿ ಇರುವವನು.
10. ರಾಗ – ದ್ವೇಷಿಗಳಿಲ್ಲದವನು – ಅನುರಾಗ, ದ್ವೇಷವಿಲ್ಲದವನು, ಶತೃ–ಮಿತ್ರರು ಇಲ್ಲದವನು.
11. ಸೃಷ್ಟಿಕರ್ತ – ಸಕಲ ಚರಾಚರ ಸೃಷ್ಟಿಯನ್ನು ಸೃಷ್ಟಿಸಿದವನು.
12. ಜಗನ್ನಾಟಕ ಸೂತ್ರಧಾರನು – ಈ ಜಗತ್ತೆಂಭನಾಟಕಕ್ಕೆ ಸೂತ್ರಧಾರನು.
13. ನಿಶ್ಚಲನು – ನಿಶ್ಚಲವಾಗಿ ಪ್ರಕಾಶಿಸುತ್ತಿರುವವನು.
14. ಸಾಕ್ಷಿಭೂತನು – ಎಲ್ಲಾದಕ್ಕೂ ಸಾಕ್ಷಿಯಾದವನು.
15. ಪರಿಪೂರ್ಣನು – ಪರಿಪೂರ್ಣವಾಗಿ ತುಂಬಿದವನು.
16. ನಿರ್ಮಲನು – ನಿರ್ಮಲವಾದವನು, ಮಲಿನರಹಿತನು.
17. ಕಾಲಾತೀತನು – ಕಾಲಕ್ಕೆ ಅತೀತನಾದವನು.

18. ಅಖಂಡನು – ಖಂಡವಾಗಲ್ಲದೆ, ಅಖಂಡವಾಗಿರುವವನು, ಒಂದೇ ಇರುವವನು.
19. ಶಾಶ್ವತನು – ಹುಟ್ಟು– ಸಾವುಗಳಿಲ್ಲದವನು.
20. ನಿತ್ಯನು – ನಾಶವಿಲ್ಲದವನು.
21. ಸತ್ಯವಾದವನು – ಬದಲಾವಣೆ ಇಲ್ಲದವನು.
22. ಅಕ್ಷರ ಸ್ವರೂಪನು – ನಾಶವಿಲ್ಲದವನು.
23. ಸ್ವಯಂ ಪ್ರಕಾಶವಂತನು – ಒಬ್ಬರಿಂದ ಪ್ರಕಾಶಿಸುವವನಲ್ಲ ಸ್ವಯಂ ಪ್ರಕಾಶವುಳ್ಳವನು.
24. ಪರಬ್ರಹ್ಮ – ಎಲ್ಲರಿಗೂ ತಂದೆಯಾದವನು.
25. ಅಪ್ರೇಯೇಯನು – ಯಾವ ಉಪಮಾನಗಳಿಂದಲೂ ಹೇಳಲು ಸಾಧ್ಯವಿಲ್ಲದವನು.
26. ಪರಾತ್ಪರನು – ಪರಕ್ಕಿಂತಲೂ ಪರವಾಗಿ ಇರುವವನು.
27. ತುರಿಯಾತೀತನು –ತುರಿಯಕ್ಕಿಂತಲೂ ಅತೀತವಾಗಿ ಇರವವನು.
28. ಅವ್ಯಯನು – ಲಿಂಗ, ವಚನ, ವಿಭಕ್ತಿಗಳಿಲ್ಲದವನು.
29. ವಿದೇಹನು – ದೇಹವಿಲ್ಲದವನು, ಕೈಕಾಲುಗಳು ಇಲ್ಲದವನು, ವಸ್ತ್ರಭೂಷಣಗಳಿಲ್ಲದವನು.
30. ಇಚ್ಛೆ ಇಲ್ಲದವನು – ಕೋರಿಕೆ / ಬಯಕೆಗಳಿಲ್ಲದವನು.
31. ಕ್ರಿಯಾಹೀನನು – ಕರ್ಮಗಳನ್ನು ಮಾಡದವನು.
32. ಉಪಾಧಿಹೀನನು – ಉಪಾಚಾರಗಳಿಲ್ಲದವನು.
33. ನಿಷ್ಕ್ರಿಯನು – ಕರ್ಮಗಳನ್ನು ಮಾಡದವನು.
34. ವರ್ಣಹೀನನು – ಕುಲಗೋತ್ರಗಳಿಲ್ಲದವನು.
35. ಅಪರಿಮಿತನು – ಪರಿಮಾಣವಿಲ್ಲದವನು.
36. ಸರ್ವವ್ಯಾಪಿ – ಒಂದೇ ಹತ್ತಿರ ಇಲ್ಲದವನು, ಸ್ಥಾನವಿಶೇಷವಿಲ್ಲದವನು.
37. ಶ್ರವಣ ಹೀನನು – ಕಿವಿ ಇಲ್ಲದವನು, ಕಣ್ಣುಗಳಿಲ್ಲದವನು, ಸ್ಥಾನವಿಶೇಷವಿಲ್ಲವನು.
38. ಅಕಲ್ಪಿತನು – ಆಕಾರವನ್ನು ಸೃಷ್ಟಿಸಲಾರರು, ಕಲ್ಪಿಸಲಾರದವನು.
39. ಸ್ವಯಂಭುವು – ಪ್ರಾಣಪ್ರತಿಷ್ಠೆ ಮಾಡಲಾರರು.
40. ಅಣುವಣುವು ವ್ಯಾಪಿಸಿದವನು – ಆವಾಹನೆ, ವಿರ್ಸಜನೆ ಮಾಡಲಾರರು.

41. ಸ್ವಯಂ ಸಿದ್ಧನು – ಬಾಲ್ಯ, ಯೌವ್ವನ, ವಾರ್ಧಾಕ್ಯಗಳಿಗೆ ಸಂಬಂಧವಿಲ್ಲದವನು.

42. ಅದ್ವೈತನು – ದ್ವೈತವಲ್ಲದವನು, ಎರಡಾಗಿ ಇಲ್ಲದವನು, ಒಂದಾಗಿ ಇರುವವನು.

43. ಅಭೋಕ್ತ – ಭೋಗಿಸುತ್ತಿದ್ದರೂ, ಭೋಗಿಸಲಾರದವನು.

44. ಸಕಲಚರಾಚರ ರೂಪನು – ಯಾವ ಪಕ್ಷವನ್ನು ವಹಿಸದವನು, ಎಲ್ಲೆಲ್ಲೂ ಎಲ್ಲಾಕಡೆ, ವ್ಯಾಪಿಸಿದವನು.

45. ಪರಮಾತ್ಮ – ಎಲ್ಲರಿಗಿಂತ ಶ್ರೇಷ್ಠನು.



ಪಕ್ಷಿ ಬದುಕಿರುವಾಗ ಇರುವೆಗಳನ್ನು ತಿನ್ನುತ್ತದೆ. ಆದರೆ ಅದೇ ಪಕ್ಷಿ ಸತ್ತು ಹೋದಾಗ ಅದನ್ನು ಇರುವೆಗಳು ತಿನ್ನುತ್ತವೆ. ಕಾಲ, ಪರಿಸ್ಥಿತಿಗಳು ಯಾವಾಗಲಾದರೂ ಬದಲಾಗಬಹುದು ಯಾರನ್ನೂ ಕೀಳಾಗಿ ಕಾಣಬಾರದು. ಯಾರನ್ನೂ ಹಿಂಸಿಸಬಾರದು. ನಿಮಗಿಂತ ಶಕ್ತಿಯುತವಾದದ್ದು ಇದೆ ಎನ್ನುವುದನ್ನು ತಿಳಿದಿರಬೇಕು.

ಒಂದು ಮರವು ಹತ್ತು ಲಕ್ಷ ಬೆಂಕಿಕಡ್ಡಿಗಳನ್ನು ಮಾಡಲು ಉಪಯೋಗಿಸಲ್ಪಡಬಹುದು ಆದರೆ ಒಂದು ಬೆಂಕಿಕಡ್ಡಿ ಹತ್ತು ಲಕ್ಷ ಮರಗಳನ್ನು ಸುಡಬಲ್ಲದು. ಆದ್ದರಿಂದ ಒಳ್ಳೆಯವನಾಗಿರು ಒಳಿತನ್ನು ಮಾಡು.

ಯಾವ ವ್ಯಕ್ತಿ ಪವಿತ್ರವಾದ ಆಲೋಚನೆಗಳೊಂದಿಗೆ ಮಾತನಾಡಿದರೂ ಅಥವಾ ಕೆಲಸ ಮಾಡಿದರೂ ಆನಂದವು ಎಂದಿಗೂ ನೆರಳಿನಂತೆ ಆತನ ಹಿಂದೆಯೇ ಇರುತ್ತದೆ.

**– ಗೌತಮ ಬುದ್ಧ**

# 2. ವಿಗ್ರಹವು ಭಗವಂತನೇ?

ಅನಾದಿಯಿಂದ ಅಂದರೆ ಎಷ್ಟೋ ಪೀಳಿಗೆಗಳಿಂದ ಭಗವಂತನ ಕುರಿತು ಸರಿಯಾದ ತಿಳುವಳಿಕೆ ಇಲ್ಲದೆ, ಭಗವಂತನಿಗೆ ರೂಪವನ್ನು ಕೊಟ್ಟು, ರೂಪವನ್ನು ಕಲ್ಪಿಸಿ, ರೂಪವನ್ನು ಪೂಜಿಸುತ್ತಾ, ಆರಾಧಿಸುತ್ತಾ ವಿಗ್ರಹವೆ ಭಗವಂತನೆನ್ನುವಂತೆ ಭ್ರಮಿಸುತ್ತಾ, ಅಮೂಲ್ಯವಾದ ಮಾನವ ಜನ್ಮವನ್ನು, ಸಮಯವನ್ನು, ಶಕ್ತಿಯನ್ನು ವ್ಯರ್ಥ ಮಾಡಿಕೊಳ್ಳುತ್ತಾ ಇದ್ದೇವೆ. ಅಷ್ಟೇ ಅಲ್ಲ ಕೋರಿಕೊಂಡವೆಲ್ಲವನ್ನು ಕೂಡಾ ಪಡೆಯಲಾರದವರಾಗಿದ್ದೇವೆ.

ಕೋರಿಕೆಗಳು ನೆರವೇರದೆ ಹೋದರೆ, ನಿರಾಶೆ ಹೊಂದಿ, ಕೋಪಗೊಂಡು ಕೊನೆಗೆ ಆ ಭಗವಂತನನ್ನೆ ಬದಲಾಯಿಸುತ್ತೇವೆ, ಮತಗಳನ್ನು ಬದಲಾಯಿಸುತ್ತೇವೆ. ಭಗವಂತನ ಮೇಲೆ ನಿಂದೆಗಳನ್ನು ಹೋರಿಸುತ್ತೇವೆ, ನಮ್ಮ ಭಗವಂತ, ನಿಮ್ಮ ಭಗವಂತ ಎಂದು ಜಗಳವಾಡುತ್ತಿದ್ದೇವೆ ನಮ್ಮ ಮತ ನಿಮ್ಮ ಮತವೆಂದು ದ್ವೇಷಿಸಲಾರಂಭಿಸಿದ್ದೇವೆ ಕೊನೆಗೆ ಅನೇಕ ರೀತಿಯಲ್ಲಿ ದುಃಖಿತರಾಗುತ್ತಿದ್ದೇವೆ

ಅಷ್ಟೇ ಅಲ್ಲ ಭಗವಂತನ  ನಿಜತತ್ವವನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿಲ್ಲ. ಆತನ ಬಗ್ಗೆ ತಿಳಿದುಕೊಳ್ಳದೆ ಆತನ ತತ್ವವನ್ನು ಅರ್ಥಮಾಡಿ ಕೊಳ್ಳದೇ ಆರಾಧಿಸಿದರೆ ಫಲಿತಾಂಶಮ  ಶೂನ್ಯವೆಂದು ಗ್ರಹಿಸಲಾರದಾಗಿದ್ದೇವೆ. ಆತನ ನಿಜತತ್ವವನ್ನು, ನಿಜ ಸ್ಥಿತಿಯನ್ನು ತಿಳಿದುಕೊಂಡು ಆರಾಧಿಸಿದಾಗಲೆ ನಾವು ಧನ್ಯರಾಗುತ್ತೇವೆ. ತಿಳುವಳಿಕೆಗಾಗಿ ಭಗವಂತನೆಂದು ಭಾವಿಸುವ ವಿಗ್ರಹಕ್ಕೆ, ಭಗವಂತನಿಗೆ ಇರುವ ವ್ಯತ್ಯಾಸವೆನೆಂದು ತಿಳಿದುಕೊಳ್ಳೋಣ.

| **ಭಗವಂತನು** | **ವಿಗ್ರಹವು** |
|---|---|
| 1. ಸರ್ವಾಂತರ್ಯಾಮಿ – ಸಕರ ಚರಾಚರ ಸೃಷ್ಟಿಯೆಲ್ಲಾ ವ್ಯಾಪಿಸಿದ್ದಾನೆ. | 1. ಒಂದು ಕಡೆ ಮಾತ್ರವೆ ಇರುವಂತದ್ದು. |

| | |
|---|---|
| 2. ನಿರಾಕಾರನು : ಆಕಾರವಿಲ್ಲದವನು. | 2.ಆಕಾರವಿದೆ. |
| 3. ನಿರ್ಗುಣನು : ಗುಣವಿಲ್ಲದವನು. | 3. ಕಪ್ಪು, ಬಿಳುಪಿನಂತ ಗುಣವುಳ್ಳದ್ದು. |
| 4. ನಾಮರಹಿತನು : ಹೆಸರಿಲ್ಲದವನು. | 4. ಹೆಸರುಗಳಿವೆ. |
| 5. ರೂಪರಹಿತನು : ರೂಪವಿಲ್ಲದವನು. | 5. ರೂಪವಿದೆ. |
| 6. ವಿದೇಹನು : ದೇಹವಿಲ್ಲದವನು. | 6. ದೇಹ, ಕೈ, ಕಾಲುಗಳು ಇವೆ. |
| 7. ಅಪರಿಮಿತನು : ಪರಿಮಾಣ ಇಲ್ಲದವನು. | 7. ಪರಿಮಾಣವಿದೆ. |
| 8. ಶ್ರವಣ ಹೀನನು : ಕಿವಿ, ಕಣ್ಣುಗಳು ಇಲ್ಲದವನು. | 8. ಕಿವಿ, ಕಣ್ಣುಗಳಿವೆ. |
| 9. ಅಕಲ್ಪಿತನು : ಕಲ್ಪಿಸಲಾಗರಾದವನು. | 9. ಕಲ್ಪಿಸಿದ್ದು. |
| 10. ಸ್ವಯಂ ಸಂಸಿದ್ಧನು ಆಕಾರವನ್ನು ಸೃಷ್ಟಿಸಲಾರದವನು. | 10. ಆಕಾರವು ಸೃಷ್ಟಿಸಲ್ಪಟ್ಟಿರುವುದು. |
| 11. ಅಭೋಕ್ತ – ಭೋಗಗಳನ್ನು ಕೋರದವನು. | 11. ಭೊಗಗಳನ್ನು ಹೊಂದಿರುವುದು. |
| 12. ಅವಿನಾಶಿ – ನಾಶವಿಲ್ಲದವನು. | 12. ನಾಶವುಳ್ಳದ್ದು. |
| 13. ಅನಂತನು – ಆದಿ ಅಂತ್ಯವಿಲ್ಲದವನು. | 13. ಆದಿ– ಅಂತ್ಯವುಳ್ಳದ್ದು. |
| 14. ತೇಜೋವಂತನು – ಕೋಟಿ ಸೂರ್ಯರ ಕಾಂತಿವುಳ್ಳವನು. | 14. ಕಾಂತಿಇಲ್ಲದ್ದು. |
| 15. ಶಾಶ್ವತನು – ಸಾವು – ಹುಟ್ಟಿಲ್ಲದವನು. | 15. ಸೃಷ್ಟಿಸಲ್ಪಟಿದ್ದು, ನಾಶವಿದೆ. |
| 16. ಪರಿಪೂರ್ಣನು – ಪರಿಪೂರ್ಣವಾಗಿ ತುಂಬಿರುವವನು. | 16. ಪರಿಮಿತವಾದದ್ದು. |

17. ಸತ್ಯವಾದವನು – ಬದಲಾವಣೆ ಇಲ್ಲದವನು. | 17. ಬದಲಾವಣೆಯುಳ್ಳದ್ದು.

18. ಅನಂತ ಶಕ್ತಿ ಸ್ವರೂಪನು – ಶಕ್ತಿಯನ್ನು ಊಹಿಸಲಾರೆವು. | 18. ಶಕ್ತಿ ಇಲ್ಲದ್ದು.

19. ದರ್ಶಿಸಲ್ಪಡುವನು– ಭೌತಿಕ ಕಣ್ಣುಗಳಿಂದ ನೋಡಲಾರೆವು. | 19. ನೋಡಬಲ್ಲೆವು.

ಗಮನಿಸಿದರೆ ಭಗವಂತನ ಒಂದು ಲಕ್ಷಣವೂ ವಿಗ್ರಹಕ್ಕೆ ಇಲ್ಲ ಆದ ಕಾರಣ ವಿಗ್ರಹ ಭಗವಂತನಲ್ಲವೆಂದು ತಿಳಿದುಕೊಳ್ಳಬೇಕು ವಿಗ್ರಹ ಭಗವಂತನಲ್ಲದ ಮೇಲೆ ವಿಗ್ರಹವನ್ನು ಆರಾಧಿಸಿದರೆ ಭಗವಂತನನ್ನು ಆರಾಧಿಸಿದಂತೆ ಹೇಗೆ ಆಗುತ್ತದೆ? ಭಗವಂತನನ್ನು ಆರಾಧಿಸದಿದ್ದಾಗ, ಆತನ ಅನುಗ್ರಹವು ಹೇಗೆ ಲಭಿಸುತ್ತದೆ? ಕಷ್ಟಗಳು ತೀರುತ್ತವೆಯೇ? ಬಯಕೆಗಳು ಈಡೇರುತವೆಯೇ? ಕೊನೆಗೆ ನಿರಾಶೆಯೆ ಉಳಿಯುತ್ತದೆ. ನಿರಾಶೆಯಿಂದ ವಿಗ್ರಹಗಳನ್ನು, ಫೋಟೋಗಳನ್ನು ಬದಲಾಯಿಸಿದರೆ, ಮತಗಳನ್ನು ಬದಲಾಯಿಸಿದರೂ ಪ್ರಯೋಜನವಿರದು. ಹಾಗಾದರೆ ಭಗವಂತನನ್ನು ಆರಾಧಿಸಬೇಕಾದರೆ ಏನು ಮಾಡಬೇಕು? ಏನು ಏನು ಮಾಡಿದರೆ ಭಗವಂತನನ್ನು ಆರಾಧಿಸಿದಂತಾಗುತ್ತದೆ?

ಭಗವಂತನು ಭೂಮಿಯ ಮೇಲೆ ಪ್ರತಿ ಜೀವಿಯಲ್ಲೂ, ಮಾನವನಲ್ಲೂ ಆತ್ಮಸ್ವರೂಪನಾಗಿ ಇದ್ದಾನೆ, ಯಾರಾದರೆ ಆತ್ಮನನ್ನು ಆರಾಧಿಸುತ್ತಾರೋ, ಆತ್ಮದಮೇಲೆ ದೃಷ್ಟಿ ಇಡುತ್ತಾರೊ, ಅವರೆ ಭಗವಂತನನ್ನು ಆರಾಧಿಸಿದಂತೆ, ಹಾಗಾದರೆ ಅಂತರಂಗದಲ್ಲಿರುವ ಆತ್ಮನನ್ನು ಅರಾಧಿಸಬೇಕೆಂದರೆ ಅಂತರ್ಮುಖವಾಗಬೇಕು. ಅದಕ್ಕೆ ಒಂದೇ ಮಾರ್ಗ ಅದೇ ಬ್ರಹ್ಮರ್ಷಿ ಪ್ರತೀಜಿಯವರು ಭೋದಿಸಿದ "ಶ್ವಾಸದ ಮೇಲೆ ಗಮನ ಧ್ಯಾನ".

ಆದರಿಂದ ಧ್ಯಾನ ಮಾಡಿದರೇನೆ ಭಗವಂತನನ್ನು ಆರಾಧಿಸಿದವರಾಗುತ್ತೇವೆ. ಭಗವಂತನ ಅನುಗ್ರಹ ಹೊಂದುತ್ತೇವೆ. ಜೀವನವನ್ನು ಧನ್ಯ ಮಾಡಿಕೊಳ್ಳುತ್ತೇವೆ.

# 3. ನಿಜವಾದ ಆರಾಧನೆ

ಆತ್ಮ ಆರಾಧನೆಯೆ ನಿಜವಾದ ಭಗವದಾರಾಧನೆ ಎಂದು "ಶ್ರೀಮದ್ ಭಾಗವತ"ದಲ್ಲಿ ತಿಳಿಸಿದ ವಿಷಯವನ್ನು "ಗೀತಾದರ್ಶನ" ಎನ್ನುವ ಪುಸ್ತಕದ ಮೂಲಕ ಶ್ರೀರಾಮಕೃಷ್ಣ ಮಠದವರು ತಿಳಿಸಿದ್ದಾರೆ. ಸತ್ಯವನ್ನು ಗ್ರಹಿಸಿರಿ.

****************

"ನಾನು" ಎಲ್ಲಾ ಜೀವಿಗಳಲ್ಲೂ ಸದಾ ಆತ್ಮಸ್ವರೂಪದಲ್ಲಿ ವಾಸವಾಗಿದ್ದೇನೆ ಅಂತಹ ನನ್ನನ್ನು ಮರೆತು ಮರ್ತ್ಯರು (ಮಾನವರು) ನನ್ನ ಪ್ರತಿಮೆಗಳಿಗೆ ಅರ್ಚನೆಗಳನ್ನು ಮಾಡಲು ಆರಂಬಿಸುತ್ತಾರೆ"

****************

"ಸರ್ವ ಜೀವಿಗಳಲ್ಲಿ, ಆತ್ಮ ಸ್ವರೂಪದಲ್ಲಿ, ಈಶ್ವರನಾಗಿ ಇರುವ ನನ್ನ ಇರುವಿಕೆಯನ್ನು ಗುರುತಿಸದೆ, ಯಾರು ನನ್ನನ್ನು ಪ್ರತಿಮೆಗಳ ಮೂಲಕ ಪೂಜಿಸುತ್ತಾರೊ, ಅಂತಹವರ ಪೂಜೆ ಬೂದಿಯಲ್ಲಿ ಹಾಕಿದ ಯಜ್ಞದ್ರವ್ಯಗಳ ಹಾಗೆ ನಿಷ್ಪ್ರಯೋಜನ".

****************

ಯಾರು ದುರಾಭಿಮಾನದಿಂದ ಭಿನ್ನದರ್ಶನರಾದ ಇತರರ ಶರೀರದಲ್ಲಿ ಅಂತರ್ಯಾಮಿಯಾಗಿ ಇರುವವನನ್ನು ದ್ವೇಷಿಸುತ್ತಾರೊ, ಜೀವಿಗಳ ಎಡೆಗೆ ಅಂತಹವರು ಬುದ್ಧವೈರಿಗಳು, ಮನಶ್ಯಾಂತಿಯನ್ನು ಹೊಂದುವುದಿಲ್ಲ .

****************

ಸಹ ಜೀವಿಗಳನ್ನು ಅವಮಾನಿಸುತ್ತಾ, ಬೆಲೆಬಾಳುವ, ಡಾಂಬಿಕವಾದ ದ್ರವ್ಯಗಳಿಂದ ನನ್ನ ಪ್ರತಿಮೆಗಳನ್ನು ಪೂಜಿಸಿದರೆ ಅಂತಹ ಪೂಜೆಗಳಿಂದ ನಾನು ಸಂತೃಪ್ತಿ ಹೊಂದುವುದಿಲ್ಲ.

****************

ತನ್ನ ಹೃದಯದಲ್ಲೂ, ಇತರ ಜೀವಿಗಳಲ್ಲೂ ಇರುವ ನನ್ನ ಇರುವಿಕೆಯನ್ನು ಗ್ರಹಿಸಿದವರಿಗೆ ಸ್ವಧರ್ಮಪರರು ನನ್ನನ್ನು ಪ್ರತಿಮೆಗಳಲ್ಲಿ ಆರಾಧಿಸುತ್ತಾರೆ

****************

ಯಾರಾದರೆ ಸ್ವಾರ್ಥಪೂರಿತವಾದ ಭೇದವನ್ನು ಪ್ರದರ್ಶಿಸುತ್ತಾರೊ, ಅಂತಹವರು ಮೃತ್ಯು ಭಯಕ್ಕೆ ಒಳಗಾಗುತ್ತಾರೆ.

****************

ಸಮಸ್ತ ಜೀವಿಗಳ ಶರೀರವನ್ನು ನಾನು ಆಲಯ ವನ್ನಾಗಿ ಮಾಡಿಕೊಂಡಿದ್ದೇನೆ ಎಂದು ತಿಳಿದುಕೊಂಡು, ಅವುಗಳನ್ನು ಸಮದೃಷ್ಟಿಯಿಂದ, ಸ್ನೇಹಭಾವದಿಂದ, ಕಾಣಿಕೆಗಳನ್ನು, ಗೌರವವನ್ನು ಕೊಟ್ಟು ಪೂಜಿಸಬೇಕು .

**ಶ್ರೀಮದ್ ಭಾಗವತ (29.21–27)**

****************

# 4. ವಿಗ್ರಹಾರಾಧನೆಯಲ್ಲ - ನಿಗ್ರಹಾರಾಧನೆ ಮಾಡಬೇಕು !

ಭಾರತದೇಶದಲ್ಲಿ ವಿಗ್ರಹಾರಾಧನೆ ವಿಶೇಷವಾಗಿ ಪ್ರಚಾರದಲ್ಲಿದೆ. ತಲೆತಲಾಂತರಗಳಿಂದ ಭಗವಂತನನ್ನು ಆರಾಧಿಸುವ ಮಾರ್ಗ ಇದೆಯೆಂದು ಬಹಳ ಜನರು ಭಾವಿಸುತ್ತಿದ್ದಾರೆ. ಭಗವಂತನಿಗೆ ರೂಪವಿಲ್ಲವೆಂದು ಹೇಳುತ್ತಾ. ರೂಪವನ್ನೇ ಆರಾಧಿಸುತ್ತಾರೆ ವಿಗ್ರಹಾರಾಧನೆ ಮಾಡುವವರಿಗೆ, ಯಾರಾದರೂ ಭಗವಂತನಿಗೆ ರೂಪವಿಲ್ಲವೆಂದಾಗ, ರೂಪವು ಭಗವಂತನು ಹೇಗಾಗುತ್ತಾನೆ? ರೂಪವು ಭಗವಂತನು ಅಲ್ಲದಿದ್ದಾಗ, ರೂಪವನ್ನು ಆರಾಧಿಸಿದರೆ, ಭಗವಂತನ್ನು ಆರಾಧಿಸಿದಂತೆ ಹೇಗೆ ಆಗುವುದು? ಎಂದು ಪ್ರಶ್ನಿಸಿದರೆ ಸರಿಯಾದ ಸಮಾಧಾನ ಬರುವುದಿಲ್ಲ.

ಅಲೋಚಿಸಿದರೆ ವಿಗ್ರಹಾರಾಧನೆ ತಲೆತಲಾಂತರಗಳಿಂದ ಆಚಾರವಾಗಿ ಬರುತ್ತಿದೆ ಎಂದು ಆರಾಧಿಸುತ್ತಿದ್ದಾರೆ. ಅಷ್ಟೇ ಹೊರೆತು ಅದರಿಂದ ಫಲಿತವೇನಾದರೂ ಇದಯಾ? ವಿಗ್ರಹವನ್ನು ಆರಾಧಿಸಿದರೆ ಭಗವಂತನನ್ನು ಆರಾಧಿಸಿದಂತಾಗುತ್ತದೆಯೇ? ಎಂದು ಯಾರೂ ಆಲೋಚಿಸುತ್ತಿಲ್ಲ. ವಿಗ್ರಹವು ಭಗವಂತನೆ ಆದರೆ, ಭಗವಂತನನ್ನು ದರ್ಶಿಸಿದವರು, ಅಂದರೆ ವಿಗ್ರಹದ ಹತ್ತಿರ ಹೋದವರು ತಿರುಗಿ ಮನೆಗೆ ಏಕೆ ಬರುತ್ತಿದ್ದಾರೆ? ಯಾರಾದರೂ ಭಗವಂತನನ್ನು ದರ್ಶಿಸಿದ ಮೇಲೆ ಆತನನ್ನು ಬಿಡುತ್ತಾರೆಯೇ? ಬಿಟ್ಟು ಬರುತ್ತಾರೆಂದರೆ ವಿಗ್ರಹವು ಭಗವಂತನು ಅಲ್ಲವೆಂದೆ ಭಾವಿಸುವುದರಿಂದ ಅಲ್ಲವೇ?

ವಿಗ್ರಹವನ್ನು ನಾವೇ ಅಲ್ಲವೇ ತಯಾರು ಮಾಡಿದ್ದೇವೆ ಅಸಲು ಭಗವಂತನನ್ನು ತಯಾರು ಮಾಡಬಲ್ಲೆವೆ? ಭಗವಂತನನ್ನೆ ತಯಾರು ಮಾಡುವ ಶಕ್ತಿ ನಮಗೆ ಇದೆಯೆ? ಭಗವಂತನನ್ನು ತಯಾರು ಮಾಡಲು ಸಾಧ್ಯವಾದಾಗ ನಾವೇ ಎಷ್ಟು ಶ್ರೇಷ್ಟರಲ್ಲವೇ? ಭಗವಂತನನ್ನೇ ತಯಾರು ಮಾಡುವ ಶಕ್ತಿ ಇರುವಾಗ ನಮ್ಮ ಬಯಕೆಗಳನ್ನು ಏಕೆ ತೊಲಗಿಸಿಕೊಳ್ಳದೆ ಹೋಗುತ್ತಿದ್ದೇವೆ? ನಮ್ಮ ಕಷ್ಟಗಳನ್ನು ಏಕೆ ತೊಲಗಿಸಿಕೊಳ್ಳಲು ಆಗಿತ್ತಿಲ್ಲ?

ನಾವು ತಯಾರು ಮಾಡಿದ ವಿಗ್ರಹವನ್ನೇ ಏಕೆ ಪ್ರಾರ್ಥಿಸುತ್ತಿದ್ದೇವೆ? ಭಗವಂತನು ಅಕಲ್ಪಿತನಲ್ಲವೇ? ಹಾಗಾದರೆ ಕಲ್ಪಿಸಿದವನು ಭಗವಂತನು ಹೇಗೆ ಆಗುತ್ತಾನೆ ಭಗವಂತನಲ್ಲದವನನ್ನು ಆರಾಧಿಸಿದರೆ ಹೇಗೆ ಆಗುತ್ತದೆ ಹೀಗೆ ವಿಗ್ರಹಾರಾಧನೆ ಮಾಡುವವರನ್ನು ಆರಾಧನೆಗಳನ್ನು ಯಾರಾನ್ನಾಗಲಿ ಪ್ರಶ್ನಿಸಿದರೆ ಅವರೇನು ಎನ್ನುತ್ತಾರೆಂದರೆ, ನೀನು ಹೇಳುವುದು ನಿಜವೆ ಆದರೂ ವಿಗ್ರಹಾರಾಧನೆಗೆ ಕಾರಣವಿದೆ ವಿಗ್ರಹವು ಭಗವಂತನು ಅಲ್ಲ ಆದರೆ "ವಿಗ್ರಹವು ನಿಗ್ರಹಕ್ಕಾಗಿ" ಅಲ್ಲದೆ ಮತ್ತೇನು ಅಲ್ಲ ಎಂದು ಸಮಾಧಾನ ಹೇಳುತ್ತಾರೆ.

ಹಾಗೆ "ವಿಗ್ರಹವು ನಿಗ್ರಹಕ್ಕಾಗಿ ಮಾತ್ರವೇ" ಎಂದವರಿಗೆ ನಿಗ್ರಹವೆಂದರೇನು? ವಿಗ್ರಹದಿಂದ ನಮಗೇನು ಪ್ರಯೋಜನವಿದೆ? ಎಂದು ಕೇಳಿದರೆ ಸರಯಾದ ಉತ್ತರವನ್ನು ಹೇಳುವುದಿಲ್ಲ ಆದರೆ ಇದೆ ವಿಷಯವನ್ನು ಒಂದು ಸಂದರ್ಭದಲ್ಲಿ ಬ್ರಹ್ಮರ್ಷಿ ಪ್ರತಿಯವರನ್ನು ವಿವರಣೆ ಕೋರಿದಾಗ ಆತನು ನಿಗ್ರಹಕ್ಕೆ ಉತ್ತಮ ವಿವರಣೆ ಕೊಟ್ಟಿದು ನಡೆಯಿತು.

ಗ್ರಹ ಅಂದರೆ ಗ್ರಹಿಸುವುದು, ನಿಗ್ರಹ ಅಂದರೆ ಗ್ರಹಿಸದೆ ಇರುವುದು ಎಂದು ಹೇಳುತ್ತಾ ನಾವು ಎಲ್ಲಾ ವಿಷಯಗಳನ್ನು ಮನಸ್ಸಿನಿಂದ ಗ್ರಹಿಸುತ್ತೇವೆ. ಹಾಗೆಯೇ ಮನಸ್ಸಿನಿಂದ ಏನು ಗ್ರಹಿಸದೆ ಹೋದರೆ. ಅದೆ ನಿಗ್ರಹ ಎಂದು ವಿವರಿಸಿದರು. ಅಷ್ಟೇ ಅಲ್ಲ ನಿಗ್ರಹ ಬರಬೇಕೆಂದರೆ ವಿಗ್ರಹವನ್ನು ಆರಾಧಿಸಿದರೆ ಬರದು. "ಶ್ವಾಸದ ಮೇಲೆ ಗಮನ" ಇಟ್ಟರೆ ಬರುತ್ತದೆ. ಶ್ವಾಸದ ಮೇಲೆ ಗಮನ ಇಡುವುದೇ ನಿಗ್ರಹವೆಂದು ಎಲ್ಲರ ಸಂಶಯವನ್ನು ಪರಿಹರಿಸಿದರು.

ಅಂತಹ ಧ್ಯಾನ ಮೂಲಕವೆ ಸಮಸ್ತ ದುಃಖಗಳು ಶಾಶ್ವತವಾಗಿ ದೂರವಾಗುತ್ತವೆ. ಅಷ್ಟೆ ಅಲ್ಲ ವಿಗ್ರಹಾರಾಧನೆ ಇಂದ ಅಲ್ಲ, ಎಂದು ಪತ್ರೀಜಿಯವರು ವಿವರಿಸಿದರು ಇದೇ ವಿಷಯವನ್ನು 18 ಆದರ್ಶ ಸೂತ್ರಗಳಲ್ಲಿ ಕೂಡ ಪಿರಮಿಡ್ ಮಾಸ್ಟರ್‌ಗಳಿಗೆ ತಿಳಿಸಿ ಹೇಳಿದರು.

# 5. ಶ್ರೀ ಮದಗ್ಭವದ್ಗೀತೆಯಲ್ಲಿ ಭಗವಾನನು ತನನ್ನು ಕುರಿತು ಹೇಳಿದ ಸಂದೇಶ

ಭಗವಂತನು ಯಾರು? ಹೇಗೆ ಇರುತ್ತಾನೆ? ಆತನನು ಹೇಗೆ ಆರಾಧಿಸಬೇಕು? ಯಾವ ಆರಾಧನೆ ಮಾಡಿದರೆ ಭಗವಂತನನ್ನು ಆರಾಧಿಸಿದಂತಾಗುತ್ತದೆ? ಸಗುಣೋಪಾಸನೆ ಮಾಡಬೇಕೋ? ನಿರ್ಗುಣೋಪಾಸನೆ ಮಾಡಬೇಕೋ?

ಪೂರ್ವದಿಂದ ಆಚಾರವಾಗಿ ಬರುತ್ತಿರುವ ಸಗುಣೋಪಾಸನೆಯೆ ಸರಿಯಾದ ಮಾರ್ಗವೆಂದು ಬಹಳ ಮಂದಿ ಭಾವಿಸುತ್ತಿರುತ್ತಾರೆ. ಸಗುಣೋಪಾಸನೆ ಅಂದರೆ ವಿಗ್ರಹಾರಾಧನೆ. ವಿಗ್ರಹಾರಾಧನೆ ಮಾಡದೇ ಹೋದರೆ, ಭಗವಂತನಿಗೆ ಕೋಪ ಬರುತ್ತದೆಯೆಂದು ಭಯಪಡುವವರು ಎಷ್ಟೋ ಮಂದಿ ಇದ್ದಾರೆ.

ಹಾಗಾದರೆ ಭಗವಂತನು ನಿಜವಾಗಿಯೂ ಕೋಪಿಸುತ್ತಾನೆಯೇ? ವಿಗ್ರಹಾರಾಧನೆ ಮಾಡುವವರನ್ನು ಕುರಿತು ಭಗವಂತನ ಭಾವ ತಿಳಿದುಕೊಳ್ಳುವುದಕ್ಕೆ ಗೀತೆಯಲ್ಲಿ 9ನೇ ಆಧ್ಯಾಯ 11 ನೇ ಶ್ಲೋಕದಲ್ಲಿ ಭಗವಂತನ ಸಂದೇಶವನ್ನು "ಜ್ಞಾನೇಶ್ವರಿ ಭಗವದ್ಗೀತೆಯಲ್ಲಿ" ಶ್ರೀ ಜ್ಞಾನೇಶ್ವರರು ಕೊಟ್ಟ ವಿವರಣೆಯಿಂದ ನಮ್ಮ ಸಂದೇಹಗಳು, ಭಯಗಳು ಪೂರ್ತಿಯಾಗಿ ತೊಲಗಿ ಹೋಗುತ್ತವೆ. ಆ ಶ್ಲೋಕದ ಮೂಲಕ ಶೀಕೃಷ್ಣ ಭಗವಾನನ ಸಂದೇಶವನ್ನು ತಿಳಿದುಕೊಳ್ಳೋಣ.

**ಶ್ಲೋಕ ॥ ಅವಜಾನನ್ತಿ ಮಾಂ ಮೂಢಾ ಮಾನುಷಿಂ ತಮ ಮಾಶ್ರೀತಮ್ ।**
**ಪರಂಭಾವ ಮಜಾನನ್ತೊ ಮಮ ಭೂತ ಮಹೇಶ್ವರ ಮ್ ॥**

**(9–11)**

**ತಾತ್ಪರ್ಯ :** ಸರ್ವಭೂತಗಳನ್ನು ನಿಯಮಿಸುವಂತಹದ್ದು ಸರ್ವೋತ್ತಮವಾದದ್ದು ಆದ ನನ್ನ ತತ್ವವನ್ನು ತಿಳಿಯದ ಮೂಢರು ನನ್ನನ್ನು ಮನುಷ್ಯ ಸಂಬಂಧವಾದ ದೇಹ ವನ್ನು ಮಾತ್ರವನ್ನು ಧರಿಸಿದವನಂತೆ (ಯೋಚಿಸಿ) ಮಾಡಿ ನನ್ನನ್ನು ಅವಮಾನಿಸು ತ್ತಿದ್ದಾರೆ.

**ಶ್ರೀ ಜ್ಞಾನೇಶ್ವರರ ವಿವರಣೆ :** ಅರ್ಜುನ ನಿನಗೆ ವಾಸ್ತವವಾಗಿ ನನ್ನ ಬಗ್ಗೆ

ನಿಜವಾಗಿಯೂ ಅನುರಾಗ ಉಂಟಾದರೆ, ನೀನು ಈ ತತ್ತ್ವ ವಿಚಾರಣೆಯನ್ನು ಚೆನ್ನಾಗಿ, ಪ್ರಯತ್ನ ಪೂರ್ವಕವಾಗಿಯೂ ನೆನಪಿಸನಲ್ಲಿಟ್ಟು ಕೊಳ್ಳಬೇಕು.

ಕಾಮಲೆ ರೋಗ ಬಂದವನಿಗೆ ಸ್ವಚ್ಚವಾದ ಬೆಳದಿಂದಗಲೂ ಕೂಡ ಹಳದಿ ಬೆಳದಿಂಗಳಾಗಿ ಕಾಣಿಸುವ ರೀತಿ, ನನ್ನ ನಿರ್ಮಲ ರೂಪ ಕೂಡಾ ದೋಷ ಪೂರಿತವಾಗಿ ಕಾಣಿಸುವುದು, ಇಲ್ಲಾ ಜ್ವರದಿಂದ ಬಾಯಿರುಚಿ ಬದಲಾದವನಿಗೆ ಹಾಗೂ ಕೂಡಾ ವಿಷವಾಗಿರುವ ರೀತಿ, ನಾನು ಮನುಷ್ಯನಾಗಿಲ್ಲದಿದ್ದರೂ, ಮಾನವರು ನನ್ನನ್ನು ಮನುಷ್ಯನಂತೆಯೆ ಭಾವಿಸುತ್ತಿದ್ದಾರೆ. ಆದ್ದರಿಂದ ಓ ಅರ್ಜುನ, ಈ ರಹಸ್ಯ ಜ್ಞಾನವನ್ನು ಮರೆಯಬೇಡವೆಂದು ನಿನಗೆ ಮಾತುಮಾತಿಗೂ ಹೇಳುತ್ತಿದ್ದೇನೆ.

ಈ ರಹಸ್ಯ ಜ್ಞಾನವಿಲ್ಲದ ಭೌತಿಕ ಧೃಷ್ಟಿ ನಿಷ್ಪ್ರಯೋಜನ, ಭೌತಿಕ ಧೃಷ್ಟಿಯಿಂದ ನೋಡುವುದೆಂದರೆ ನನ್ನನ್ನು ನೋಡುವುದಲ್ಲ. ಏಕೆಂದರೆ ಕನಸಿನಲ್ಲಿ ಯಾರಾದರೂ ಅಮೃತವನ್ನು ಕುಡಿಯುತ್ತಾರೊ, ಅವನು ಎಂದಿಗೂ ಅಮರನಾಗಲಾರನು. ಸಾಧಾರಣವಾಗಿ ಪ್ರಜೆಗಳು ನನ್ನನ್ನು ಬಾಹ್ಯಧೃಷ್ಟಿಯಿಂದಲೇ ನೋಡುತ್ತಾರೆ. ಹಾಗಾಯೇ ಬಾಹ್ಯಾರೂಪವನ್ನು ಮಾತ್ರವೇ ನನ್ನನ್ನು ತಿಳಿಯಬಲ್ಲವರು ಆದರೆ ನೀರಿನಲ್ಲಿ ಬಿದ್ದ ನಕ್ಷತ್ರದ ಪ್ರತಿ ಬಿಂಬವನ್ನು ರತ್ನವನ್ನಾಗಿ ಭಾವಿಸಿ ಅದನ್ನು ಪಡೆಯಬೇಕೆಂಬ ಆಲೋಚನೆಯಿಂದ, ಮೋಸ ಹೋಗಿ, ನಾಶವನ್ನು ಹೊಂದುವ ಹಂಸದಂತೆ ಈ ಬಾಹ್ಯ ಜ್ಞಾನದಿಂದ ಯದಾರ್ಥವಾದ ಜ್ಞಾನವನ್ನು ಪಡೆಯಲಾಗದವರಾಗಿದ್ದಾರೆ.

ಬೇಸಿಗೆಯಲ್ಲಿನ ಮರೀಚಿಕೆಯನ್ನು ಗಂಗೆಯಂದು ಭಾವಿಸಿ ಅದರ ಬಳಿ ಹೋಗಿದ್ದಕ್ಕೆ ನಮಗೇನು ಲಭಿಸುತ್ತದೆ? ನೈದಿಲೆ ಗಿಡವನ್ನು ಕಲ್ಪವೃಕ್ಷ ವೆಂದು ಭಾವಿಸಿ ಕೈಯಲ್ಲಿ ಇಟ್ಟುಕೊಂಡರೆ ಲಾಭವೇನು? ಕಾಳಸರ್ಪವನ್ನು ಎರಡು ದಳಗಳ ನೀಲಮಣಿ ಹಾರವೆಂದು ಭಾವಿಸಿ ಕೈಯಲ್ಲಿಟ್ಟು ಕೊಂಡರೂ, ಇಲ್ಲಾ ಬಿಳಿಕಲ್ಲನ್ನೇ ರತ್ನವೆಂದು ಭಾವಿಸಿ ಆರಿಸಿಕೊಂಡರೂ, ಇಲ್ಲಾ ಉರಿಯುತ್ತಿರುವ ಬಣಕಟ್ಟಿಗೆಯ ಬೆಂಕಿಯ ಕೆಂಡವನ್ನು ಗುಪ್ತ ಭಂಡಾರ ಸಿಕ್ಕಿದೆ ಎಂದು ಒಡಲಲ್ಲಿ ಹಾಕಿಕೊಂಡರೂ, ಇಲ್ಲಾ ಸಿಂಹವು ಕೆರೆಯಲ್ಲಿ ತನ್ನ ನೆರಳನ್ನು ನೋಡಿ ಆ ನೆರಳನ್ನು ಮತ್ತೊಂದು ಸಿಂಹವೆಂದು ಭಾವಿಸಿ, ದೂಡಿದರೆ ಅದರ ಪರಿಣಾಮವೇನಾಗಬಹುದು?

ಇದೇ ವಿಧವಾಗಿ, ಪರಮಾತ್ಮನಾದ ನಾನು ನಿಜವಾಗಿ ಸಾಕಾರರೂಪವಾಗಿ ಪ್ರಪಂಚದಲ್ಲಿ ಅವಂತರಿಸುವೆನೆಂದು, ದೃಢ ನಿಶ್ಚಯವುಳ್ಳವರಾಗಿ ಈ ಸಾಂಸಾರಿಕ ಪ್ರಪಂಚದಲ್ಲಿ ಲೀನವಾಗಿದ್ದಾರೆ. ನೀರಿನಲ್ಲಿ ಬೀಳುವಪ್ರತಿಬಿಂಬವನ್ನೆ ಚಂದ್ರನನ್ನಾಗಿ ಭಾವಿಸಿ ಅದನ್ನು ಪಡೆದವರಂತೆ ಭಾವಿಸ ಬಹುದು. ಭ್ರಮೆಯಿಂದ ಕೂಡಿದ ಇಂತಹ

ಬುದ್ದಿ ನಿರ್ಣಯವು ಕೇವಲ ವ್ಯರ್ಥವಾದದ್ದೆ. **ಗಂಜಿಯನ್ನು ಕುಡಿದು ಅದರಿಂದ ಅಮೃತದ ಗುಣವನ್ನು ಆಶಿಸಿದಂತೆ, ಈ ನಶ್ವರವಾದ ನಾಮರೂಪಾತ್ಮಕ ಸ್ಥೂಲರೂಪವನ್ನು** ಮನಸ್ಸಿನಲ್ಲಿ **ಪೂರ್ತಿಯಾಗಿ ವಿಶ್ವಾಸಿಸಿ, ಅದರಲ್ಲಿಯೆ ನನ್ನ ಶಾಶ್ವತರೂಪವನ್ನು ನೋಡುವುದು ಕೂಡಾ ವ್ಯರ್ಥವಾದದ್ದೆಂದು ತಿಳಿದುಕೊಳ್ಳಬೇಕು ಈ ವಿಧವಾದ ಪ್ರಯತ್ನದಿಂದ ನಾನು ಹೇಗೆ ತಾನೇ ಕಾಣಿಸಬಲ್ಲೆನು**?

ಪೂರ್ವ ದಿಕ್ಕಿಗೆ ಹೋಗುವ ಮಾರ್ಗದಲ್ಲಿ ಹೋಗಿ, ಯಾವಾನಾಗಲಿ ಪಶ್ಚಿಮ ದಿಕ್ಕಿನಲ್ಲಿರುವ ಸಮುದ್ರದ ತೀರವನ್ನು ಸೇರಬಲ್ಲನೇ? ಇಲ್ಲಾ, **ಓ ಅರ್ಜುನ, ಡೊಳ್ಳಾದವನ್ನು ಎಷ್ಟು ಕುಟ್ಟಿದರೂ ಅದರಿಂದ ಅಕ್ಕಿಯ ಕಾಳು ಲಭಿಸುವುದೇ? ಇದೇ ರೀತಿಯನ್ನು ಕೇವಲ ವಿಕಾರದಿಂದ ಏರ್ಪಟ್ಟ ಈ ಸ್ಥೂಲ ಜಗದಾಕಾರವನ್ನು ತಿಳಿದುಕೊಂಡ ಮಾತ್ರಕ್ಕೇ ಕೇವಲ ನಿರಾಕಾರ, ನಿರ್ಗಣ ಸ್ವರೂಪವನ್ನು ತಿಳಿದುಕೊಳ್ಳಲು ಸಾಧ್ಯವೇ**?

ಬಾಯಿಂದ ಸುರಿಯುವ ಜೊಲ್ಲನ್ನು ಕುಡಿಯುವುದರಿಂದ ನೀರನ್ನು ಕುಡಿದಾಗ ಆಗುವ ಅನುಭವವು ಆಗುವುದೇ? ಇದೇ ವಿಧವಾಗಿ ಮಾನವರು ತಮ್ಮ ಮನಸ್ಸಿನಲ್ಲಿ ಮೋಹವು ಹುಟ್ಟುವುದರಿಂದಲೆ, ಭ್ರಮೆಹೊಂದಿದವರಾಗಿ ಈ ಜಗತ್ತೇ ಪರಮಾತ್ಮನಾದ ನಾನು ಎಂದು ಭವಿಸುತ್ತಾರೆ. ಇಂತಹ ಸ್ಥಿತಿಯಲ್ಲಿ ಇಲ್ಲಿ ಸಂಭವಿಸುವ ಜನನ – ಮರಣಗಳಂತೆ ಇರುವ ಕರ್ಮಗಳು ನನಗೂ ಕೂಡ ಸಂಭವಿಸುತ್ತವೆಯೆಂದು ನಂಬುತ್ತಾರೆ. ಈ ರೀತಿಯಾಗಿ ನಾಮರಹಿತ ನಾದ ನನಗೆ ಹೆಸರನ್ನು, ಕ್ರೀಯಾ ಹೀನನಾದ ನನಗೆ ಕರ್ಮವನ್ನು, ಮತ್ತೇ ವಿದೇಹನಾದ ನನ್ನ ಮೇಲೆ ದೇಹ ಧರ್ಮವನ್ನು ಆರೋಪಿಸುತ್ತಿದ್ದಾರೆ .

ನಾನು ನಿರಾಕಾರನಾಗಿದ್ದರೂ ಕೂಡಾ ಕರ್ಮಗಳನ್ನು ಮಾಡುತ್ತಿದ್ದೇನೆ ಎಂದು, ವರ್ಣ ಹೀನನಾಗಿದ್ದರೂ ಕುಡಾ ವರ್ಣವುಳ್ಳವನೆಂದು, ನಿರ್ಗುಣನಾಗಿದ್ದರೂ, ಗುಣವಂತನೆಂದು, ಕೈ ಕಾಲುಗಳಿಲ್ಲದಿದ್ದರೂ ಕೈ – ಕಾಲು ಮೊದಲಾದವು ಇವೆಯೆಂದು, ಅಪರಿಮಿತನಾಗಿದ್ದರೂ ಪರಿಮಾಣವು ಇದೆ ಎಂದು, ಹಾಗೆಂಯೇ ಸರ್ವವ್ಯಾಪಿಯಾಗಿದ್ದರೂ ಸ್ಥಾನ ವಿಶೇಷವು ಇವೆ ಎಂದು ಆರೋಪ ಮಾಡುತ್ತಿದ್ದಾರೆ.

ನಿದ್ದೆಯಲ್ಲಿರುವ ಮುನುಷ್ಯನು ಕನಸಿನಲ್ಲಿ ತನ್ನ ಹಾಸಿಗೆಯಲ್ಲಿಯೇ ಅರಣ್ಯವನ್ನು ನೋಡುವರೀತಿಯುಳ್ಳವರು, ಶ್ರವಣ ಹೀನನಾದ ನನಗೆ ಶ್ರವಣಗಳು ಇವೆಯೆಂದು ಭಾವಿಸುತ್ತಾರೆ. **ನನಗೆ ನೇತ್ರಗಳು, ಗೋತ್ರ, ರೂಪ, ಆಕಾರ, ಇಚ್ಚೇ ತೃಪ್ತಿ, ವಸ್ತ್ರ, ಭೂಷಣಗಳು ಮತ್ತು ಕಾರಣ ಮುಂತಾದವುಗಳು ಯಾವುವು ಇಲ್ಲದಿದ್ದರೂ ಇದೆಲ್ಲಾ ನನಗೆ**

**ಇವೆಯೆಂದು ಭಾವಿಸುತ್ತಾರೆ**. ನಾನು ಸ್ವಯಂ ಸಂಸಿದ್ಧನಾಗಿದ್ದರೂ ಅವರು ನನ್ನ ವಿಗ್ರಹಗಳನ್ನು ನಿರ್ಮಿಸುತ್ತಾರೆ.

ನಾನು ಸ್ವಯಂಭುವು ಆಗಿದ್ದರೂ ನನಗೆ ಪ್ರಾಣ ಪ್ರತಿಷ್ಠೆ ಮಾಡುತ್ತಾರೆ

**ನಾನು ಯಾವಾಗಲೂ, ಎಲ್ಲೆಲ್ಲೂ ಅಖಂಡರೂಪವಾಗಿ ವ್ಯಾಪಿಸಿದ್ದರೂ, ಅವರು ಆವಾಹನೆ, ವಿಸರ್ಜನೆಗಳನ್ನು ಮಾಡುತ್ತಾರೆ**. ನಾನು ಯಾವಾಗಲೂ ಸ್ವಯಂ ಸಿದ್ಧನಾಗಿ ಇದ್ದರೂ ಕೂಡಾ ಅವರು ತಮ್ಮ ಬುದ್ಧಿಯಿಂದ ನನ್ನ ಅವಿಕೃತ ಏಕ ರೂಪಕ್ಕೆ ಬಾಲ್ಯಾ, ಯೌವನ, ವಾರ್ಧಕ್ಯಗಳೊಂದಿಗೆ ಸಂಬಂಧವನ್ನು ಉಂಟುಮಾಡುತ್ತಾರೆ ನಾನು ದ್ವೈತಹೀನನಾಗಿದ್ದರೂ ಕೂಡಾ ನನ್ನ ಬಗ್ಗೆ ಅವರು ದ್ವೈತ ಭಾವವನ್ನು ಆರೋಪಿಸುತ್ತಾರೆ ನಾನು ನಿಷ್ಕ್ರಿಯನಾದನಾಗಿದ್ದರೂ ನನ್ನ ಮೇಲೆ ಕ್ರೀಯಾ ರೋಪಣೆ ಮಾಡಬಲ್ಲರು, ಹಾಗೆಯೇ **ನಾನು ಅಭೋಕ್ತನಾಗಿದ್ದರೂ ನಾನು ಭೋಗಗಳನ್ನು ಅನುಭವಿಸುತ್ತಿದ್ದೇನೆಂದು ಅವರು ಭಾವುಸುತ್ತಾರೆ**. ನನಗೆ ಯಾವ ಕುಲಗೋತ್ರಗಳು ಇಲ್ಲದಿದ್ದರೂ ಅವರು ನನ್ನ ಕುಲವನ್ನು ಕುರಿತು ವರ್ಣಿಸುತ್ತಾರೆ. ನಾನು ಅವಿನಾಶಿಯಾಗಿದ್ದರೂ ನನ್ನ ಮೃತ್ಯುಕಲ್ಪನೆ ಏರ್ಪಡಿಸಿ ಅವರು ದುಃಖಿಸುತ್ತಾರೆ.

ನಾನು ಎಲ್ಲರಲ್ಲಿಯೂ ತುಂಬಿಕೊಂಡಿದ್ದರೂ ನನ್ನ ಕುರಿತು ಶತೃಮಿತ್ರಾಧಿ ಭಾವನೆಗಳುಳ್ಳವನು ಎಂದು ಅಂದುಕೊಳ್ಳುತ್ತಾರೆ. ನಾನು ಆತ್ಮಾನಂದಕ್ಕೆ ಪ್ರತ್ಯಕ್ಷನಿವಾಸವಾಗಿದ್ದರೂ, ಅವರು ನಾನು, ವಿವಿಧ ಸುಖಗಳನ್ನು ಅನುಭವಿಸುತ್ತಿರುತ್ತಾನೆ ಎಂದು ಭಾವಿಸುತ್ತಾರೆ. ನಾನು ಎಲ್ಲೆಲೂ ವ್ಯಾಪಿಸಿದ್ದರೂ ಅವರು ನನ್ನನ್ನು ಒಂದೇ ದೇಶದವನು ಎಂದು ಹೇಳುತ್ತಾರೆ. ಅಷ್ಟೇ ಅಲ್ಲ ಇಂತಹ ಸ್ಥಳದಲ್ಲಿ ಇರುತ್ತೇನೆ ಎಂದೂ ಕೂಡಾ ಒಪ್ಪಿಕೊಳ್ಳುತ್ತಾರೆ. ನಾನು ಸಮಸ್ತ ಚರಾಚರಗಳಿಗೆ, ಆತ್ಮನಾಗಿದ್ದರೂ ನಾನು ಒಂದು ಪಕ್ಷವನ್ನು ವಹಿಸಿ ಎರಡನೆಯ ಪಕ್ಷದವರನ್ನು ಕೋಪಿಸಿಕೊಂಡು ಸಾಯಿಸುತ್ತೇನೆಂದು, ಅವರು ನನ್ನನ್ನು ಕುರಿತು ಹೀಗೆ ಭಾವಿಸುತ್ತಾರೆ, **ಮಾನವ ಧರ್ಮಗಳೆಲ್ಲವೂ ನನಗೆ ಇವೆಯೆಂದು ಆರೋಪಿಸುತ್ತಾರೆ.**

ಈ ವಿಧವಾದ ಅವರು ಜ್ಞಾನ ಸ್ವರೂಪವು ಪೂರ್ತಿಯಾಗಿ ಸತ್ಯಕ್ಕೆ ದೂರವಾಗಿದೆ. ಅವರು ತಮ್ಮ ಮುಂದಿರುವ ಯಾವುದಾದರೂ ವಿಗ್ರಹವನ್ನು ನೋಡುತ್ತಾ ಅದನ್ನೆ 'ದೇವತೇ' ಎನ್ನುತ್ತಾರೆ. ಆವಿಗ್ರಹವು ಮುರಿದು ಹೋದಾಗ, ಇದು ದೇವತೆ ಅಲ್ಲವೆಂದು ಆ ಕಡೆಗೆ ಬೀಸಾಡುತ್ತಾರೆ. **ಅವರು ನಾನು ಸಕಾರ ಮನುಷ್ಯನೆಂದು ವಿಪರೀತವಾಗಿ ಆಲೋಚಿಸುತ್ತಾರೆ ಇವರ ಈ ವಿಪರೀತ ಜ್ಞಾನವೆ ಸತ್ಯವಾದ ಜ್ಞಾನವನ್ನು ಅಂದಕಾರದಲ್ಲಿಡುತ್ತದೆ. ಹಾಗೆಯೇ ಸತ್ಯಾವಾದ ಜ್ಞಾನವು ಅವರ ದೃಷ್ಟಿಗೆ ಬರುತ್ತಿಲ್ಲ.**

ಆದ್ದರಿಂದ ಭಗವಂತನ ನಿಜತತ್ವವನ್ನು ತಿಳಿದುಕೊಳ್ಳಬೇಕು ಭೂಮಿಯ ಮೇಲೆ ಭಗವಂತನನ್ನು ಗುರುತಿಸುವ ಏಕೈಕ ಮಾರ್ಗ, ಎಲ್ಲರಲ್ಲೂ ಇರುವ ಆತ್ಮ, ಆತ್ಮವನ್ನು ಆರಾಧಿಸಿದರೆ ಭಗವಂತನನ್ನು ಆರಾಧಿಸಿದಂತೆಯೇ! ಆತ್ಮವನ್ನು ದರ್ಶಿಸಿದರೆ ಭಗವಂತನನ್ನು ದರ್ಶಿಸಿದಂತಯೆ. ಆತ್ಮನನ್ನು ಆರಾಧಿಸಬೇಕೆಂದರೆ ಇರುವ ಒಂದಾನೊಂದು ಮಾರ್ಗವೆ "ಆನಾಪಾನಸತಿಧ್ಯಾನ" ಈ ಧ್ಯಾನ ಮಾಡುವುದೆಂದರೇನೆ ಭಗವಂತನನ್ನು ಆರಾಧಿಸುವುದು. ಆದ್ದರಿಂದ ಎಲ್ಲರೂ ಧ್ಯಾನವನ್ನು ಮಾಡಿ ಭಗವಂತನನ್ನು ಆರಾಧಿಸಿ ಪುನೀತರಾಗೋಣ.



**"ಧ್ಯಾನಸ್ಥಿತಿಯಿಂದ ಸಮಾಧಿಸ್ಥಿತಿಗೆ ಅಥವಾ**
**ಶೂನ್ಯಸ್ಥಿತಿಗೆ ಸೇರಿಕೊಳ್ಳಬೇಕೆಂದರೆ**
**ಸಾಧನೆಯಿಂದಲೇ ಸಾಧ್ಯ. ಒಂದೊಂದು ಸಾರಿ**
**ಕಠಿಣ ಸಾಧನೆ ಕೂಡಾ ಅಗತ್ಯ.**
**ಎಷ್ಟು ಧ್ಯಾನ ಸಾಧನೆಗಳಿದ್ದರೂ**
**ಸರಿಯಾದ ಸಾಧನೆಯೆಂದರೆ ನಮ್ಮಲ್ಲಿರುವ**
**"ಶ್ವಾಸವನ್ನು ಗಮನಿಸುವುದೇ".**

**- ಭಗವಾನ್ ಬುದ್ಧ**

# 6. ಮಾನವನು ಮಾಡುವುದು! ಭಗವಂತನು ನೋಡುವುದು!

| ಮಾನವನು ಮಾಡುವುದು! | ಭಗವಂತನು ನೋಡುವುದು! |
|---|---|
| 1. ಮಾನವನು ವಿಗ್ರಹ, ಫೋಟೋಗಳೇ ಭಗವಂತನೆಂದು ಅಲ್ಲಿಯೇ ಪವಿತ್ರ ವಾಗಿರುತ್ತಾನೆ ಅಲ್ಲಯೇ ಬಯಕೆಗ ಳನ್ನು ಹೇಳಿಕೊಳ್ಳುತ್ತಾನೆ. | 1. ಮಾನವನು ಎಲ್ಲಾ ಕಡೆಯಲ್ಲಿಯೂ ಪವಿತ್ರನಾಗಿದ್ದಾನೆಯೇ ಎಂದು ಭಗವಂತನು ನೋಡುತ್ತಾನೆ. |
| 2. ಮಾನವನು ಎಲ್ಲಾ ಬೇಕೆಂದು ಕೋರಿ ಕೊಳ್ಳುತ್ತಾನೆ | 2. ಕೊಟ್ಟಿದ್ದನು ಲೋಕಕ್ಕೆ ಹಂಚುತ್ತಿದ್ದಾ ನೆಯೇ? ಎಂದು ಭಗವಂತ ನೋಡುತ್ತಾನೆ |
| 3. ಮಾನವನು ತಾತ್ಕಾಲಿಕ ವಾದವು ಅಶಾಶ್ವತವಾದವುಗಳನ್ನು ಆಶಿಸಿ ಆರಾಧಿಸುತ್ತಾನೆ | 3. ಭಗವಂತನು ಶಾಶ್ವತವಾದವುಗಳನ್ನು ಸಂಪಾದಿಸು ಎಂದು ಹೇಳುತ್ತಾನೆ |
| 4. ಮಾನವನು ಎಲ್ಲರನ್ನು ದ್ವೇಷಿಸುತ್ತಾನೆ | 4. ಎಲ್ಲಾರನ್ನು ಪ್ರೀತಿಸುತ್ತಿರುವನೇ? ಎಂದು ಭಗವಂತನು ನೋಡುತ್ತಾನೆ |
| 5. ಮಾನವನು ಇತರಿಗೆ ಕೇಡನ್ನು ಮಾಡುತ್ತಾನೆ | 5. ಇತರಿಗೆ ಒಳ್ಳೆಯದು ಮಾಡುತ್ತಿರು ವನೇ? ಎಂದು ಭಗವಂತನು ನೋಡುತ್ತಾನೆ |
| 6. ಮಾನವನು ತನ್ನ ಪಾಪಗಳನ್ನು ಮಾಡುತ್ತಾನೆ ಅಂದರೆ ಎಲ್ಲರಿಗೆ ಕಷ್ಟ, ನಷ್ಟವನ್ನುಂಟು ಮಾಡುತ್ತಾನೆ | 6. ಎಲ್ಲರಿಗೆ ಒಳ್ಳೆಯದು ಮಾಡು ತ್ತಿರು ವನೆ ಎಂದು ಭಗವಂತನು ನೋಡು ತ್ತಾನೆ |
| 7. ಮನವನು ತನ್ನ ಪಾಪಕರ್ಮಗಳನ್ನು, | 7. ಸ್ವತಃ ಧ್ಯಾನ ಸಾಧನೆಯ ಮೂಲಕ |

| | |
|---|---|
| ಕಷ್ಟಗಳನ್ನು ತೊಲಗಿಸೆಂದು ಪ್ರಾರ್ಥನೆ ಮಾಡುತ್ತಾನೆ | ಮಾನವರು ತಮ್ಮ ಪಾಪಕರ್ಮಗಳನ್ನು ಕಷ್ಟಗಳನ್ನು ತೊಲಗಿಸಿ ಕೊಳ್ಳಬೆಕೆಂದು ಭಗವಂತನು ನೋಡುತ್ತಾನೆ. |
| 8. ಮಾನವನು ಆಸೆಪಡುತ್ತಾನೆ | 8. ಕೃಷಿ ಮಾಡುತ್ತಿರುವವನೇ? ಎಂದು ಭಗವಂತನು ನೋಡುತ್ತಾನೆ |
| 9. ಮಾನವನು ಕೋರಿಕೊಳ್ಳುತ್ತಾನೆ | 9. ಕೋರಿಕೊಳ್ಳದ್ದಿದ್ದರೂ ಕೆಲಸ ಮಾಡಿದರೆ ಸಾಕು, ಫಲವನ್ನು ಕೊಡೋಣವೆಂದು ಭಗವಂತನು ನೋಡುತ್ತಾನೆ |
| 10.ಮಾನವನು ಕೇಳಿಕೊಳ್ಳುತ್ತಾನೆ | 10. ಭಗವಂತನು ಸಾಧಿಸಿಕೊಳ್ಳಬೇಕೆಂದು ನೋಡುತ್ತಾನೆ |
| 11.ಮಾನವನು ಬೇಡಿಕೊಳ್ಳುತ್ತಾನೆ | 11. ಕಷ್ಟ ಪಡಬೇಕೆಂದು ಭಗವಂತನು ನೋಡುತ್ತಾನೆ |
| 12.ಮಾನವನು ಕಾಣೀಕೆಗಳನ್ನು ಕೊಡುತ್ತಾನೆ | 12. ಪ್ರೇಮ, ಸತ್ಯಾ ಧರ್ಮವನ್ನು ಪಾಲಿಸುತ್ತಿರುವವನೇ ಎಂದು ಭಗವಂತ ನೋಡುತ್ತಾನೆ |
| 13.ಮಾನವನು ಉದ್ಧರಿಸು ಎಂದು ಹೇಳುತ್ತಾರೆ | 13. ಉದ್ದರಿಸಿ ಕೊಳ್ಳಬೇಕೆಂಧು ಭಗವಂತನು ನೋಡುತ್ತಾನೆ |
| 14.ಮಾನವರು ಪೂಜೆ ಮಾಡುತ್ತಾರೆ | 14. ಒಳ್ಳೆಯ ಕೆಲಸಗಳನ್ನು ಮಾಡುತ್ತಿರುವನೇ ಎಂದು ನೋಡುತ್ತಾನೆ ಭಗವಂತನು |
| 15.ಮಾನವನು ಭಜನೆ ಮಾಡುತ್ತಾನೆ | 15. ಲೋಕಕ್ಕೆ ಸೇವೆ ಮಾಡುತ್ತಿರುವನೇ? ಎಂದು ಭಗವಂತನು ನೋಡುತ್ತಾನೆ |
| 16.ಮಾನವನು ಸ್ತೋತ್ರಗಳನ್ನು ಓದುತ್ತಾನೆ | 16. ಗುಣಗಳು ಹೇಗಿದೆ ಎಂದು ಭಗವಂತನು ನೋಡುತ್ತಾನೆ |
| 17.ಮಾನವನು ನಾಮವನ್ನು ಜಪಿಸುತ್ತಾನೆ | 17. ಪವಿತ್ರವಾಗಿ ಜೀವಿಸುತ್ತಿರುವನೇ? ಎಂದು ಭಗವಂತನು ನೋಡುತ್ತಾನೆ |

| | |
|---|---|
| 18.ಮಾನವನು ಮಡಿ, ಆಚಾರವೆಂದು ದೇಹವನ್ನು, ಬಟ್ಟೆಯನ್ನು ಶುಭ್ರ ಮಾಡುತ್ತಾನೆ | 18. ಮನಸ್ಸಿಬಲ್ಲಿರುವ ಮಲಿನವನ್ನು ಶುಭ್ರ ಮಾಡಿಕೊಂಡಿರುವನೇ ಎಂದು ಭಗವಂತನು ನೋಡುತ್ತಾನೆ |
| 19.ಮಾನವನು ತಲೆ ಮಂಡೆಯನ್ನು ಭೋಳಿಸಿಕೊಳ್ಳುತ್ತಾನೆ | 19. ಕೆಟ್ಟ ಆಲೋಚನೆಗಳನ್ನು ಬೋಳು ಮಾಡಿಕೊಂಡಿರುವನೇ? ಎಂದು ಭಗವಂತನು ನೋಡುತ್ತಾನೆ |
| 20.ಮಾನವನು ಕೆಲಸಗಳಿಗೆ ಪ್ರಾಮು ಖ್ಯತೆಯನ್ನು ಕೊಡುತ್ತಾನೆ | 20.ಆ ಕೆಲಸಗಳನ್ನು ಮಾಡಲು ಅವನ ಭಾವನೆ ಏನು? ಎಂದು ಭಗ ವಂತನು ನೋಡುತ್ತಾನೆ |
| 21.ಮಾನವನು ದೇಹವನ್ನು ಸುಂದರ ವಾಗಿ ಮಾಡಿಕೊಂಡು ಆಲಯಕ್ಕೆ ಹೋಗುತ್ತಾನೆ | 21. ಭಾವವು ಸುಂದರವಾಗಿದೇಯೇ? ಎಂದು ಭಗವಂತನು ನೋಡುತ್ತಾನೆ |
| 22.ಮಾನವನು ಭಾಹ್ಯ ಶುಧ್ಧಿಗೆ ಪ್ರಾಮು ಖ್ಯತೆಯನ್ನುಕೊಡುತ್ತಾನೆ | 22. ಅಂತರಂಗ ಶುದ್ಧವಾಗಿದೆಯೇ? ಎಂದು ಭಗವಂತನು ನೋಡುತ್ತಾನೆ |
| 23.ಮಾನವನು ರೂಪವನ್ನು ಸರಿ ಮಾಡಿಕೊಳ್ಳುತ್ತಾನೆ | 23. ಗುಣಗಳನ್ನು ಸರಿಮಾಡಿಕೊಂಡಿ ರುವನೇ? ಎಂದು ಭಗವಂತನು ನೋಡುತ್ತಾನೆ |
| 24. ಮಾನವನು ಎಲ್ಲರನ್ನು ಬೇರೆ ಬೇರೆಯಾಗಿ ನೋಡುತ್ತಾನೆ | 24.ಎಲ್ಲರನ್ನು ಒಂದೇ ರೀತಿಯಾಗಿ ನೋಡುತ್ತಿರುವನೇ? ಎಂದು ಭಗ ವಂತನು ನೋಡುತ್ತಾನೆ. |

# 7. “ಭಗವಂತನ ಅರಿವು ಮಾಡಿಕೊಳ್ಳಬೇಕು!

ಲೋಕದಲ್ಲಿ 2 ರೀತಿಯಾವರು ಇದ್ದಾರೆ. ಭಗವಂತನನ್ನು ಅರಿತ‘ಯೋಗಿಗಳು’ ಭಗವಂತನೆಂಬ ಅರಿವೆ ಇಲ್ಲದ ‘ಬೋಗಿಗಳು’ ಭಗವಂತನ ಬಗ್ಗೆ ಯಾರ ವರ್ತನೆ ಹೇಗೆ ಇರುತ್ತದೊ ನೋಡೋಣ.

| ಭಗವಂತನೆಂದರೆ | ಅರಿವು ಇಲ್ಲದವನು | ಅರಿವು ಮಾಡಿಕೊಂಡವನು! |
|---|---|---|
| 1. ಭಗವಂತನು ನಿರಾಕಾರನು | 1. ಆಕಾರವಿಲ್ಲದ ಭಗವಂತನನ್ನು ಆರಾಧಿಸಲು ಅವಕಾಶ ಇಲ್ಲದ ಕಾರಣ, ಏನೋಒಂದು ರೂಪವನ್ನು ಆರಾಧಿಸುತ್ತಾನೆ | 1. ನಿರಾಕಾರ ಭಗವಂತನು, ಆತ್ಮಸ್ವರೂಪನಾಗಿ ತನ್ನಲ್ಲಿಯೇ ಇದ್ದಾನೆ. ಆದ್ದರಿಂದ ಧ್ಯಾನದ ಮೂಲಕ ಆತ್ಮನ ಮೇಲೆ ದೃಷ್ಟಿಯಿಟ್ಟು ಆರಾಧಿಸುತ್ತಾನೆ. |
| 2. ನಾಮರಹಿತನು (ಯಾವಹೆಸರಿಲ್ಲದವನು) | 2. ಹೆಸರಿಲ್ಲದವನು ಭಗವಂತನಿಗೆ ಏನೋ ಹೆಸರು ಇಟ್ಟು ಪೂಜಿಸುತ್ತಾ ಪ್ರಾರ್ಥಿಸುತ್ತಾನೆ, ಜಪಿಸುತ್ತಾ ಭಗವಂತನನ್ನು ಆರಾಧಿಸುತ್ತಿದ್ದೇನೆ ಎಂದು ಅಂದುಕೊಳ್ಳುವನು | 2. ಹೆಸರಿಲ್ಲ ಭಗವತ್ ಸ್ವರೂಪನಾದ ಆತ್ಮದ ಮೇಲೆ ಧ್ಯಾನದ ಮೂಲಕ ದೃಷ್ಟಿ ಇಟ್ಟು ಸರಿಯಾದ ಆರಾಧನೆ ಮಾಡುತ್ತಾನೆ |
| 3. ಸರ್ವಾಂತರ್ಯಾಮಿ (ಸರ್ವತ್ರ, ಸರ್ವರಲ್ಲಿ ಅಂದರೆ ಮಾನವನರಲ್ಲಿ | 3. ಭಗವಂತನು ಆಲಯದಲ್ಲಯೇ ಇದ್ದಾನೆಂದುಕೊಂಡು ಅಲ್ಲಿ ಮಾತ್ರವೆ | 3. ಭಗವಂತನು ಎಲ್ಲರಲ್ಲೂ, ಎಲ್ಲಾ ಜೀವಿಗಳಲ್ಲಿ ಇರುವನೆಂಬ ಅರಿವಿನಿಂದ |

| ಭಗವಂತನೆಂದರೆ | ಅರಿವು ಇಲ್ಲದವನು | ಅರಿವು ಮಾಡಿಕೊಂಡವನು! |
|---|---|---|
| ಸಮಸ್ತ ಜೀವಿಗಳಲ್ಲಿ ಅಂತರ್ಯಾಮಿಯಗಿ ಇರುವವನು) | ಪವಿತ್ರವಾಗಿರುತ್ತಾನೆ | ಎಲ್ಲವನ್ನು, ಎಲ್ಲವನ್ನು ಪ್ರೀತಿಸುತ್ತಾನೆ |
| 4. ಅನಂತ ಶಕ್ತಿ ಸ್ವರೂಪನು | 4. ಭಗವಂತನನ್ನು ಆಲಯಕ್ಕೆ, ಚರ್ಚಿಗೆ, ಮಸೀದಿಗೆ ಪರಿಮಿತಿ ಮಾಡುತ್ತಾರೆ | 4. ಭಗವಂತನ ಶಕ್ತಿ ಅಪಾರ ಎಂದು ತಿಳಿದುಕೊಂಡು ಇರುವವನು ಆದ್ದರಿಂದ ಎಲ್ಲಾಕಡೆಯಲ್ಲಿ ಪವಿತ್ರವಾಗಿ ಇರುತ್ತಾನೆ |
| 5. ಅಖಂಡವಾದ ತೇಜಸ್ಸು ಇರುವವನು | 5. ದರ್ಶಿಸುವುದಕ್ಕೆ ಬೌತಿಕ ವಾದ ಕಣ್ಣುಗಳಿಂದ ಪ್ರಯತ್ನಿಸುತ್ತಾನೆ ನೋಡಲಾರ | 5. ದರ್ಶಿಸುವುದಕ್ಕೆ ಧ್ಯಾನ ಮಾಡುತ್ತಾನೆ. ಅಂತರ್ ನೇತ್ರ ಅಂದರೆ ದಿವ್ಯಚಕ್ರುವಿನಿಂದ ನೋಡ ಬಲ್ಲನು. |
| 6. ರಾಗದ್ವ್ಯೆಷಗಳಿಲ್ಲದವನು (ಅನುರಾಗ, ದ್ವೇಷವಿಲ್ಲದವನು) | 6. ಭಗವಂತನನ್ನು ಪೂಜಿಸದ್ದಿದ್ದರೂ, ಪ್ರಾರ್ಥಿಸದ್ದಿದ್ದರೂ, ನಮಾಜು ಮಾಡದ್ದಿದ್ದರೂ, ಭಜನೆ ಮಾಡದ್ದಿದ್ದರೂ ಕೋಪಗೋಳ್ಳುತ್ತಾನೆಂದು ಭಯಪಡುತ್ತಾರೆ ಭಗವಂತನು ಮೆಚ್ಚುವ ಗುಣಗಳಿಗೆ ಪ್ರಾಮುಖ್ಯತೆ ಕೊಡುವುದಿಲ್ಲ | 6. ಭಗವಂತನಿಗೆ ರಾಗದ್ವೇಷಗಳಿಲ್ಲ, ಆದ್ದರಿಂದ ಪೂಜಿಸಿದವರನ್ನು ಒಂದು ರೀತಿಯಾಗಿ ಪೂಜಿಸದವರನ್ನು ಒಂದು ರೀತಿಯಲ್ಲಿ ನೋಡನು ಎಂದು ಅರಿವು ಮಾಡಿಕೊಳ್ಳುತ್ತಾನೆ ಆದ್ದದರಿಂದ ಪೂಜೆಗಿಂತ ಭಗ ವಂತನು ಮೆಚ್ಚುಗೆಯ ಗುಣಗಳಿಗೆ ಪ್ರಾಮುಖ್ಯತೆ ಕೊಡುತ್ತಾನೆ |

| ಭಗವಂತನೆಂದರೆ | ಅರಿವು ಇಲ್ಲದವನು | ಅರಿವು ಮಾಡಿಕೊಂಡವನು! |
|---|---|---|
| 7. ಸಚ್ಚಿಧಾನಂದ ಸ್ವರೂಪನು (ನಿತ್ಯಂ ಆನಂದಲ್ಲಿರುವವನು) | 7. ಭಗವಂತನು ಆನಂದ ಸ್ವರೂಪನು ತಾನು ಮಾನವನಾದ್ದರಿಂದ ದುಃಖ ಉಂಟುಗುತ್ತದೆ ಎಂದು ಅಂದುಕೊಳ್ಳುವನು. | 7. ಆ ಸಚ್ಚಿದಾನಂದ ಸ್ವರೂಪನು ತಾನೆ ಎನ್ನುವ ತಿಳುವಳಿಕೆಯಿಂದ ಧ್ಯಾನವನ್ನು ಮಾಡುತ್ತಾನೆ ನಿತ್ಯವು ಆನಂದದಿಂದ ಇರುತ್ತಾನೆ |
| 8. ದಯಾಮಯನು, ಕರುಣಾಮಯನು, ಪ್ರೇಮ ಸ್ವರೂಪನು | 8. ಭಗವಂತನು ದಯಾಮಯಾನು, ಕರುಣಾಮಯನು, ಪ್ರೇಮಸ್ವರೂಪನು ಆದ್ದರಿಂದ ಎಷ್ಟೇ ಪಾಪಗಳನ್ನು ಮಾಡಿದರೂ ಕ್ಷಮಿಸುತ್ತಾನೆಂದು ಪಾಪಗಳನ್ನು ಮಾಡುತ್ತಾನೆ ಪಾಪಗಳನ್ನು ಕ್ಷಮಿಸು ಎಂದು ಪೂಜೆಗಳು, ಪ್ರಾರ್ಥನೆಗಳು, ನಮಾಜು ಮಾಡುತ್ತಾನೆ. ಜೀವ ಹಿಂಸೆ ಮಾಡುತ್ತಾನೆ ಮಾಂಸ ಭಕ್ಷಣೆ ಮಾಡುತ್ತಾನೆ. ಮಾಡಿದ ಪಾಪಗಳಿಗೆ ಬರುವ ರೋಗಗಳಿಂದ ದುಃಖದಿಂದ ಜೀವಿಸುತ್ತಾನೆ | 8. ಭಗವಂತನು ಕರುಣಾಮಯನೇ ಆಲ್ಲ ಪಾಪಾಗಳನ್ನು ಮಾಡಿದವರನ್ನು ಇತರ ಜೀವಿಗಳಿಗೆ ಹಿಂಸೆ ಮಾಡುವವರನ್ನು ಕಠಿಣವಾಗಿ ವ್ಯವಹರಿಸುವದೇ ಅಲ್ಲದೇ, ಶಿಕ್ಷಿಸುತ್ತಾನೆ ಎಂಬ ಅಂದರೆ "ಭಗವಂತನು ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ" ಮಾಡುತ್ತಾನೆ. ಎಂಬ ಅರಿವಿನಿಂದ ಪಾಪಗಳನ್ನು ಮಾಡನು, ಜೀವಹಿಂಸೆ ಮಾಡುವುದಿಲ್ಲ. ಮಾಂಸ ಭಕ್ಷಣೆ ಮಾಡುದಿಲ್ಲ ಆನಂದವಾಗಿ ಜೀವಿಸುತ್ತಾನೆ. |
| 9. ನಿರ್ಗುಣನು (ಯಾವ ಗುಣಗಳು ಇಲ್ಲದನು) | 9. ಭಗವಂತನಿಗೆ ಗುಣಗಳಿವೆಂದು | 9. ಭಗವಂತನು ಗುಣತೀತನೆಂಬ |

| ಭಗವಂತನೆಂದರೆ | ಅರಿವು ಇಲ್ಲದವನು | ಅರಿವು ಮಾಡಿಕೊಂಡವನು! |
|---|---|---|
| | ಕೊಳ್ಳುತ್ತಾನೆ ಆರಾಧಿಸಿದರೆ ಬಯಕೆಗಳನ್ನು ತೀರಿಸುತ್ತಾನೆಂದು ಕೊಳ್ಳುತ್ತಾರೆ. ಪೂಜೆಗಳನ್ನು ಮಾಡುತ್ತಾನೆ. ಬಯಕೆಗಳು ಕೋರುತ್ತಾ ಇರುತ್ತಾನೆ. | ತಿಳುವಳಿಕೆಯಿಂದ ಮಾಡಬೇಕಾದದ್ದು ಮಾಡಿದರೆ ಪಡೆಯಬೇಕಾದ್ದನ್ನು ಪಡೆಯುತ್ತೇನೆ ಎಂದು ಧ್ಯಾನ ಸಾಧನೆ ಮಾಡುವುದಕ್ಕೆ ಪ್ರಾಮುಖ್ಯತೆ ಕೊಡುತ್ತಾನೆ ಕೋರಿಕೆಗಳನ್ನು ಕೋರುವುದಿಲ್ಲ |
| 10. ಆತ್ಮಸ್ವರೂಪನು (ಎಲ್ಲಿ ಜೀವಿಗಳಲ್ಲಿ ಆತ್ಮರೂಪದಲ್ಲಿದ್ದಾನೆ) | 10. ಭಗವಂತನು ಬೇರೆ ಇದ್ದಾನೆಂದು ಭಾವಿಸಿ ಇತರರು, ಇತರ ಜೀವಿಗಳು ಬೇರೆಬೇರೆ ಎಂದುಕೊಂಡು ಇತರರನ್ನು ದ್ವೇಷಿಸುತ್ತಾನೆ, ಮೋಸ ಮಾಡುತ್ತಾನೆ, ಹಿಂಸೆ ಕೊಡುತ್ತಾನೆ, ಅವಮಾನಿಸುತ್ತಾನೆ. | 10. ಎಲ್ಲಾರಲ್ಲೂ, ಎಲ್ಲಾ ಜೀವಿಗಳಲ್ಲಿ ಇರುವುದು ಆ ಭಗವನ್ ಸ್ವರೂಪವೇ ಎನ್ನುವ ಅರಿವಿನಿಂದ ಯಾರನ್ನೂ ದ್ವೇಷಿಸುವುದಿಲ್ಲ, ಮೋಸ ಮಾಡಲಾರೆ, ಅವಮಾನಿಸಲಾರ, ಹಿಂಸಿಸಲಾರನು. |
| 11. ಆದಿಮದ್ಯಂತ ರಹಿತನು (ಆದಿ ಮಧ್ಯ, ಅಂತ್ಯವಿಲ್ಲದವನು) | 11. ತಿಳುವಳಿಕೆ ಇಲ್ಲದೆ ವಿಗ್ರಹ ಗಳನ್ನು ಪ್ರತಿಮೆಗಳನ್ನು, ಗುಡಿಗಳನ್ನು ಪೂಜಾಮಂದಿರಗಳನ್ನು ನಿರ್ಮಿಸಿ, ಅಲ್ಲಿಗೆ ಪರಿಮಿತ ಮಾಡಿ, ಅಲ್ಲಿ ಮಾತ್ರವೇ ಆರಾಧಿಸುತ್ತಾನೆ | 11. ಸರ್ವತ್ರ ಆತನು ಇರುವಿಕೆಯನ್ನು ತಿಳಿದು ಎಲ್ಲಾ ಕಡೆಯು ಧ್ಯಾನಿಸುತ್ತಾನೆ |

| ಭಗವಂತನೆಂದರೆ | ಅರಿವು ಇಲ್ಲದವನು | ಅರಿವು ಮಾಡಿಕೊಂಡವನು! |
| --- | --- | --- |
| 12. ಸರ್ವರಿಗೂ ಶಕ್ತಿ ಪ್ರದಾತ | 12. ಅರಿವಿಲ್ಲದೇ ಏನು ಮಾಡಿದರೂ ಯಾವುದಾದರೂ ವಿಜಯವನ್ನು ಸಾಧಿಸಿದರೂ ನಾನೇ ಮಾಡಿದೆ, ನಾನೇ ಸಾಧಿಸಿದೆ ಎಂದು ಅಹಂಕಾರದಿಂದ ಬಿರ್ರನೆ ಬೀಗುತ್ತಾನೆ | 12. ಎಲ್ಲಾ ಆತನೆ ಆದ್ದರಿಂದ ಗರ್ವಅಹಂಕಾರ ಇರುವುದಿಲ್ಲ. |
| 13. ಎಲ್ಲಾ ತಾನಾಗಿ ಇರುವವನು | 13. ನನ್ನದು, ನಮ್ಮದು, ಎಲ್ಲವುದರ ಮೇಲೆ ಮಮಕಾರ ಬೆಳೆಸಿಕೊಳ್ಳುತ್ತಾನೆ. | 13.ನನ್ನದು ಇಲ್ಲ, ನಮ್ಮದು ಇಲ್ಲ ಎಂದು ಎಲ್ಲಾ ಪರಬ್ರಹ್ಮ ಎಂದು ಯಾವುದರ ಮೇಲೆ ಮಮಕಾರ ಬೆಳೆಸಿಕೊಳ್ಳುವುದು ಇಲ್ಲ. |
| 14. ನಿಶ್ಚಿಲನು (ಚಲಿಸದವನು) | 14. ತಾನು ಬೇರೆ, ಭಗವಂತನು ಬೆರೆ ಅಂದುಕೊಳ್ಳುವುದರಿಂದ ಏನು ನಡೆದರು ತತ್ತರಿಸುತ್ತಾನೆ | 14. "ಅಹಂ ಬ್ರಹ್ಮಾಸ್ಮಿ" ಅಂದರೆ ತಾನೆ ಆ ಪರಬ್ರಹ್ಮವೆಂದು ಅರಿವು ಮಢಿಕೊಂಡವನು ಆದ್ದರಿಂದ ಎನು ನಡೆದರು ಭಯಪಡೆನು ತತ್ತರಿಸನು, |
| 15. ಶಾಶ್ವತವಾದವನು (ಹುಟ್ಟು–ಸಾವುಗಳಿಲ್ಲದವನು) | 15. ತಾನು ಬೇರೆ ಅಂದುಕೊಳ್ಳುವುದರಿಂದ ಸತ್ತು ಹೋಗುತ್ತೇನೆಂದು ಕೊಂಡು ಸಾವಿಗೆ ಭಯ ಬೀಳುತ್ತಾನೆ | 15.ಆತ್ಮ ತತ್ವವನ್ನು ತಿಳಿದುಕೊಂಡುವ ನಾಗಿದ್ದರಿಂದ ತಾನೆ ಶಾಶ್ವತವಾದ ಭಗವಂತನು ಎನ್ನುವ ಅರಿವಿನಿಂದ ಭಯಬೀಳುವುದಿಲ್ಲ |

| ಭಗವಂತನೆಂದರೆ | ಅರಿವು ಇಲ್ಲದವನು | ಅರಿವು ಮಾಡಿಕೊಂಡವನು! |
|---|---|---|
| 16. ವರ್ಣಿಸಲಾಗದವನು | 16. ಆತನನ್ನು ಕೀರ್ತಿಸಲು ಸ್ತೋತ್ರಿಸಲು ಪ್ರಯತ್ನಿಸುತ್ತಾನೆ | 16. ಆತನನ್ನು ಯಾರೂ ವರ್ಣಿಸಲಾರರು, ಕೀರ್ತಿಸಲಾರರು ಆದ್ದರಿಂದ ಅದನ್ನು ಬಿಟ್ಟು ಆತನ ಅನುಭೂತಿಯನ್ನು ಹೊಂದಲು ಧ್ಯಾನವನ್ನು ಮಾಡುತ್ತಾನೆ |
| 17. ದರ್ಶಿಸಲಾರರು | 17. ಪ್ರತ್ಯಕ್ಷವಾಗಿ ದರ್ಶಿಸಲು ಪ್ರಯತ್ನಿಸುತ್ತಾನೆ. ಆತುರ ಪಡುವನು, ಎಷ್ಟು ಜನ್ಮ ಎತ್ತಿದರೂ ವಿಫಲನಾಗುತ್ತಾನೆ | 17.ಆಕಾರವು ಇಲ್ಲದವನನ್ನು ದರ್ಶಿಸಲಾರರು ಆದ್ದರಿಂದ ಅನುಭೂತಿಯನ್ನು ಹೊಂದಲು ಧ್ಯಾನವನ್ನು ಮಾಡುತ್ತಾನೆ. |
| 18. ಅಲೇತನು | 18. ಭಗವಂತನೆಂದರೆ ತಿಳಿದವನಂತೆ ವರ್ತಿಸುತ್ತಾನೆ | 18.ಆತನನ್ನು ತಿಳಿದು ಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಧ್ಯಾನ ಸಾಧನ ಮಾಡುತ್ತಾನೆ ಹೊರೆತು ಏನು ಆಲೋಚಿಸುವುದಿಲ್ಲ. |
| 19. ಸರ್ವವ್ಯಾಪಿ (ಸರ್ವ ಜೀವಿಗಳಲ್ಲಿ ವ್ಯಾಪಿಸಿ ಇರುವವನು) | 19. ಅರಿವು ಇಲ್ಲವಾದ್ದರಿಂದ ಇತರರ ಕಾಲಿಗೆ ಮುಗಿಯುತ್ತಾನೆ | 19. ತನ್ನನ್ನು ಸೇರಿಸಿ ಎಲ್ಲರೂ ಆತನ ಸ್ವರೂಪರೆ ಆದ್ದರಿಂದ ಯಾರ ಕಾಲಿಗೆ ಮುಗಿಯುವುದಿಲ್ಲ. |

| ಭಗವಂತನೆಂದರೆ | ಅರಿವು ಇಲ್ಲದವನು | ಅರಿವು ಮಾಡಿಕೊಂಡವನು! |
|---|---|---|
| 20. ಜಗನ್ನಾಟಕ ಸೂತ್ರಧಾರನು (ಈ ಪ್ರಪಂಚವನ್ನುವ ನಾಟಕವನ್ನು ನಡೆಸುತ್ತಿರುವವನು) | 20. ತಿಳುವಳಿಕೆ ಇಲ್ಲದಾದ್ದರಿಂದ ತಾನು ಈ ಜಗತ್ತೆನ್ನುವ ನಾಟಕದಲ್ಲಿ ಒಂದು ಪಾತ್ರ ಪೋಷಿಸುತ್ತಿದ್ದೇನೆ ಎಂದು ಭಾವಿಸುವುದಿಲ್ಲ ಕುಟುಂಬದಲ್ಲಿ ಯಾರು ದೂರವಾದರೂ ದುಃಖಿಸುತ್ತಾನೆ ನೋಡುವುದೇಲ್ಲಾ ನಿಜವೆಂದುಕೊಳ್ಳುತ್ತಾನೆ ತನಗಿರುವುದ್ದೇಲ್ಲಾ ನೋಡಿ, ಸಂಭ್ರಮ ಪಡುತ್ತಾನೆ. | 20. ಇದೆಲ್ಲಾ ಭಗವಂತನು ಆಡಿಸುವ ನಾಟಕ ಅದರಲ್ಲಿ ತಾನು ತನ್ನ ಪಾತ್ರ ಪೋಷಿಸಲು ಮಾತ್ರವೆ ಬಂದಿದ್ದೇನೆ ಎಂದು ತಿಳಿದು ಕೊಳ್ಳುತ್ತಾನೆ. ಏನು ಸಂಭವಿಸಿದರೂ ದುಃಖಿಸುವುದಿಲ್ಲ, ಯಾವುದಕ್ಕೂ ಸಂಭ್ರಮಿಸುವುದಿಲ್ಲ ಮಾಡುವುದಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಾನೆ. ಫಲಿತಾಂಶವನ್ನು ಆಶಿಸುವುದಿಲ್ಲ. |

# ೮. ನಿಜವಾದ ದೇವಾಲಯ

ದೇವರ ಆಲಯಕ್ಕೆ ಹೋಗುತಿದ್ದೇವೆಂದು ಮಕ್ಕಳು ಹೇಳುತ್ತಿರುತ್ತಾರೆ. ಹಾಗೇ ದೇವರು ಆಲಯಗಳೆನ್ನುತ್ತಾ, ಎಲ್ಲೆಲ್ಲಿಗೂ ಹೋಗುತ್ತೇವೆ, ಎಷ್ಟೋ ಕಡೆ ತಿರುಗುತ್ತೇವೆ. ಆದರೆ ನಿಜವಾದ ದೇವಾಲಯ ಯಾವುದೋ ತಿಳಿದುಕೊಳ್ಳೋಣ.

ಆಲಯವೆಂದರೆ ಇರುವ ಪ್ರದೇಶ, ದೇವಾಲಯವೆಂದರೆ ದೇವರು ಇರುವ ಪ್ರದೇಶ. "ನಿಜವಾದ ದೇವರು ಇರುವುದೇ ನಿಜವಾದ ದೇವಾಲಯ" ಆದ್ದರಿಂದ ದೇವರು ಎಲ್ಲಿದ್ದಾನೊ ಮೊದಲು ತಿಳಿದುಕೊಳ್ಳಬೇಕು ಆತನಿರುವ ಆಲಯಕ್ಕೆ ನಾವು ಹೋಗುಬೇಕಾಗಲಿ, ದೇವರು ಇಲ್ಲದ ಆಲಯಕ್ಕೆ ಹೋದರೆ ಪ್ರಯೋಜನವೇನು?

ನಿಜವಾದ ದೇವಾಲಯ, ಯಾವುದೊ ತಿಳಿದುಕೊಳ್ಳಬೇಕೆಂದರೆ ಮೊದಲು ದೇವರು ಯಾರು? ಹೇಗೆ ಇರುತ್ತಾನೆ? ಎಲ್ಲಿ ಇರುತ್ತಾನೆ? ತಿಳಿದುಕೊಳ್ಳಬೇಕು. ಭೂಮಿಯ ಮೇಲೆ ದೇವರನ್ನು ಗುರುತಿಸಲು ಇರುವ ಮಾರ್ಗ ಆತನು ನಮಗೆ ಲಭ್ಯವಾಗುವ ಅವಕಾಶ ಒಂದೇ. ಆತನು ಎಲ್ಲರಲ್ಲೂ ಆತ್ಮಸ್ವರೂಪದಲ್ಲಿ ಇದ್ದಾನೆ. ಇದೇ ವಿಷಯ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಭಗವಾನನು ಹೇಳಿದ್ದಾನೆ. ಅಂದರೆ ದೇಹದಲ್ಲಿರುವ ಆತ್ಮನೇ ದೇವರೆಂದು ತಿಳಿಯುತ್ತದೆ. ಆದ್ದರಿಂದ "ಆತ್ಮವಿರುವ ದೇಹವೆ ನಿಜವಾದ ದೇವಾಲಯ. ಆದ್ದರಿಂದ ಆದಿ ಶಂಕರಾಚಾರ್ಯರು "ದೇಹವೇ ದೇವಾಲಯ, ಜೀವನೇ ದೇವರು' ಎಂದಿದ್ದಾರೆ.

ದೇವರು ಹೊರಗಿಲ್ಲ. ಈ ಭೌತಿಕ ಕಣ್ಣುಗಳಿಂದ ದೇವರನ್ನು ನೋಡಲಾರೆವು. ದೇವರಿಗೆ ರೂಪವಿಲ್ಲ ಆದ್ದರಿಂದ ಬಹಿರ್ಮುಖವಾಗಿ ಹೊರೆಗೆ ಹುಡುಕುವುದಲ್ಲಾ ತಿರುಗುವುದಲ್ಲ ಅಂತರ್ಮುಖವಾಗಿ ಅಂತರಂಗದಲ್ಲಿ ಹುಡುಕಬೇಕು. ಅಂದರೆ ಅಂತರ್ಮುಖರಾಗಬೇಕು.

ಇದೇ ಲಲಿತ ಸಹಸ್ರದಲ್ಲಿ ಕೊಡಲ್ಪಟ್ಟಿರುವ ಸಂದೇಶ "ಅಂತರರ್ಮುಖ ಸಮಾರಾಧ್ಯ, ಬಹಿರ್ಮುಖನ ದುರ್ಲಭ", ಅಂದರೆ "ಅಂತರಂಗದಲ್ಲಿಯೇ ನಾನು

ಕಾಣಿಸುತ್ತೇನೆ ಆಗಲಿ ಹೊರಗಡೆ ಅಲ್ಲ" ಆದ್ದರಿಂದ ನಾವು ನಮ್ಮ ದೇಹದೊಳಕ್ಕೆ ಪ್ರವೇಶಿಸಿದರೆ ದೇವಾಲಯದಲ್ಲಿ ಪ್ರವೇಶಿಸಿದಂತೆಯೇ.

"ಶ್ವಾಸದ ಮೆಲೆ ಗಮನ" ಇರಿಸುವುದರಿಂದ ಮನಸ್ಸನ್ನು ಪರಿಪರಿ ವಿಧಗಳಾಗಿ ಬಾಹ್ಯ ಪ್ರಪಂಚದ ಮೇಲೆ, ಪ್ರಾಚಂಚಿಕ ವಿಷಯಗಳ ಮೇಲೆ ಹೋಗದಂತೆ ನಿಶ್ಚಲವಾಗಿ, ನಿರ್ಮಲವಾಗಿ ಇರಿಸಿದರೆ ದೇವರ ಮಂದಿರದಲ್ಲಿ ಇರುತ್ತೇವೆ, ದೇವರೊಂದಿಗೆ ಇರುತ್ತೇವೆ. ಹಾಗೇ ಇರುತ್ತಾ ಇರುತ್ತಾ ಕೊನೆಗೆ ಆ ದೇವರ ದರ್ಶನ ಎಂದರೆ 'ಆತ್ಮದರ್ಶನ' ಕೂಡಾ ಆಗುತ್ತದೆ, ಆಗ ನಮ್ಮ ಸಮಸ್ತ ಪಾಪಾಗಳು ದಗ್ಧವಾಗಿ ಮುಕ್ತಿ ಹೊಂದುತ್ತೇವೆ. ಜನ್ಮವನ್ನು ಧನ್ಯಮಾಡಿಕೊಳ್ಳುತ್ತೇವೆ "ಜೀವನ್ಮುಕ್ತರಾಗುತ್ತೇವೆ".

ಆದ್ದರಿಂದ ದೇವಾಲಯ ಎಲ್ಲಿಯೋ ಇಲ್ಲ "ಪವಿತ್ರವಾದ ನಮ್ಮ ದೇಹವೇ ಸತ್ಯವಾದ, ನಿಜವಾದ, ದೇವಾಲಯವೆಂದು ತಿಳಿದುಕೊಳ್ಳಬೇಕು. ಅದನ್ನು ಪವಿತ್ರವಾಗಿ ಇಟ್ಟುಕೊಳ್ಳಬೇಕು ಮಧ್ಯ, ಮಾಂಸ, ಜಂತುಗಳ ಶವಗಳನ್ನು ಹಾಕಿ ಅಪವಿತ್ರ ಮಾಡಕೂಡದು ಧ್ಯಾನವನ್ನು ಮಾಡಬೇಕು.

## ಪಿರಮಿಡ್ ಧ್ಯಾನಿಗಳ 18 ಆದರ್ಶಗಳು

1. ಸರಿಯಾದ ಧ್ಯಾನ. ಅಂದರೆ ಅನಾಪಾನಸತಿ ಧ್ಯಾನ ಕ್ರಮವನ್ನು ತಪ್ಪದೆ ಮಾಡಬೇಕು ಅನಾಪಾನಸತಿ ಧ್ಯಾನವನ್ನು ಎಲ್ಲರಿಂದಲೂ ಮಾಡಿಸಬೇಕು.
2. ಆತ್ಮ ವಿಜ್ಞಾನ ಪುಸ್ತಕಗಳನ್ನು ವಿಸ್ತಾರವಾಗಿ ಓದಬೇಕು. ಉದಾಹರಣೆಗೆ ಸ್ವಾಮಿ ರಾಮ, ಯೋಗಾನಂದ ಪರಮಹಂಸ, ಓಷೋ, ಲೋಬ್ ಸಾಂಗ್ ರಾಂಪಾ, ಕಾಸ್ಟನೇಡಾ, ಜೈನ್ ರಾಬರ್ಟ್ಸ್, ರಿಚರ್ಡ್‌ಬಾಕ್, ಅನಿಬೇಸೆಂಟ್, ಲಿಂಡಾ ಗುಡ್ ಮಾನ್, ದೀಪಕ್ ಚೋಪ್ರಾ, ಬ್ರಯಾನ್ ವೈಸ್, ಸಿಲ್ವಿಯಾ ಬ್ರೌನ್, ಬಾರ್ಬರಾ ಮಾರ್ಸಿನ್ಯಾಕ್ ಮೊದಲಾದ ಮಾಸ್ಟರ್‌ಗಳ ಅದ್ಭುತ ಗ್ರಂಥಗಳು.
3. ಧ್ಯಾನದಲ್ಲಿ ಆಗುವ ಆನುಭವಗಳನ್ನು ಸಹಧ್ಯಾನಿಗಳೊಂದಿಗೆ ಖಂಡಿತವಾಗಿ ಹಂಚಿಕೊಳ್ಳಬೇಕು.
4. ಸಾಧ್ಯವಾದಷ್ಟು ಮೌನವಾಗಿರಬೇಕು.
5. ಪೌರ್ಣಮೆ ದಿನಗಳಲ್ಲಿ ಧ್ಯಾನವು ಖಡ್ಡಾಯ. ಸಾಧ್ಯವಾದಷ್ಟು ಸಾಮೂಹಿಕವಾಗಿ.
6. ಅವಕಾಶ ಇರುವ ಕಡೆ ಪಿರಮಿಡ್ ಶಕ್ತಿಯನ್ನು ಯಥೇಚ್ಚವಾಗಿ ಉಪಯೋಗಿಸಿ ಕೊಳ್ಳಬೇಕು

7. ಔಷಧಿಗಳನ್ನು, ವೈಧ್ಯರನ್ನು ಮರೆತು ಬಿಡಿ ಸ್ವಯಂ ಧ್ಯಾನ ಶಕ್ತಿಯಿಂದ ಯಾರನ್ನು ಅವರೇ ಸ್ವಸ್ಥತೆ ಮಾಡಿಕೊಳ್ಳಬೇಕು

8. ಮಾಂಸಾರವನ್ನು ಮುಟ್ಟಬೇಡಿ! ಕೋಳಿ ಮೊಟ್ಟೆಯು ಸಹಿತ ನಿಷಿದ್ಧ! ಶಾಖಾಹಾರದಲ್ಲಿಯೂ ಪರಿಮಿತ ಆಹಾರವೇ ಯುಕ್ತವಾದದ್ದು.

9. ಪ್ರಕೃತಿಯೊಂದಿಗೆ ಸಹಜೀವನ ನಡೆಸುತ್ತಾ ಇರಬೇಕು. ಅಡವಿಗಳಲ್ಲಿ, ವನಗಳಲ್ಲಿ ವಿಹಾರ ಯಾತ್ರೆಗಳು ಟ್ರಕ್ಕಿಂಗ್ ಗಳು ಅಧಿಕವಾಗಿ ಮಾಡಬೇಕು.

10. ಆಧ್ಯಾತ್ಮಿಕತೆಯಲ್ಲಿ ಪ್ರತ್ಯೇಕ ಪ್ರತ್ಯೇಕ ವೇಷಧಾರಣೆ ನಾಮಧಾರಣೆಗಳು ಇಲ್ಲ ! ನಾಮಗಳು, ಚುಕ್ಕೆಗಳು, ಇನ್ನಿತರವು ಖಂಡಿತವಾಗಿ ಇರಕೂಡದು !

11. ಚಿಕ್ಕಂದಿನಿಂದಲೆ ಮಕ್ಕಳಿಗೆ ಧ್ಯಾನ ಶಿಕ್ಷಣವನ್ನು ನಿಯಮ ದಂತೆ ಅಭ್ಯಾಸ ಮಾಡಿಸಬೇಕು.

12. ಯಾರು ಶಿಷ್ಯರಾಗಿ ಇರಬಾರದು. ಎಲ್ಲರೂ ಮಾಸ್ಟರ್‌ಗಳಾಗಿ ವಿರಾಜಿಸಬೇಕು.

13. ಧ್ಯಾನ ಶಿಕ್ಷಣ ಕಾರ್ಯಕ್ರಮಗಳಲ್ಲಿ ಹಣದ ಲೇವಾದೇವಿ ಇಟ್ಟುಕೊಳ್ಳಬಾರದು.

14. ವಿಗ್ರಹಾರಾಧನೆ ಅಲ್ಲ ! ಆತ್ಮಾರಾಧನೆಯೆ ಮುಕ್ತಿಗೆ ಮಾರ್ಗ ಜೀವಂತ ಇರುವ ಮಾಸ್ಟರ್ ಗಳನ್ನು ಪೂಜಿಸಬಾರದು

15. ಸ್ವಂತ ಆತ್ಮ ಶಕ್ತಿಯಿಂದಲೆ ಸರ್ವ ವೈಯುಕ್ತಿಕ ಸಮಸ್ಯೆಗಳನ್ನು, ಆಗಿಂದಾಗಲೆ ಪರಿಷ್ಕರಿಸಿಕೊಳ್ಳುತ್ತಾ ಇರಬೇಕು

16. ಸಾಮಾನ್ಯವಾದ ಗೃಹಸ್ಥ ಜೀವನವನ್ನೇ ಆನಂದದಿಂದ ಕಳೆಯಬೇಕು.

17. ಎಲ್ಲಾ ಗ್ರಾಮಗಳಲ್ಲಿ, ಎಲ್ಲಾ ಪಟ್ಟಣಗಳಲ್ಲಿ, ಪಿರಮಿಡ್ ಧ್ಯಾನ ಕೇಂದ್ರಗಳನ್ನು ಖಡ್ಡಾಯವಾಗಿ ಸ್ಥಾಪಿಸಬೇಕು

18. ಧ್ಯಾನಾನುಭವಗಳನ್ನು, ಆಧ್ಯಾತ್ಮಿಕ ಪಗ್ರತಿಯ ವಿಶೇಷತೆಗಳನ್ನು ಮುದ್ರಿಸಿ ಖಡ್ಡಾಯವಾಗಿ ಪ್ರಚಾರ ಮಾಡಬೇಕು.

# 9. ಭಗವಂತನನ್ನು ಗುರುತಿಸುವ ಏಕೈಕ ಮಾರ್ಗ

ಭಗವಂತನು ನಿರಾಕಾರನು, ಸರ್ವಾಂತರ್ಯಾಮಿ ಸರ್ವಶಕ್ತಿವಂತನು, ಅನಂತನು ತೇಜೋಮಯನು, ಹೀಗೆ ಭಗವಂತನು ಕುರಿತು ಹಿರಿಯರು, ಪಂಡಿತರು ಎಷ್ಟೋ ವಿಧಗಳಲ್ಲಿ ವರ್ಣಿಸುತ್ತಾರೆ ಆತನು ಪ್ರತಿಜೀವಿಯಲ್ಲಿ ಯೂ ಆತ್ಮಸ್ವರೂಪವಾಗಿದ್ದಾನೆಂದು ಕೂಡಾ ಹೇಳುತ್ತಾರೆ ಹಾಗೆ ಆತ್ಮ ಸ್ವರೂಪನಾದ ಆ ಭಗವಂತನನ್ನು ದರ್ಶಿಸುವಂತ ಅವಕಾಶ ಸಾಕ್ಷಾತ್ಕಾರಿಸಿಕೊಳ್ಳವಂತ ಶಕ್ತಿ ಒಬ್ಬ ಮಾನವನಿಗೆ ಇವೆ.

ಆತ್ಮನೇ ಭಗವಂತನಾದ್ದರಿಂದ "ಆತ್ಮದರ್ಶನವೆ ಭಗವಂತದರ್ಶನ !" "ಆತ್ಮ ಸಾಕ್ಷಾತ್ಕಾರವೇ ಭಗವತ್ ಸಾಕ್ಷಾತ್ಕಾರ!" ಆತ್ಮವೊಂದರ ಮೂಲಕವೆ ಭಗವಂತನ ಇರುವಿಕೆಯನ್ನು ನಾವು ತಿಳಿದುಕೊಳ್ಳಬಲ್ಲೆವು ಇದಕ್ಕೂ ಮೀರಿದ ಭಗವಂತನನ್ನು ಅರಿಯುವ ಮಾರ್ಗ ಮತ್ತೊಂದಿಲ್ಲ ಆತ್ಮದ ಹೊರೆತು ಇನ್ನು ಯಾವವಿಧದಲ್ಲೂ ಭಗವಂತನು ನಮಗೆ ಲಭ್ಯವಾಗುವುದಿಲ್ಲ.

ಭಗವಂತನು ಲಭಿಸಬೇಕೆಂದರೂ, ದರ್ಶಿಸಬೇಕೆಂದರೂ, ಹೊಂದಬೇಕೆಂದರೂ ನಮಗೆ ಆತ್ಮವೆ ಶರಣಗಿ ಯಾರಾದರೂ ಸರಿ, ಆತ್ಮ ದೃಷ್ಟಿಯಲ್ಲಿದ್ದರೇನೆ ಭಗವಂತ ದೃಷ್ಟಿಯಲ್ಲಿ ಇದ್ದಂತೆ, ಆತ್ಮಭಾವದಲ್ಲಿ ಇದ್ದರೇನೆ ಭಗವತ್ ಭಾವನೆಯಲ್ಲಿ ಇದ್ದಂತೆ ಆತ್ಮನನ್ನು ನೆನಪಿಟ್ಟುಕೊಂಡರೆ, ಭಗವಂತನನ್ನು ನೆನಪಿಟ್ಟುಕೊಂಡಂತೆಯೆ, ಆತ್ಮವನ್ನೆ ಹೊಂದಲು ಪ್ರಯತ್ನಿಸುವವರೆ ಭಗವಂತನನ್ನು ಹೊಂದಲು ಪ್ರಯತ್ನಿಸುವವರೆಂದು ತಿಳಿದುಕೊಳ್ಳಬೇಕು.

ಆತ್ಮದೃಷ್ಟಿಯಲ್ಲಿ ಅಂದರೆ ಭಗವತ್ ದೃಷ್ಟಿಯಲ್ಲಿ ಇರಬೇಕೆಂದರೆ ಒಂದೇ ಮಾರ್ಗ ಅದುವೆ "ಶ್ವಾಸದ ಮೇಲೆ ಗಮನ" ಏಕೆಂದರೆ ಆತ್ಮ ಎನ್ನುವುದು ಹೊರ ಪ್ರಪಂಚದಲ್ಲಿ ಎಲ್ಲಿಯೂ ಕಾಣಿಸುವುದಿಲ್ಲ. ಪ್ರಪಂಚದಲ್ಲಿ ಯಾವ ಮರುಮೂಲೆಲ್ಲಿ ಹುಡುಕಿದರೂ ಆತ್ಮದೊರಕುವುದಿಲ್ಲ. ನಮಗೆ ಸಾಧ್ಯವೂ ಇಲ್ಲ. ಅದು ಸಾಧ್ಯವಾಗುವುದಾದರೆ ಮಾನವರು ಯಾವತ್ತೊ ಸಾಧಿಸಿಬಿಡುತ್ತಿದ್ದರು.

ಆತ್ಮನೆಂದರೆ ಭಗವಂತನು, ಪ್ರತಿಯೊಬ್ಬರ ಅಂತರಂಗದಲ್ಲಿದ್ದಾನೆ. ಆದ್ದರಿಂದ "ಬಾಹ್ಯ ದೃಷ್ಟಿಯಿಂದ ಅಲ್ಲದೆ ಅಂತರ್ ದೃಷ್ಟಿಯಿಂದ "ಬಾಹ್ಯ ಅನ್ವೇಷಣೆಯಲ್ಲಿ ಅಲ್ಲದೆ ಅಂತರ್ ಅನ್ವೇಷಣೆಯಲ್ಲಿ" ಬಾಹ್ಯ ನೇತ್ರಗಳಿಂದ ಅಲ್ಲದೆ ಅಂತರ್ ದಿವ್ಯ ನೇತ್ರದಿಂದ" ಮಾತ್ರವೆ ಭಗವಂತನನ್ನು ದರ್ಶಿಸಬಲ್ಲೆವು, ಯುಗಯುಗಗಳಿಂದ ಹಾಗೆ ಧ್ಯಾನ ಸಾಧನೆಯಿಂದ ಅಂತರ್ಮುಖವಾದವರು ಎಷ್ಟೋ ಮಂದಿ "ಭಗವಂತನನ್ನು ಅಂದರೆ ಆತ್ಮನನ್ನು" ದರ್ಶಿಸಿದರು. ಹಾಗೆ ಧ್ಯಾನದ ಮೂಲಕ ಭಗವತ್ ದರ್ಶನ ಅಂದರೆ ಆತ್ಮದರ್ಶನ ಯಾರಿಗಾದರೂ ಆಗುತ್ತದೆ.

ಭಗವಂತನನ್ನು ಹೊಂದುವ ಮಾರ್ಗ ಧ್ಯಾನವೊಂದೆ. ಧ್ಯಾನವನ್ನು ಬಿಟ್ಟರೆ ಇನ್ನೊಂದು ಮಾರ್ಗವಿಲ್ಲ, ಆದ್ದರಿಂದ ಆತ್ಮದಮೇಲೆ ಧೃಷ್ಟಿ ಇಟ್ಟರೇನೆ ಭಗವಂತನ ಮೇಲೆ ದೃಷ್ಟಿ ಇದ್ದಂತೆ ಅಂದರೆ ಧ್ಯಾನ ಮಾಡಿದರೇನೆ ಭಗವಂತನ ಮೇಲೆ ದೃಷ್ಠಿ ಇಟ್ಟಂತೆ ಎಂದು ತಿಳಿದು ಕೊಳ್ಳಬೇಕು ಇನ್ನು ಏನು ಮಾಡಿದರೂ ಅಂದರೆ ಪೂಜೆ, ಭಜನೆ, ಪ್ರಾರ್ಥನೆ, ನಾಮಜಪವಂತವುಗಳನ್ನು ಎಷ್ಟು ಮಾಡಿದರೂ ಎಷ್ಟು ಜನ್ಮಗಳೆತ್ತಿದರೂ, ಭಗವಂತನನ್ನು ಹೊಂದಲು ಸಾಧ್ಯವಿಲ್ಲ ಅಸಲು ಭಗವಂತನ ದೃಷ್ಟಿಯಲ್ಲಿ ಇರುವಂತೆಯೇ ಅಲ್ಲ.

ನಾವು ಡಿಲ್ಲಿ (ದೆಹಲಿ) ಹೋಗಬೆಕೆಂದರೆ ಹೋಗಲಾರೆವು ದೆಹಲಿಗೆ ಹೋಗಬೇಕೆಂದರೆ ದೆಹಲಿಗೆ ಹೋಗುವ ರೈಲು ಹತ್ತಿ ಕುಳಿತುಕೊಳ್ಳಬೇಕು ಹಾಗೆ ಕುಳಿತುಕೊಂಡಾಗಲೆ ದೆಹಲಿಯನ್ನು ಸೇರಬಲ್ಲೆವು ದೆಹಲಿ ರೈಲನ್ನು ಹತ್ತಿ ಕುಳಿತುಕೊಳ್ಳದೆ, ಎಂದಿಗೂ ದೆಹಲಿ ಸೇರಲಾರೆವು, ಹಾಗೆ ಭಗವಂತನನ್ನು ದರ್ಶಿಸಬೇಕೆಂದು ಕೊಂಡರೆ ಧ್ಯಾನ ಮಾಡಬೇಕು. ಧ್ಯಾನ ಮಾಡುತ್ತಿದ್ದರೆ ನಾವು ಯಾವಾಗಲೂ ಒಂದುಬಾರಿ ಭಗವಂತನನ್ನು ದರ್ಶಿಸಬಲ್ಲೆವು. ಅಷ್ಟೇ ಹೊರೆತು ಧ್ಯಾನ ಮಾಡದೇ ಎಂದಿಗೂ, ಎಷ್ಟು ಜನ್ಮವೆತ್ತಿದರೂ ಭಗವಂತನನ್ನು ದರ್ಶಿಸಲಾರೆವು.

ಭೂಮಿಯ ಮೇಲೆ "ಭಗವಂತನನ್ನು ಗುರಿತಿಸುವ ಏಕೈಕ ಮಾರ್ಗ ಆತ್ಮ" ಎಂದು ತಿಳಿದು ಕೊಳ್ಳಬೇಕು ಅದ್ದರಿಂದ ಭಗವಂತನೆಂದರೆ ಇಷ್ಟ ಎನ್ನುವವರು ಯಾವಾಗಲೂ ಅವಕಾಶ ದೊರಕಿದರೆ ಅವಾಗ ಅಲ್ಲ, ಅವಕಾಶವನ್ನು ಕಲ್ಪಿಸಿಕೊಂಡು ಮತ್ತೆ, ಮತ್ತೆ ಧ್ಯಾನ ಮಾಡಬೇಕು.

# 10. ಆತ್ಮ ದೃಷ್ಟಿಯೇ ಭಗವತ್ ದೃಷ್ಟಿ

ಭಗವಂತನಿಗೆ ರೂಪವಿಲ್ಲವಾದ್ದರಿಂದ ಯಾವರೂಪವನ್ನು ಆರಾಧಿಸಿದರೂ ಭಗವಂತನನ್ನು ಆರಾಧಿಸಿದಂತೆಯೇ ಹಾಗೆಯೇ ಭಗವಂತನಿಗೆ ಹೆಸರು ಇಲ್ಲದ ಕಾರಣ, ಯಾವ ಹೆಸರಿನಿಂದ ಕರೆದರೂ ಭಗವಂತನನ್ನು ಕರೆದಂತೆಯೇ, ಆದ್ದರಿಂದ ನಿಮಗೆ ಇಷ್ಟವಾದ ಹೆಸರನ್ನು ಸ್ಮರಿಸಿರಿ. ನಿಮಗೆ ಇಷ್ಟವಾದ ರೂಪವನ್ನು ಆರಾಧಿಸಿರಿ ಎಂದು ಹಿರಿಯರು ಹೇಳುತ್ತಾ ಇರುತ್ತಾರೆ.

ಹಾಗೆ ನಿರಂತರವಾಗಿ ಯಾವ ಹೆಸರನ್ನು ಸ್ಮರಿಸಿದರೂ, ಯಾವರೂಪದ ಮೇಲೆ ದೃಷ್ಟಿ ಇಟ್ಟರೂ ಅವರನ್ನು ಆಭಗವಂತನು ಕಾಪಾಡುವುದಲ್ಲದೆ, ಕಷ್ಟಗಳು ಇಲ್ಲದಂತೆ ಮಾಡುತ್ತಾನೆ. ಕೊನೆಗೆ ಅವರ ಜನ್ಮ ದನ್ಯವಾಗುತ್ತದೆಂದು ಹೇಳುತ್ತಾರೆ, ಅಷ್ಟೇ ಅಲ್ಲ ಮರಣದ ಸಮಯದಲ್ಲಿ ಭಗವಂತನ ದೃಷ್ಟಿಯಲ್ಲಿದ್ದರೆ ಅವರು ಭಗವಂತನನ್ನು ಹೊಂದುತ್ತಾರೆಂದು ಕೂಡಾ ಹಿರಿಯರು ಹೇಳುತ್ತಿರುತ್ತಾರೆ.

ಗಮನಿಸಿದರೆ ಮರಣದ ಸಮಯದಲ್ಲಿ ಪ್ರತಿಯೊಬ್ಬರೂ ಯಾವುದೋ ಒಂದು ಹೆಸರು ಅಂದರೆ, ಕುಟುಂಬದ ಸದಸ್ಯರ ಹೆಸರಾಗಲಿ, ಇತರರ ಹೆಸರಾಗಲಿ, ಇಲ್ಲ ಯಾವುದೋ ಒಂದರ ದೃಷ್ಟಿಯಲ್ಲಿರುತ್ತಾರೆ. ಮತ್ತೆ ಎಲ್ಲಾ ಭಗವಂತನಾದಾಗ ಯಾವುದರ ಮೇಲೆ ದೃಷ್ಟಿ ಇದ್ದರೂ ಭಗವಂತನ ಮೇಲೆ ದೃಷ್ಟಿ ಇದ್ದಂತೆ ಅಲ್ಲದೆ? ಹಾಗಿದ್ದಾಗ ಪ್ರತಿಯೊಬ್ಬರೂ ಭಗವಂತನನ್ನು ಹೊಂದಬೇಕಲ್ಲವೇ? ಭಗವಂತನನ್ನು ಹೊಂದಿದವರು ಮೋಕ್ಷವನ್ನು ಹೊಂದಿದಂತೆ ಅಲ್ಲವೇ? ಹಾಗಾದರೆ ಪ್ರತಿಯೊಬ್ಬರೂ ಮೋಕ್ಷವನ್ನು ಹೊಂದುತ್ತಿದ್ದಾರೆಯೇ? ಹಾಗೆ ಎಲ್ಲರೂ ಮೋಕ್ಷವನ್ನು ಹೊಂದಿದರೆ, ಮೋಕ್ಷವನ್ನು ಹೊಂದುವುದು ಬಹಳ ಸುಲಭವೇ ಅಲ್ಲವೇ? ಎಷ್ಟು ಪಾಪಗಳನ್ನು ಮಾಡಿದರೂ ಕೊನೆಗೆ ಪ್ರತಿ ಒಬ್ಬರಿಗೂ ಮೋಕ್ಷವು ಬಂದಂತೆ ಆಲ್ಲೇವೇ? ಹಾಗಾದರೆ ಮೋಕ್ಷವು ಅಷ್ಟು ಸಲೀಸಾಗಿ ಬರುತ್ತದೇನು? ಅಂದರೆ ಖಂಡಿತವಾಗಿ ಬರುವುದಿಲ್ಲ.

ಏಕೆಂದರೆ ಯಾವುದರ ಮೇಲೆ ದೃಷ್ಟಿ ಇಟ್ಟರೂ ಭಗವಂತನ ಮೇಲೆ ದೃಷ್ಟಿ ಇಟ್ಟಂತೆ

ಅಲ್ಲ ಯಾವ ಹೆಸರಿನಿಂದ ಕೂಗಿದರೂ ಭಗವಂತನನ್ನು ಕರೆದಂತೆ ಅಲ್ಲ. ಆರಾಧಿಸಿದಂತೆ ಅಲ್ಲ!!

**ಉತ್ತರ ಗೀತೆಯಲ್ಲಿ –**

**ಶ್ಲೋಕ ॥ ಶಿಲಾಮೃದ್ದಾಯ ಪಾತ್ರೇ ಮದ್ಯೈವಬುದ್ಧಿಃ ಪ್ರಕಲ್ಪಿತಃ**

**ಅಕಲ್ಪಿತ ಸ್ವಯಂ ಜ್ಯೋತಿರಾತ್ಮನೋ ದೇವರ ನಕಿಂ ॥**

**(ಉತ್ತರ ಗೀತೆಯಲ್ಲಿ 4–27)**

**ತಾತ್ಪರ್ಯ : –** ಶಿಲೆಗಳಿಂದ, ಮಣ್ಣಿನಿಂದ, ಕಟ್ಟಿಗೆಯಿಂದ ಮಾಡಲ್ಪಟ್ಟ ವಿಗ್ರಹಗಳಲ್ಲಿ ದೈವವೆನ್ನುವ ಭಾವನೆ ಬುದ್ಧಿ ಬಂದರೆ ಅದು ಕಲ್ಪಿತವಾದದ್ದು ಏಕೆಂದರೆ ಸ್ವಯಂ ಜ್ಯೋತಿಸ್ವರೂಪನಾದ ಆತ್ಮ ಅಂದರೆ ಭಗವಂತನು ಅಕಲ್ಪಿತನು ಅಂದರೆ ಯಾರಿಂದಲೂ ಕಲ್ಪಿಸಲ್ಪಡದ ಪರಬ್ರಹ್ಮನೆಂದು ತಿಳಿಯುತ್ತಿದೆ ಆದ್ದರಿಂದ ಕಲ್ಪಿಸಲ್ಪಟ್ಟ ದೇವರುಗಳ ಜೊತೆ ನಮಗೇನು ಕೆಲಸ? ಶಿಲೆಗಳಿಂದ, ಮಣ್ಣಿನಿಂದ, ಕಟ್ಟಗೆಯಿಂದ ನಿರ್ಮಿಸಲ್ಪಟ್ಟ ಕಲ್ಪಿತ ವಿಗ್ರಹಗಳನ್ನು ಆರಾಧಿಸದೆ ಸ್ವಯಂ ಜ್ಯೋತಿ ಸ್ವರೂಪನಾದ ಆತ್ಮರೂಪದಲ್ಲಿರುವ ಅಕಲ್ಪಿತನಾದ ಪರಮಾತ್ಮನೇ ಸತ್ಯವೆಂದು ತಿಳಿದುಕೊಂಡು ಆತ್ಮವನ್ನು ಆರಾಧಿಸಬೇಕೆಂದು ಈ ಉತ್ತರ ಗೀತೆಯ ಶ್ಲೋಕ ಮೂಲಕ ತಿಳಿದುಕೊಳ್ಳಬಹುದು

ಅಂದರೆ "ಆತ್ಮ ದೃಷ್ಟಿ ಭಗವತ್ ದೃಷ್ಟಿ" "ಆತ್ಮ ಭಾವನೆಯೇ ಭಗವತ್ ಭಾವನೆ". ಇನ್ನು ಯಾವ ಭಾವದಲ್ಲಿದ್ದರೂ ಅದು ಕಲ್ಪಿತ ಭಾವವೆ, ಭಗವಂತನ ದೃಷ್ಟಿಯಲ್ಲಿ ಇಲ್ಲದ್ದಂತೆಯೇ ಆದ್ದರಿಂದ "ಭಗವತ್ ದೃಷ್ಟಿಯಲ್ಲಿ ಇರಬೇಕೆಂದರೆ ಆತ್ಮ ದೃಷ್ಟಿ ಇರಬೇಕು"

ಅದಕ್ಕೆ ಒಂದೇ ಮಾರ್ಗ ಅದೇ "ಅನಾಪಾನಸತಿಧ್ಯಾನ" ಧ್ಯಾನದಮೂಲಕ ಮನಸ್ಸನ್ನು ಶೂನ್ಯ ಮಾಡಿಕೊಂಡರೆ ಆತ್ಮದ ಮೇಲೆ ದೃಷ್ಟಿ ಇಟ್ಟಂತಯೇ, ಅಂದರೆ ಭಗವಂತನ ದೃಷ್ಟಿಯಲ್ಲಿ ಇದ್ದಂತಯೇ, ಅದ್ದರಿಂದ ನಿತ್ಯವು ಧ್ಯಾನ ಮಾಡುತ್ತಾ ಭಗವಂತನ ದೃಷ್ಟಿಯಲ್ಲಿ ಇರಬೇಕು, ಪುನೀತರಾಗಬೇಕು.

# 11. ಆತ್ಮನೇ ಭಗವಂತನೆಂದು ನಂಬಬೇಕು

ಕೆಲವು ಜನ ವಿಧ ವಿಧವಾದ ಭಗವತ್ ಸಂಬಂಧವಾದ ಸಾಧನೆಗಳನ್ನು ಮಾಡುತ್ತಾ ಎಷ್ಟೋ ಪುಸ್ತಕಗಳನ್ನು ಓದುತ್ತಾ, ಎಷ್ಟೊ ಮಂದಿ ಗುರುಗಳನ್ನು ಆಶ್ರಯಿಸುತ್ತಾ, ಪಂಡಿತರ, ವೇದಾಂತಿಗಳ ಉಪನ್ಯಾಸಗಳನ್ನು ಕೇಳುತ್ತಾ ಭಗವಂತನು ಆತ್ಮ ಸ್ವರೂಪನು, ಆತ್ಮವೇ ಭಗವಂತನು ಎಂದು ತಿಳಿದುಕೊಳ್ಳುತ್ತಾರೆ

ಹಾಗೆ ಆತ್ಮವನ್ನು ಆರಾಧಿಸಿದರೆ ಭಗವಂತನನ್ನು ಆರಧಿಸಿದಂತೆಯೇ ಎಂದು ತಿಳಿದುಕೊಳ್ಳುತ್ತಾರೆ. ಆತ್ಮದರ್ಶನವೆ ಭಗವದ್ ದರ್ಶನವೆಂದು ಆತ್ಮ ಸಾಕ್ಷಾತ್ಕಾರವೇ ಭಗವದ್ ಸಾಕ್ಷಾತ್ಕಾರವೆಂದು ತಿಳಿದುಕೊಳ್ಳುತ್ತಾರೆ ಅಷ್ಟೇ ಅಲ್ಲ ಅಂತರ್ಯಾಮಿಯಾಗಿ ಇರುವ ಆತ್ಮನನ್ನು ಹೊಂದುವುದಕ್ಕೆ ಆತ್ಮನನ್ನು ಆರಾಧಿಸುವುದಕ್ಕೆ ಧ್ಯಾನ ಸಾಧನೆಯೇ ಮಾರ್ಗವೆಂದು ತಿಳಿದುಕೊಳ್ಳುತ್ತಾ ಧ್ಯಾನವನ್ನು ಮಾಡುತ್ತಾರೆ.

ಇಂತಹ ಜಿಜ್ಞಾಸೆ ಅಂದರೆ ಭಗವಂತನನ್ನು ಹೊಂದುಬೇಕೆಂಬ ಹಂಬಲವುಳ್ಳವರು ಒಂದು ವಿಷಯವನ್ನು ಗಮನಿಸಬೇಕು "ಯಧ್ಭಾವಂ ತದ್ಭವತಿ" ಎಂಬ ಭಗವತ್ ವಾಕ್ಯದ ಪ್ರಕಾರ ನಾವು ಯಾವ ಭಾವದಲ್ಲಿರುತ್ತೇವೆಯೋ ಅದನ್ನೆ ಹೊಂದುತ್ತೇವೆ. ಹಾಗೆಯೇ ಆತ್ಮನನ್ನು ಹೊಂದಬೇಕೆಂದರೆ ನಿರಂತರವಾಗಿ ಆತ್ಮದಲ್ಲಿ ಇರಬೇಕು "ಆತ್ಮನೇ ಭಗವಂತನೆಂದು ನಂಬಬೇಕು".

ಅಷ್ಟೇ ಹೊರೆತು, ಧ್ಯಾನಮಾಡಿದ ಮಾತ್ರಕ್ಕೆ ಸರಿಹೋಗುವುದಿಲ್ಲ ಆತ್ಮನೇ ಭಗವಂತನೆಂದು ಪೂರ್ತಿಯಾಗಿ ವಿಶ್ವಾಸಿಸಬೇಕು, ಭಾವಿಸಬೇಕು. ಹಾಗೆ ಮನಸಾ, ವಾಚಾ, ಕರ್ಮಣಾ ನಂಬಿ ಆತ್ಮನನ್ನು ಆರಾಧಿಸಿದವರೆ ಭಗವಂತನನ್ನು ಆರಾಧಿಸಿದವರಾಗುತ್ತಾರೆ.

ಆದ್ದರಿಂದ ಆತ್ಮವೇ ಭಗವಂತನೆಂದು ಮಾತುಗಳಿಂದ ಹೇಳಿದರೆ ಸರಿಹೋಗುವುದಿಲ್ಲ. ಕಾರ್ಯಗಳು / ಕೆಲಸಗಳು ಕೂಡಾ ತೋರಿಸಬೇಕು. ವಿಗ್ರಹವು ಕೇವಲ ವಿಗ್ರಹವೇ ಎನ್ನುವ ತಿಳುವಳಿಕೆಯೂ ಕೂಡ ಇರಬೇಕು. ಆತ್ಮವೇ ಭಗವಂತ ನೆಂದು ವಿಶ್ವಾಸಿಸಬೇಕು. ಅಂತಹ ವಿಶ್ವಾಸವುಳ್ಳವರೆ ಆತ್ಮನನ್ನು ಅಂದರೆ ಭಗವಂತನನ್ನು ಹೊಂದಬಲ್ಲರು.

**ವಿಗ್ರಹವನ್ನು ಕುರಿತು ಯೋಗಿ ವೇಮನ ಏನು ಹೇಳಿದ್ದಾರೆಂದರೆ**

**"ಶಿಲೆಗಳನ್ನು ನೋಡಿ ಶಿವನೆಂದು ಭಾವಿಸುತ್ತಾರೆ !**

**ಶಿಲೆಗಳು ಶಿಲೆಗಳೆ ಹೊರೆತು, ಶಿವನು ಅಲ್ಲ !**

**ತನ್ನಲ್ಲಿರುವ ಶಿವನನ್ನು ತಾನೇಕೆ ತಿಳಿಯನೋ**

**ವಿಶ್ವದಾಭಿರಾಮ ವಿನುರ ವೇಮ !"**

ಆದ್ದರಿಂದ ಮಾತುಗಳಲ್ಲಿ ಆತ್ಮ ಭಗವಂತನೆಂದು ಹೇಳುತ್ತಾ, ಕೈಗಳು ವಿಗ್ರಹವೆನ್ನುತ್ತಾ ಪ್ರವರ್ತಿಸಿದರೆ ಅಂದರೆ ಅರಾಧಿಸುತ್ತಾ ಇದ್ದರೆ ತ್ರಿಕರಣ ಶುದ್ಧಿ ಇಲ್ಲದಂತೆಯೇ ಅಲ್ಲವೇ? ಹಾಗೆ ಮಾಡುವುದು ಭಗವಂತನನ್ನು ಅವಮಾನಿಸಿದಂತೆ ಅಲ್ಲವೇ? ಅಂತಹವರಿಗೆ ಭಗವಂತನ ದರ್ಶನ ಹೇಗೆ ಲಭಿಸುತ್ತದೆ? ಅವರು ದುಃಖದಿಂದ ಹೇಗೆ ಹೊರೆಗೆ ಬರಬಲ್ಲನು ?

ಇದೆ ವಿಷಯವನ್ನು ಶ್ರೀ ಕೃಷ್ಣ ಭಗವಾನನು ಭಗವದ್ಗೀತೆಯಲ್ಲಿ ಕೂಡಾ ಹೇಳಿದ್ದಾರೆ

**ಶ್ಲೋಕ ॥ ಅವ ಜಾನನ್ತಿಮಾಂ ಮೂಡಾಮಾನುಷಿಂತನು ಮಾಶ್ರತಮ್ ।**

**ಪರಂಭಾವಮಜಾನನ್ತೋಯಮ ಭೂತ ಮಹೇಶ್ವರಮ್ ॥ (ಭ.ಗಿ. 9–11)**

ತಾತ್ಪರ್ಯ: ಸರ್ವೋತ್ತಮವಾದ, ಸರ್ವಾತ್ಮ ಸ್ವರೂಪನು, ಆದ ನನ್ನ ತತ್ವವನ್ನು ತಿಳಿಯದ ಮೂಡರು ನನ್ನನ್ನು ಮನುಷ್ಯ ಸಂಬಂಧವಾದ ದೇಹವನ್ನು ಮಾತ್ರ ಧರಿಸಿದವನಾಗಿ ತಿಳಿದು ನನ್ನನ್ನು ಅವಮಾನಿಸುತ್ತಿದ್ದಾರೆ.

ಆದ್ದರಿಂದ ಆತ್ಮವೇ ಪರಮಾತ್ಮ ಎಂದು ಮಾತುಗಳನ್ನು ಹೇಳಿದರೆ ಸರಿಹೋಗದು. ಕೆಲಸಗಳು / ಕ್ರಿಯೆಗಳು, ಮಾತುಗಳು, ಆಲೋಚನೇಗಳೂ ಒಂದೇ ರೀತಿಯಾಗಿ ಇರ ಬೇಕು. ಹಾಗೆ ಆತ್ಮನೆ ಭಗವಂತನು ಎಂದು ನಂಬಿ "ಆತ್ಮನ ಆರಾಧನೆ ಅಂದರೆ ಧ್ಯಾನ ಸಾಧನೆ" ಮಾಡಿದರೆ ನಾವು ನಂಬಿರುವಂತಹ ಭಾವನೆಯೇ ನಮ್ಮನ್ನು ಭಗವಂತನ ನ್ನಾಗಿ ಬದಲಾಯಿಸುತ್ತದೆ. ಭ್ರಮರ ಕೀಟಕನ್ಯಾಯದಂತೆ ಅಂದರೆ ಕೀಟವು ಭ್ರಮರ ಝಂಕಾರವನ್ನು ಕೇಳುತ್ತಾ ಕೊನೆಗೆ ಭ್ರಮರವಾಗಿ ಬದಲಾಗುತ್ತದೆ? ಹಾಗೆಯೆ ನಾವು ಕೂಡಾ ಬಗವತ್ ಸ್ವರೂಪರಾಗುತ್ತೇವೆ.

# 12. ಯಾರಿಗೆ ಕೃತಜ್ಞತೆ ತೋರಿಸಬೇಕು?

ಸಹಜವಾಗಿ ನಮಗೆ ಯಾರದರೂ ಸಹಾಯ ಮಾಡಿದರೆ ಅವರಿಗೆ ಕೃತಜ್ಞತೆ ಗಳನ್ನು ಹೇಳುತ್ತೇವೆ. ಹಾಗೆ ಅವರಿಂದ ಒಳ್ಳೆಯದು ನಡೆದರೆ, ಉಪಕಾರವನ್ನು ಹೊಂದಿದರೂ, ಲಾಭಬಂದರೂ, ಸಂತೋಷವಾಗಲಿ, ಆನಂದವಾಗಲಿ, ಆದಾಗ ಅವರಿಗೆ ನಾವು ಕೃತಜ್ಷತೆಯನ್ನು ಹೇಳಿಕೊಳ್ಳುವುದಲ್ಲದೆ ಆ ಉಪಕಾರವನ್ನು ಮಾಡಿದಕ್ಕೆ ಅವರನ್ನು ಜೀವನವೆಲ್ಲಾ ನೆನಪಿಟ್ಟುಕೊಳ್ಳುತ್ತೇವೆ.

ಹಾಗೆಯೇ ಕಷ್ಟಗಳಲ್ಲಿದ್ದಾಗ ಆರ್ಥಿಕ ಸಹಾಯ ಮಾಡಿದರೆ, ಕಷ್ಟಗಳಲ್ಲಿ ಕೈಹಿಡಿದುರೂ, ಅನಾರೋಗ್ಯದಿಂದ ಇದ್ದಾಗ ಸೇವೆಗಳನ್ನು ಮಾಡಿದರೆ, ಒಂದು ಉಧ್ಯೋಗ ಕೊಡಿಸಿದರೂ ಪದವಿ ಬರಲು ಕಾರಣವಾದರೆ, ವಿವಾಹಕ್ಕೆ ಕಾರಣವಾದರೆ, ಮಕ್ಕಳು ಇಲ್ಲದಾಗ ಮಕ್ಕಳು ಹುಟ್ಟು ಕಾರಣವಾದರೂ, ಅವರಿಗೆ ನಾವು ಕೃತಜ್ಞತೆಗಳನ್ನು ಹೇಳಿಕೊಳ್ಳುತ್ತೆವೆ ಅವರ ಬಗ್ಗೆ ಗೌರವ ಭಾವದಿಂದ ಇರುತ್ತೇವೆ.

ಹಾಗೆಯೇ ನಮ್ಮ ಸಮಸ್ಯೆಗಳು ಪರಿಷ್ಕಾರವಾದಾಗ, ಕಷ್ಟಪಡುತ್ತಿರುವಾಗ, ಅನಾರೋಗ್ಯದಿಂದ ಹೊರ ಬರಲಾರದೆ ಹೋದಾಗ, ಕಷ್ಟದಲ್ಲಿದ್ದಾಗ ನಾವು ಕೆಲವು ಜನ ಗುರುಗಳನ್ನು ಆಶ್ರಯಿಸುತ್ತೇವೆ. ಅವರನ್ನು ಆಶ್ರಯಿಸಿದ ನಂತರ ಸಮಸ್ಯೆ ಪರಿಷ್ಕಾರವಾದಾಗ, ಆ ಕಷ್ಟಗಳಿಂದ ಹೊರಬಂದರೆ ಆ ಗುರುಗಳು ದೈವ ಸಮಾನವಾಗಿ ಭಾವಿಸುತ್ತೇವೆ ಆತನ ಬಗ್ಗೆ ಅತ್ಯಂತ ಕೃತಜ್ಞತಾ ಭಾವದಿಂದ ಇರುತ್ತಾ ಅವರನ್ನು ಆರಾಧಿಸುತ್ತೇವೆ ಆತನನ್ನೇ ಭಗವಂತನೆಂದು ಭಾವಿಸುತ್ತೇವೆ ಜೀವನವೆಲ್ಲಾ ಆತನನ್ನು ಪೂಜಿಸುತ್ತೇವೆ.

ಅಚಿತಹ ಕಷ್ಟಗಳಲ್ಲಿ ಯಾವ ವಿಗ್ರಹವನ್ನು ಪೂಜಿಸಿದರೂ, ಯಾವ ಪೋಟೋವನ್ನು ಪ್ರಾರ್ಥಿಸಿದರೂ ನಮ್ಮ ಕಷ್ಟ ತೀರಿದರೆ ಆ ವಿಗ್ರಹವನ್ನು ಫೋಟೋವನ್ನು ಮರೆಯುವುದಿಲ್ಲ. ನಿತ್ಯವೂ ಪೂಜಿಸುತ್ತೇವೆ ಜೀವನವೆಲ್ಲಾ ಕೃತಜ್ಞತೆಯನ್ನು ತೋರಿಸುತ್ತೇವೆ ಆ ವಿಗ್ರಹಕ್ಕಾಗಿ, ಫೋಟೋಗಾಗಿ ಆ ಮತಕ್ಕಾಗಿ, ಪ್ರಾಣವನ್ನು ಅರ್ಪಿಸುವುದಕ್ಕಾಗಲಿ ಸಿದ್ಧವಾಗುತ್ತೇವೆ.

ನಮ್ಮ ಜೀವನದಲ್ಲಿ ಯಾರಿಂದಾಗಲಿ ಎಷ್ಟು ಮಾತ್ರ ಪ್ರಯೋಜನವಾದರೂ ಅವರ

ಬಗ್ಗೆ ಕೃತಜ್ಞತೆ ತೋರಿಸುವುದಲ್ಲದೆ, ಅವರನ್ನು ಮರೆಯದಂತೆ ಜೀವನವೆಲ್ಲಾ ಕೃತಜ್ಞತೆ ತೋರಿಸುತ್ತೇವೆ ಹಾಗೆ ತಾತ್ಕಾಲಿವಾದ ಸಣ್ಣ ಪ್ರಯೋಜನಕ್ಕೆ ಅಷ್ಟು ಕೃತಜ್ಞತೆ ತೋರಿಸುತ್ತೇವೆ. ಆದರೆ ಜೀವನವೆಲ್ಲಾ ಲಾಭ ಹೊಂದುತ್ತಾ, ಅನುಕ್ಷಣ ಪ್ರಯೋಜನವನ್ನು ಹೊಂದುತ್ತಾ ನಮ್ಮ ಜೀವನದ ಸುಖಗಳಿಗೆ, ಆನಂದಕ್ಕೆ ವೈಭವಕ್ಕೆ ಕಾರಣವಾದವರನ್ನು ನಾವು ಪೂರ್ತಿಯಾಗಿ ಮರೆಯುತ್ತಿದ್ದೇವೆ, ಸ್ಮರಿಸುತ್ತಿಲ್ಲ ಕನಿಷ್ಟ ಅಷ್ಟು ಲಾಭವನ್ನುಹೊಂದುತ್ತಿದ್ದೇವೆಂಬ ಅರಿವು ಕೂಡಾ ನಮಗೆ ಇಲ್ಲ ಯಾವ ರೀತಿಯಿಂದಲೂ ಕೃತಜ್ಞತೆಯನ್ನು ತೋರಿಸುತ್ತಿಲ್ಲ.

ನಮ್ಮ ಜೀವನಕ್ಕೆ ಮೂಲವಾದವರನ್ನು ಹಿಡಿಸಿಕೊಳ್ಳದೆ ಹೋಗುವುದು ಎಂತಹ ದುರಾದೃಷ್ಟಕರವೋ ಆಲೋಚಿಸಬೇಕು ಎಷ್ಟೋ ಪ್ರಯೋಜನಗಳನ್ನು ಹೊಂದಿ, ಅವರನ್ನು ಮರೆತು ಹೋಗುವುದು. ಅಸಲು ಲಾಭ ಪಡೆಯುತ್ತಿದ್ದೇವೆಯೆಂದು ಕೂಡಾ ತಿಳಿದುಕೊಳ್ಳದೆ ಹೋಗುವುದಕ್ಕಿಂತ ಕೃತಜ್ಞತೆ ಇನ್ನೋಂದಿಲ್ಲ ಮರೆತು ಹೋಗುದಂತೆ ಇರುವಷ್ಟು ಲಾಭವನ್ನು ಪ್ರಯೋಜನವನ್ನು, ವೈಬವನ್ನು ಹೋಂದುತ್ತಾ ಕೂಡಾ ಮರೆಯುತ್ತಿದ್ದೇವೆ. ಅದ್ದರಿಂದ ಕನಿಷ್ಠ ಈಗಲಾದರೂ ತಿಳಿದುಕೊಂಡು, ಗುರುತಿಟ್ಟಕೊಂಡು ಆರಾಧಿಸೋಣ.

ನಮ್ಮ ಕಣ್ಣುಗಳಿಗೆ ಏನಾದರೂ ತೊಂದರೆ / ಲೋಪವಾದಾಗ ಆ ತೊಂದರೆ / ಲೋಪವನ್ನು ಸರಿಮಾಡಿದವರ ಬಗ್ಗೆ ಜೀವನವೆಲ್ಲಾ ಕೃತಜ್ಞತರಾಗಿ ಇರುತ್ತವೆ. ಆದರೆ ಆ ಕಣ್ಣು ಜೀವನ ಪರಿಯಾಂತ ನೋಡುವಂತಹ ಶಕ್ತಿಯನ್ನು ಕೊಟ್ಟುವರನ್ನು ಮರೆತು ಬಿಟ್ಟಿದ್ದೇವೆ. ಹಾಗೆಯೇ ಆಲಿಸುವುದರಲ್ಲಿ ಏನಾದರೂ ಲೋಪ ಬಂದರೆ ಅದನ್ನು ಸರಿಮಾಡಿದವರನ್ನು ನೆನೆಪಿಟ್ಟುಕೊಳ್ಳುತ್ತೇವೆ ಆದರೆ ಜೀವನವುದ್ದೂಕ್ಕೂ ಕೇಳಿಸುವಂತಹ ಶಕ್ತಿ ಕೊಟ್ಟವರನ್ನು ಮರೆತು ಹೋಗಿದ್ದೆವೆ ಹಾಗೆಯೇ ಮಾತನಾಡುವ ವಿಷಯದಲ್ಲಿ

ಜ್ಞಾನಪಕ ಶಕ್ತಿ ವಿಚಾರದಲ್ಲಿ, ಬಂದ ಲೋಪಗಳನ್ನು ಸರಿಮಾಡಿದವರ ಬಗ್ಗೆ ಕೃತಜ್ಞತೆಯಿಂದ ಇರುತ್ತೇವೆ, ಆದರೆ ಜೀವನ ಪರ್ಯಂತ ಆ ಶಕ್ತಿಕೊಟ್ಟವರನ್ನು ಮರೆತು ಬಿಡುತ್ತೇವೆ. ಹಾಗೆಯೇ ಕ್ಯ ಕಾಲುಗಳು ತೊಂದರೆಗೀಡಾದಾಗ ಸರಿಪಡಿಸಿದವರ ಬಗ್ಗೆ ಜೀವನ ಪರ್ಯಾಂತ ಕ್ರತಜ್ಞತೆಯಿಂದ ಇರುತ್ತೇವೆ. ಆದರೆ ಜೀವನವೆಲ್ಲಾ ನಡೆಯುವಂತ ಕೈಕಾಲುಗಳು ಮಾಡುವಂತ ಶಕ್ತಿ ಕೊಟ್ಟವರನ್ನು ಮರೆತುಹೋಗುತ್ತಿದ್ದೇವೆ.

ನಮ್ಮ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಜೀವನುದ್ದಕ್ಕೂ ಕೆಲಸ ಮಾಡಲು ಕಾರಣ ಯಾರು? ಆ ಇಂದ್ರಿಯಗಳಿಂದ ಇಷ್ಟು ಸುಖಗಳು, ಭೊಗಗಳು ಅನುಭವಿಸುತ್ತಿದ್ದೇವೆಂದರೆ ಕಾರಣ ಯಾರು? ನಾವು ಎಷ್ಟೋ ಮಧುರವಾದ ಆಹಾರ ವಸ್ತುಗಳನ್ನು ಸೇವಿಸುತ್ತಿದ್ದೇವೆ ಇಷ್ಟವಾದವುಗಳ ವಾಸನೆ ನೋಡುತ್ತಿದ್ದೇವೆ ಶ್ರಾವ್ಯವಾದ

ಸಂಗೀತವನ್ನು ಕೇಳುತ್ತಿದ್ದೇವೆ. ಸುಂದರ ದೃಶ್ಯಗಳನ್ನು ನೋಡಿ ಆನಂದಿಸುತ್ತಿದ್ದೇವೆ. ಶಾರೀಕ ಸುಖಗಳು, ಬಯಕೆಗಳು ತೀರಿಸಿ ಕೊಳ್ಳುತ್ತಿದ್ದೇವೆ. ಇಷ್ಟು ಬೋಗಗಳು, ಇಷ್ಟು ವೈಭವಗಳು, ಸುಖಗಳು ಆನಂದವನ್ನು ಹೋಂದುತ್ತಿದ್ದರೂ ಇವುಗಳನ್ನು ಅನುಭವಿಸಲು ಕಾರಣವಾದವರನ್ನು ಮರೆತು ಹೋಗುತ್ತಿದ್ದೇವೆ.

ಅಷ್ಟೆ ಅಲ್ಲ ನಿತ್ಯವು ನಮ್ಮ ದೇಹದಲ್ಲಿ ನಮಗೆ ತಿಳಿಯದಂತೆ ನಮ್ಮ ಆವಶ್ಯಕತೆಯೇ ಇಲ್ಲದಂತೆ ಸುಮಾರು 200 ಕ್ರೀಯಗಳು ಜರಗುತ್ತಿರುತ್ತವೆ. ಅಂದರೆ ಶ್ವಾಸ ಕ್ರಿಯೆ, ಜೀರ್ಣಕ್ರಿಯೆ, ರಕ್ತಪರಿಚಲನೆ, ವಿಸರ್ಜನೆ ಕ್ರಿಯೆಯಂತವುಗಳು ಅವು ಕ್ರಮಭದ್ಧವಾಗಿ / ಸಕ್ರೀಯಾವಾಗಿ ನಡೆಯುತ್ತಿರುವುದರಿಂದಲೆ ನಾವು ಇಷ್ಟ ಆರೋಗ್ಯವಾಗಿ ಇರಬಲ್ಲವರಾಗಿದ್ದೇವೆ, ಇಷ್ಟು ವೈಭವವಾಗಿ ಜೀವಿಸುತ್ತಿದ್ದೇವೆ, ಯಾವ ಒಂದು ಕ್ರಿಯೆ ಸರಿಯಾಗಿ ನಡೆಯದಿದ್ದರೂ ನಾವು ರೋಗದಿಂದ ಮಂಚದ ಮೇಲೆ ಬೀಳಬೇಕಾಗಿದ್ದೆ. ಹಾಗಾದರೆ ಇಷ್ಟು ಕ್ರಿಯೆಗಳು ಜೀವನದುದ್ದಕ್ಕೂ ನಡೆಯಲು ಕಾರಣವಾದ ಶಕ್ತಿಯನ್ನು ನಾವು ನೆನಪಿಟ್ಟುಕೊಂಡಿಲ್ಲ, ಸಂಪೂರ್ಣವಾಗಿ ಮರೆತು ಹೋಗಿದ್ದೇವೆ. ಮುಖ್ಯವಾಗಿ ಇವುಗಳೆಗೆಲ್ಲಾ ಮೂಲ ನಾವು ಜೀವಿಸಿರುವಷ್ಟು ಕಾಲವೂ ಜ್ಞಾನೇಂದ್ರಿಯಗಳಿಂದ, ಕರ್ಮೇಂದ್ರೀಯಗಳಿಂದ ಮಾಡುತ್ತಿರುವ ಕರ್ಮಗಳು, ಹಾಗೆಯೇ ನಮ್ಮ ದೇಹದಲ್ಲಿ ನಡೆಯುವ ಎಲ್ಲಾ ಕ್ರಿಯೆಗಳು "ಆತ್ಮಶಕ್ತಿಯಿಂದ ನಡೆಯುತ್ತವೆ" ಅಂದರೆ ಆತ್ಮದಿಂದಲೇ ಇಷ್ಟು ವೈಭವದಿಂದ ಜೀವಿಸುತ್ತಿದ್ದೇವೆ, ಆದರೆ ಅಂತಹ ಆತ್ಮವನ್ನು ಮಾತ್ರ ಪೂರ್ತಿ ನಿರ್ಲಕ್ಷ್ಯಸಿದ್ದೇವೆ,  ಮರೆತುಬಿಟ್ಟಿದ್ದೇವೆ.

ಆಲೋಚಿಸಿರಿ, ಆತ್ಮ ಏನಾದರೂ ನಮ್ಮ ಶರೀರದಿಂದ ಪಕ್ಕಕ್ಕೆ ಸರಿದುಹೋದರೆ ಶರೀರವೇ ಶವವಾಗುತ್ತದೆ. ಇಂದ್ರಿಯಗಳು ಕೆಲಸ ಮಾಡವು. ಶರೀರದಲ್ಲಿ ಯಾವ ಕ್ರಿಯೆಗಳು ನೆಡೆಯುವುದಿಲ್ಲ. ಶರೀರವು ಯಾವ ಕೆಲಸಗಳನ್ನು ಬಾರದು. ನಿಮಿಷದಲ್ಲಿ ಕೊಳಿತು ಹೋಗುತ್ತದೆ, ಅಲ್ಲಿಯವರೆಗೆ ಪ್ರೀತಿಸಿದವರು ಕೂಡಾ ನೋಡಲು ಭಯ ಪಡುತ್ತಾರೆ, ಕೊನೆಗೆ ಹೆಂಡತಿಯೂ ಹತ್ತಿರ ಬರುವುದಿಲ್ಲ. ಆತ್ಮವೇ ಇಲ್ಲದೇ ಹೋದರೆ ಶರೀರದ ಪರಿಸ್ಥಿತಿ ಏನಾಗುತ್ತದೋ ನಾವು ಊಹಿಸಿಕೊಳ್ಳಬೇಕು. ಹಾಗಾದರೆ ಅಂತಹ ಆತ್ಮವನ್ನು ಮರೆತಿದ್ದೇವೆ ಎಂದರೆ ಎಂತಹ ಕೃತಜ್ಞತೆಯೋ ಅರ್ಥ ಮಾಡಿಕೊಳ್ಳಬೇಕು

ಅಚಿತಹ ಆತ್ಮವನ್ನು ಮರೆಯಬಾರದು ಆತ್ಮದ ಬಗ್ಗೆ ಜೀವನವನ್ನೆಲ್ಲಾ ಕೃತಜ್ಞತೆ ಯನ್ನು ತೋರಿಸಬೇಕು, ಆರಾಧಿಸಬೇಕು. ಆದರೆ ನಾವು ಆತ್ಮವನ್ನು ನಿರ್ಲಕ್ಷ್ಯಿಸಿ ವಿಗ್ರಹಗಳನ್ನು, ಇತರ ವ್ಯಕ್ತಿಗಳನ್ನು ಆರಾಧಿಸುತ್ತಿದ್ದೇವೆ. ಎಲ್ಲಕ್ಕಿಂತಲೂ ಮುಖ್ಯವಾದ ಆತ್ಮನನ್ನು ನಿರ್ಲಕ್ಷ್ಯಸಿದ್ದೇವೆ. ಕನಿಷ್ಠ ಜೀವನದಲ್ಲಿ ಒಂದು ಬಾರಿಯಾದರೂ ಸ್ಮರಿಸುತ್ತಿಲ್ಲ. ಆತ್ಮದಿಂದ ಇಂತಹ ಲಾಭವನ್ನು ಹೋಂದುತ್ತಿದ್ದೇವೆಂಬ ಅರಿವೂ ಕೂಡ ಇಲ್ಲ. ಇದು ಬಹಳ ಬಹಳ ಶೋಚನೀಯ.

ನಾವು ಕೃತಜ್ಞತೆ ತೋರಿಸಬೇಕಾಗಿದ್ದು ಆತ್ಮದ ಬಗ್ಗೆ ಆತ್ಮನನ್ನು ಎಂದಿಗೂ ಮರೆಯಬಾರದು ಏಕೆಂದರೆ ಆತ್ಮನೆಂದರೆ ಯಾರೋ ಬೇರೆಯವರಲ್ಲ. ಯಾರಾದರೆ ಸಮಸ್ತ ಜೀವಿಗಳ ಜೀವನ್ನಕ್ಕೆ ಈ ಸಕಲ ಚರಾಚರ ಸೃಷ್ಟಿ ಜೀವನಕ್ಕೆ ಮೂಲ ಪುರುಷನೊ ಈ ಸೃಷ್ಟಿಗೆ ಆಧಾರವಾಗಿ, ಈ ಸೃಷ್ಟಿಯನ್ನು ನೆಡೆಸುತ್ತಿರುವನೊ ಆ ಭಗವಂತನೆ "ಆತ್ಮ". ಅಂದರೆ ಆತ್ಮನೆ ಭಗವಂತನು ಆತ್ಮನನ್ನು ನಿರ್ಲಕ್ಷಿಸುವುದೆಂದರೆ ಭಗವಂತನನ್ನು ನಿರ್ಲಕ್ಷಿಸಿದಂತೆಯೆ! ಆತ್ಮನನ್ನು ಮರೆತು ಬಿಡುವುದೆಂದರೆ ಭಗವಂತನನ್ನು ಮರೆತಂತಯೆ. ಆತ್ಮನನ್ನು ಗಮನಿಸದೆ ಹೋದರೆ (ಹಿಡಿಸಿಕೊಳ್ಳದೆ) ನಿಜವಾಗಿಯೂ ಭಗವಂತನನ್ನು ಹಿಡಿಸಿಕೊಳ್ಳದಂತೆಯೆ.

ಭಗವದ್ಗೀತೆಯಲ್ಲಿ "ಅಹಂ ಆತ್ಮಾ ಗೂಡಾ ಕೇಶ" ಎಂದು ಕೃಷ್ಣ ಭಗವಾನನು ಹೇಳಿದ್ದಾನೆ ಅಂದರೆ ನಾನು ಆತ್ಮನು ಎಂದು ತಿಳಿದುಕೊ ಅರ್ಜುನ ಎಂದು ಹೇಳಿದ್ದಾನೆ. ಅಷ್ಟೇ ಹೊರತು ನಾನು ವಿಗ್ರಹವೆಂದು, ಫೋಟೋ ಎಂದು ಹೇಳಿಲ್ಲ.

ನಾವು ಸ್ವಲ್ಪಲಾಭಕ್ಕೆ, ತಾತ್ಕಾಲಿಕ ಆನಂದಕ್ಕೆ ಕಾರಣವಾದವರ ಮೇಲೆ, ಜೀವನ ವೆಲ್ಲಾ ಕ್ರತಜ್ಞತೆ ತೋರಿಸುತ್ತೇವೆ, ಆರಾಧಿಸುತ್ತೇವೆ ಆದರೆ ಜೀವನ ಪರ್ಯಂತ ಲಾಭವನ್ನು ಹೊಂದುತ್ತಾ ಆತ್ಮನನ್ನು ಅಂದರೆ ಭಗವಂತನನ್ನು ನಿರ್ಲಕ್ಷ್ಯಸುತ್ತಿದ್ದೇವೆ. ಯಾರಿಗಾದರೂ ನಾವು ಸ್ವಲ್ಪ ಸಹಾಯ ಮಾಡಿದರೆ  ಅವರು ನಮ್ಮ ಬಗ್ಗೆ ವಿಶ್ವಾಸ ವನ್ನು ತೋರಿಸ ಬೇಕೆಂದು ಆಶಿಸುತ್ತವೇ. ನಮ್ಮನ್ನು, ನಮ್ಮ ಸಹಾಯ ವನ್ನು ಮರೆಯಬಾರದೆಂದು ಕೊಳ್ಳು ತ್ತೇವೆ. ನಮಗೆ ಕ್ರತಜ್ಞತೆ ತೋರಿಸಬೇಕೆಂದುಕೊಳ್ಳುತ್ತೇವೆ. ಆದರೆ ಜೀವನ ಪರ್ಯಂತ ಲಾಭವನ್ನು ಹೊಂದುತ್ತಾ ಇಷ್ಟು ವೈಭವವನ್ನು ಹೊಂದುತ್ತಾಇದ್ದರೂ ಕೂಡಾ ಆತ್ಮನನ್ನು ನಿರ್ಲಕ್ಷಿಸುತ್ತಿದ್ದೇವೆನೆಂದರೆ ಎಷ್ಟು ವಿಶ್ವಾಸವಿಲ್ಲದವರೂ ತಿಳಿದು ಕೊಳ್ಳಬಹುದು .

ಹಾಗಾದರೆ ಅಂತಹ ಆತ್ಮವನ್ನು ನೆನಪಿಟ್ಟುಕೊಳ್ಳಬೇಕೆಂದರೆ,  ಆತ್ಮದ ಬಗ್ಗೆ ಕೃತಜ್ಞತೆಯನ್ನು ತೊರಿಸಬೇಕೆಂದರೆ ಒಂದೇ ಮಾರ್ಗ "ಅದೇ ಆನಾಪಾನಸತಿಧ್ಯಾನ" ಧ್ಯಾನ ಮಾಡಿದರೇನೆ ನಮ್ಮ ಆತ್ಮ ಮೇಲೆ ದೃಷ್ಟಿಯಿಟ್ಟಂತೆ ಆತ್ಮನನ್ನು ನೆನಪಿಟ್ಟುಕೊಂಡಂತೆ, ಅಂದರೆ ಭಗವಂತನನ್ನು ನೆನಪಿಟ್ಟುಕೊಂಡಂತೆ, ಅಂದರೆ ಭಗವಂತನನ್ನು ಆರಾಧಿಸಿದಂತೆ.

ಭಗವಂತನು ಎಲ್ಲರಲ್ಲು ಆತ್ಮಸ್ವರುಪನಾಗಿ ಇದ್ದು ಎಲ್ಲರಿಗೂ ಉಪಕಾರವನ್ನು ಮಾಡುತ್ತಿದ್ದಾನೆ. ಅಂತಹ ಭಗವಂತನನ್ನು ಧ್ಯಾನದ ಮೂಲಕ ಆರಾಧಿಸಿ ಕೃತಜ್ಞತೆಯನ್ನು ತೋರಿಸಬೇಕು. ಇದಕ್ಕಿಂತ ಜೀವನದಲ್ಲಿ ನಾವು ಮಾಡಬೇಕಾದ್ದಂತಹ ಮಹತ್ಕಾರ್ಯ ಇನ್ನೊಂದಿಲ್ಲ.

# 13. "ಭಗವಂತನು ನಿರಾಕಾರನು!

ಭಗವಂತನು ಹೇಗಿರುತ್ತಾನೆ? ಎಂದು ಕೇಳಿದರೆ ಅಂದರೆ ತಕ್ಷಣವೆ ಭಗವಂತನು ನಿರಾಕಾರನು ಎಂದು ಹೇಳುತ್ತೇವೆ. ಇನ್ನು ಭಗವಂತನನ್ನು ಕುರಿತು ವರ್ಣಿಸು ಎಂದರೆ ಆತನು ಅನಂತ ಶಕ್ತಿಸ್ವರೂಪನು, ಸಕಲ ಚರಾಚರ ಸೃಷ್ಟಿ ಎಲ್ಲಾ ವ್ಯಾಪಿಸಿ ಇರುವವನು, ಹುಟ್ಟು– ಸಾವಿಲ್ಲದವನು, ಆದಿ–ಅಂತ್ಯವಿಲ್ಲದವನು ನಾಮರೂಪ ರಹಿತನು, ಗುಣಾತೀತನು, ದಯಾಮಯನು, ಕರುಣಾಮಯನು ಸರ್ವವೂ ತಾನಾಗಿ ಇರುವವನು, ತೇಜೋಮಯನು, ವರ್ಣಿಸಲಾಗದವನು, ಊಹೆಗೆ ನಿಲುಕದವನು, ದರ್ಶಿಸಲು ಸಾಧ್ಯವಾಗದವನು, ಆ ಸ್ಥಿತಿ ಅನುಭೂತಿ ಹೊಂದಬೇಕೇ ಹೊರೆತು ನೋಡಲಾಗಲಿ, ವರ್ಣಿಸಲಾಗಲಿ ಸಾಧ್ಯವಿಲ್ಲವೆಂದು ಭಗವಂತನ ಕುರಿತು ಹೇಳುತ್ತೇವೆ.

ಆದರೆ ಬಹಳ ಜನರಿಗೆ ಭಗವಂತನ ಶಕ್ತಿ ತಿಳಿಯದೆ ಆತನನ್ನು ವಿವಿಧರೂಪಗಳಲ್ಲಿ ಊಹಿಸಿಕೊಂಡು ಪೂಜೆಗಳು, ಪ್ರಾರ್ಥನೆ ಮಾಡುತ್ತಾ, ಪುಣ್ಯಕ್ಷೇತ್ರಗಳನ್ನು ದರ್ಶಿಸುತ್ತಾ. ಭಗವಂತನನ್ನು ದರ್ಶಿಸಿದೆವು ಎಂದು, ನೋಡಿದೆವು ಎಂದು ಭಾವಿಸುತ್ತಾರೆ. ಆದರೆ ಇದು ಅವಿವೇಕವೆ. ವಾಸ್ತವದಲ್ಲಿ ಭಗವಂತನನ್ನು ಬಾಹ್ಯ ಜಗತ್ತಿನಲ್ಲಿ ನೋಡಲಾಗಲಿ, ತಿಳಿದುಕೊಳ್ಳವುದ್ದಾಕ್ಕಾಗಲಿ ಯಾರಿಗೂ ಸಾಧ್ಯವಿಲ್ಲ. ಆತನನ್ನು ಕಠೊರವಾದ ಧ್ಯಾನ ಸಾಧನೆಯಿಂದ ಅನುಭೂತಿ ಹೊಂದಬೇಕೇ ಹೊರೆತು ದರ್ಶಿಸಲಾರರು. ಹೆಂಡತಿಯನ್ನು ಪ್ರೇಮಿಸಬಹುದಾಗಲಿ ಪ್ರೆಮವನ್ನು ತೊರಿಸಲಾರೆವಲ್ಲವೇ?

ಗುಲಾಬಿ ವಾಸನೆಯನ್ನು ಅನುಭುತಿ ಹೊಂದಬಲ್ಲರೆ ಹೊರೆತು, ವಾಸನೆಯನ್ನು ಕಣ್ಣಿಂದ ನೊಡಲಾರೆವು ಅಲ್ಲವೆ? ಮಾವಿನ ಹಣ್ಣನ್ನು ತಿಂದು ರುಚಿಯನ್ನು ಅನುಭೂತಿ ಹೊಂದಲೆಬಲ್ಲೆವಾಗಲಿ ರುಚಿಯನ್ನು ಕಣ್ಣಿಗೆ ತೋರಿಸಲಾರೆವು, ಗಾಳಿ ಬೀಸಿದಾಗ ಸ್ಪರ್ಶದ ಮೂಲಕ ಅನುಭೂತಿ ಹೊಂದಬಲ್ಲೆಯಾಗಲಿ ಗಾಳಿಯನ್ನು ನೋಡಲಾಗುವುದಿಲ್ಲ ಅಲ್ಲವೇ? ಹಾಗೇಯೆ ಭಗವಂತನ ಅನುಭೂತಿ ಹೊಂದ ಬಲ್ಲೆವಾಗಲಿ ದರ್ಶಿಸಲಾರೆವು. ಕಾರಣಭಗವಂತನು ನಿರಾಕಾರನು, ಭೌತಿಕ ಕಣ್ಣುಗಳಿಂದ ದರ್ಶಿಸಲಾಗಲಾರದವನು

ಆದರೆ ಭಗವದಾನುಭೂತಿ ಹೊಂದಿದವರ ಆನಂದ ವರ್ಣಿಸಲಾಗದು, ಅವರ

ಸ್ಥಿತಿಯನ್ನು ವರ್ಣಿಸಲಾಗದು. ಅಂತಹವರಿಗೆ ಲೋಕದಲ್ಲಿ ಬೇಕಾಗಿರುವುದು ಏನೂ ಇರುವುದಿಲ್ಲ. ಏಕೆಂದರೆ ಸಮಸ್ತ್ರವು ತಾನಾಗಿ ಇರುವೆನೆಂದು ತಿಳಿದು ಕೊಂಡು ಸ್ಥಿತಿ. ಎಲ್ಲಾ ನಾನೆ. ನಾನೇ ಎಲ್ಲಾ ಎಂಬ ಅರಿವನ್ನು ಮಾಡಿಕೊಂಡ ಸ್ಥಿತಿ ಹಾಗೆ ಭಗವದಾನುಭೂತಿ ಹೊಂದುವುದರ ಮೂಲಕ ನಾವೇ ಭಗವಂತನೆಂದು ತಿಳಿದುಕೊಳ್ಳತ್ತೇವೆ. ನಾವೇ ಭಗವಂತ ನಾದಾಗ ನಮಗೆ ಭಗವಂತನು ಎಲ್ಲಿ ಕಾಣಿಸುತ್ತಾನೆ? ಭಗವಂತನನ್ನು ನೋಡುವುದೆಂದರೆ "ಅಹಂ ಬ್ರಹ್ಮಾಸ್ಮಿ" ಎಂದು ತಿಳಿದುಕೊಳ್ಳುವುದೇ. ಕಂಕಳಲ್ಲಿ ಮಗುವನ್ನು ಇಟ್ಟುಕೊಂಡು ಊರೆಲ್ಲಾ ಹುಡುಕಿದರು ಕಾಣಿಸುತ್ತಾನೆಯೆ? ಆದ್ದರಿಂದ ಭಗವಂತನನ್ನು ನೋಡಬೇಕೆನ್ನುವುದು ಯಾರಗೂ ಸಾಧ್ಯವಿಲ್ಲ. ಹಾಗೆ ಆತ್ಮಾನುಭೂತಿ ಹೊಂದಿದ ಸ್ಥಿತಿಯನ್ನು "ಆತ್ಮ ಅನುಭವಂ" ಎನ್ನುತ್ತಾರೆ. ಇನ್ನೂ "ಆತ್ಮ ಪ್ರಾಪ್ತಿ" "ಆತ್ಮಸಾಕ್ಷಾತ್ಕಾರ" ಹೊಂದಿದವನು, ಎನ್ನುತ್ತಾರೆ. ತಾನುಯಾರೂ ಎಂದು ತಾನು ತಿಳಿದು ಕೊಂಡವನು, ಆತ್ಮಜ್ಞಾನವನ್ನು ಹೊಂದಿದವನು, ಹೀಗೆ ಅನೇಕ ರೀತಿಯಾಗಿ ಹೇಳುತ್ತಿರುತ್ತಾರೆ. ಏನಾದರು ಎಲ್ಲಾ ಒಂದೇ ! ನಾವು ಈ ಸ್ಥಿತಿ ಯನ್ನು ಹೊಂದಲು ಪ್ರಯತ್ನಿಸಬೇಕು ಈ ಸ್ಥಿತಿಯನ್ನು ಹೊಂದಬೇಕೇಂದರೆ ಸರಿಯಾದ ಧ್ಯಾನ ಪಧ್ದತಿ ಅಂದರೆ "ಅನಾಪಾನಸತಿಧ್ಯಾನ" ಮೂಲಕವೇ ಸಾಧ್ಯ.

ವೆಧಗಳಲ್ಲಿ "ಅಹಂ ಬ್ರಹ್ಮಾಸ್ಮಿ" "ಅಯಮಾತ್ಮ ಬ್ರಹ್ಮ" ಎಂದು ಹೇಳಾಲಾಗಿದೆ ಅಂಥರೆ "ನಾನೆ ಬ್ರಹ್ಮನು" ಅಂದರೆ "ನಾನೇ ಭಗವಂತನಾಗಿದ್ದೇನೆ" ಎಂದು ಹೇಳಾಲಾಗಿದೆ ಆ ನಾನು ವನ್ನೆ ಆತ್ಮ ಎಂದಿದ್ದಾರೆ ಅಂದರೆ "ನಾನು ಶರೀರ ಅಲ್ಲ ನಾನು ಆತ್ಮ ಎಂದು ಹೇಳಲಾಗಿದೆ.

ಆತ್ಮನನ್ನು ಯಾರೂ ನೋಡಲಾರರು, ಕಣ್ಣಿನಿಂದಾಗಲಿ, ಸೂಕ್ಷ್ಮದರ್ಶಕದಿಂದಾಗಲಿ, ನೋಡಲು ಸಾಧ್ಯವಿಲ್ಲ ಆತ್ಮನನ್ನು ಅನುಭೂತಿ ಹೊಂದಬೇಕಾದದ್ದೇ, ಆ ಆತ್ಮನೇ ಭಗವಂತನು ಆಕಾರವಿಲ್ಲದ ಭಗವಂತನನ್ನು ಹೊಂದಬೇಕೆಂದರೆ ಧ್ಯಾನವನ್ನು ಮಾಡುವುದು ಅದೊಂದೇ ಮಾರ್ಗ.

ಭಗವಂತನಿಗೆ ರೂಪವಿಲ್ಲ, ಭಗವಂತನು ನಿರಾಕಾರನೆಂದು ತಿಳಿದುಕೊಡು ಧ್ಯಾನವನ್ನು ಮಾಡಬೇಕು.

# 14. ಭಗವಂತನು ಚೈತನ್ಯ ಸ್ವರೂಪನು

ವಿಗ್ರಹ ಅಂದರೆ ಶಿಲೆ ಶಿಲೆ ಕೂಢಾ ಭಗವಂತನೆ. ಆದರೆ ಶಿಲೆಯಲ್ಲಿರುವ ಚೈತನ್ಯವನ್ನು ಗಾಢನಿದ್ರಾವಸ್ಥೇಗೆ ಹೋಲಿಸುತ್ತಾರೆ. ಅದಕ್ಕೆ ಶಿಲೆಗಳು ಚಲಿಸಲಾರವು, ಸ್ಪಂದಿಸುವುದಿಲ್ಲ ಆದ್ದರಿಂದ ಶಿಲೆಗಳಿಗೆ ಮಾಡುವ ಆರಾಧನೆ ನಿಷ್ಪಯೋಜನೇಯಾದದ್ದು ನಾವು ಏನು ಮಾಡಿದರೂ ತಕ್ಕ ಫಲವನ್ನು ಹೊಂದಬೇಕು ಹೊರತು ಶ್ರಮವು ವ್ಯರ್ಥ ವಾಗ ಬಾರದು.

ನಾವು ಎಷ್ಟು ವರ್ಷ ಪೂಜಿಸಿದರೂ, ಪ್ರಾರ್ಥಿಸಿದರೂ ಫಲವನ್ನು ಹೊಂದಲಾಗುತ್ತಿಲ್ಲ. ನಿರಾಶೆಹೊಂದಿ ವಿಗ್ರಹಗಳನ್ನು ಬದಲಾಯಿಸುತ್ತಿದ್ದೇವೆ ಹಾಗೇ ಬದಲಾಯಿಸಿ ದರೂ ಕೂಡಾ ಅದು ಸಹ ವಿಗ್ರಹವಲ್ಲವೇ? ಹಾಗಿರುವಾಗ ಫಲಿತಾಂಶದಲ್ಲಿ ಬದಲಾವಣೆ ಹೇಗೆ ಬರುತ್ತದೆ.

ಕೊನೆಗೆ ಮತಗಳನ್ನು ಸಹಾ ಬದಲಾಯಿಸುತ್ತೇವೆ. ಆಗ ಕೂಡಾ ಮಾಡುವ ಕೆಲಸದಲ್ಲಿ ಅಂದರೆ ಆರಾಧನೆಯಲ್ಲಿ ಬದಲಾವಣೆ ಬರುವುದಿಲ್ಲ ಆದ್ದರಿಂದ ಜೀವನದಲ್ಲಿ ಎಂತಹ ಬದಲಾವಣೆಯಾಗಲಿ, ಫಲವಾಗಲಿ ಬರುತ್ತಿಲ್ಲ. ಜೀವನದಲ್ಲಿ ಬದಲಾವಣೆ ಇಲ್ಲವಾದ್ದರಿಂದ ಸರಿಯಾದ ಕರ್ಮಗಳನ್ನು ಮಾಡದೆ, ಪಾಪಗಳನ್ನು ಮಾಡುತ್ತಿದ್ದೇವೆ . ಜೀವನವನ್ನು ಇನ್ನೂ ದುಃಖಮಯ ಮಾಡಿಕೊಳ್ಳುತ್ತಿದ್ದೇವೆ

ಶ್ರೀ ಮಧ್ಭಾಗವತದಲ್ಲಿ (29–22) ಭಗವಂತನು ಹೇಳಿದ ಸಂದೇಶ "ಸರ್ವ ಜೀವಿಗಳಲ್ಲಿ, ಆತ್ಮಸ್ವರೂಪದಲ್ಲಿ ಈಶ್ವರನಾಗಿ ಇರುವ ನನ್ನ ಉಪಸ್ಥಿತಿಯ ಗುರುತು ತಿಳಿಯದೆ, ಯಾರೂ ನನ್ನನ್ನು ಪ್ರತಿಮೆಗಳು ಮೂಲಕ ಪೂಜಿಸುತ್ತಾರೊ ಅಂತಹವರ ಪೂಜೆಯು ಬೂದಿಯಲ್ಲಿ ಹಾಕಿದ ಯಜ್ಞಾದ್ರವ್ಯಗಳಂತೆ ನಿಷ್ಪ್ರಯೋಜನ.

ಇದರಿಂದಾಗಿ ಚೈತನ್ಯವಿಲ್ಲದ ಕಲ್ಪತವಾದ ಶಿಲೆಯನ್ನು ಆರಾಧಿಸುವುದು ನಿಷ್ಪ್ರಯೋಜನವೇಂದು ತಿಳಿಯಬಹುದು.

ಹಾಗೇಯೇ ವೃಕ್ಷವು ಕೂಡಾ ಭಗವಂತನೆ ಆದರೂ ವೃಕ್ಷದಲ್ಲಿರುವ ಚೈತನ್ಯವನ್ನು ಸ್ವಪ್ನಾವಸ್ಥೆಗೆ ಹೋಲಿಸುತ್ತಾರೆ ಅದಕ್ಕೆ ಆರಾಧಿಸಿದರು ಪ್ರಯೋಜನವಿಲ್ಲ

ಹಾಗೇಯೇ ಪ್ರಾಣಿಗಳು ಕೂಡಾ ಭಗವಂತನೆ ಜಂತುಗಳಲ್ಲಿನ ಚೈತನ್ಯವನ್ನು ಜಾಗ್ರತವಸ್ಥೆಯನ್ನು ಅಂದರೆ ಎಚ್ಚರ ಅವಸ್ಥೆಯನ್ನಾಗಿ ಹೋಲಿಸುತ್ತಾರೆ ಅದ್ದರಿಂದ ಪ್ರಾಣಿಗಳು ಸ್ಪಂದಿಸುತ್ತವೆ. ಚಲನೆ ಇದೆ ಇಲ್ಲಿ ಚೈತನ್ಯವು ಪೂರ್ತಿ ಚೈತನ್ಯದಿಂದ ಇರುವುದಿಲ್ಲ. ಆದ್ದರಿಂದ ಪ್ರಾಣೀಗಳನ್ನು ಪೂಜಿಸಿದರೂ ಪ್ರಯೋಜನವಿಲ್ಲ.

ಹಾಗೆಯೇ ಮಾನವನು ಭಗವಂತನೆ ಆದರೆ ಮಾನವನಲ್ಲಿಯ ಚೈತನ್ಯ ಪೂರ್ತಿಯಾಗಿ, ಚೈತನ್ಯ ದಂತ ವಾಗಿ ಇರುತ್ತದೆ ಆದ್ದರಿಂದ ಸತ್ಯದಾದ ಭಗವಂತನ ಉಪಸ್ಥಿತಿಯು ಸ್ವರೂಪದಲ್ಲಿ ಮಾನವರಲ್ಲಿಯೇ ಇದೆ ಆದ್ದರಿಂದ ಆತ್ಮ ದರ್ಶನವೇ ಭಗವತ್ ದರ್ಶನ ಎನ್ನುತ್ತಾರೆ. ಆತ್ಮನು ಹೊಂದಿದರೆ ಭಗವಂತನನ್ನು ಹೊಂದಿದಂತೆಯೇ,

ಆತ್ಮ ಸಾಕ್ಷಾತ್ಕಾರ ಹೊಂದಿದವರು ಅಂದರೆ ಭಗವತ್ ಸಾಕ್ಷಾತ್ಕಾರ ಹೊಂದಿದವರ ಆನಂದವು ವರ್ಣಿಸಲಾಗದ್ದು ಆ ಆನುಭುತಿಯನ್ನು ಆನುಭವಿಸಬೇಕೆ ಹೊರೆತು ಮಾತುಗಳಲ್ಲಿ ಹೇಳಲು ಸಾಧ್ಯವಿಲ್ಲ. ಮಾತುಗಳು ಸಾಲದೆಂದು ಅನುಭೂತಿ ಹೊಂದಿದ ಯೋಗಿಗಳು ಹೇಳುತ್ತಾ ಇರುತ್ತಾರೆ.

ಆದ್ದರಿಂದ ಆತ್ಮಾನುಭೂತಿ ಹೊಂದಿದ ಯೋಗಿಗಳು ವರ್ಣಿಸಲಾಗದು, ಊಹಿಸಲಾಗದ, ಆ ಆನಂದ ಸ್ಥಿತಿಯನ್ನು ಬಿಡಲಾರದೆ ಹಾಗೆಯೇ ಇದ್ದುಬಿಡುತ್ತಾರೆ. ಇದನ್ನೆ ಸಮಾಧಿಸ್ಥಿತಿ ಎಂದು ಹೇಳುತ್ತಾರೆ.

ಆದ್ದರಿಂದ ಆ ಸ್ಥಿತಿಯನ್ನು ಹೊಂದಿದವರು ಆ ಆನಂದವನ್ನು ಅನುಭವಿಸುತ್ತಿರುವವರು, ಆ ಸಮಾಧಿ ಸ್ಥಿತಿಯಲ್ಲಿ ದಿನಗಳು, ತಿಂಗಳು ಗಟ್ಟಲೆ ಹಾಗೆಯೇ ಇದ್ದು ಬಿಡುತ್ತಾರೆ. ಅಂದರೆ ಭಗವಂತನ ದರ್ಶನ ಹೊಂದಿದವರು ಆ ಆನಂದಾನು ಭೂತಿ ಬಿಟ್ಟು ಹೊರೆಗೆ ಬರಲಾರರರು.

ಇಲ್ಲಿ ನಾವು ಸ್ವಲ್ಪ ಗಮನಿಸಿದರೆ ನಾವು ವಿಗ್ರಹವನ್ನು ಭಗವಂತನೆಂದು ಆರಾಧಿಸುತ್ತಿದ್ದೇವೆ. ಅಲ್ಲವೆ? ಹಾಗಾದರೆ ವಿಗ್ರಹ ದರ್ಶನವಾದರೆ ಭಗವಂತನ ದರ್ಶನವಾದಂತೆಯೆ ಅಲ್ಲವೆ? ಹಾಗಾದರೆ ಭಗವದ್ ದರ್ಶನವಾದಾಗ ಅಲ್ಲಿ ಬಹಳಷ್ಟು ಹೊತ್ತು ಏಕೆ ನಮಗೆ ಇರಲಾಗುತ್ತಿಲ್ಲ? ಕಾರಣ ನಿಜವಾದ ಭಗವತ್ ದರ್ಶನಾನು ಭೂತಿ ಹೊಂದದೆ ಹೋಗುವುದರಿಂದ ಅಲ್ಲವೇ?

ನಿಜವಾಗಿ ವಿಗ್ರಹವೇ ಭಗವಂತನಾದರೆ? ಆತನ ದರ್ಶನವಾದ ಮೇಲೆ ಭಗವಂತನನ್ನು ಅಂದರೆ ವಿಗ್ರಹವನ್ನು ಬಿಟ್ಟು ಬರುತ್ತೇವೆಯೆ? ಬರುತ್ತಿದ್ದೇವೆ ಎಂದರೆ ವಿಗ್ರಹವು ಭಗವಂತನು ಅಲ್ಲವೆಂದೇ ಅಲ್ಲವೆ?

ಆದ್ದರಿಂದ ಆತ್ಮರೂಪದಲ್ಲಿ ಇರುವ ಚೈತನ್ಯ ಸ್ವರೂಪನಾದ ಭಗವಂತನನ್ನೆ ಆರಾಧಿಸಬೇಕು. ಹಾಗೆ ಆರಾಧಿಸಿದರೆನೆ ನಮಗೆ ಸಮಸ್ತ ದುಃಖಗಳು ಶಾಶ್ವಾತವಾಗಿ ನಿವಾರಣಯಾಗುತ್ತವೆ.

ಹಾಗಾದರೆ ಆತ್ಮನು ಆರಾಧಿಸಬೇಕೆಂದರೆ ಒಂದೆ ಮಾರ್ಗ. ಅದೆ "ಅನಾಪಾನಸತಿ ಧ್ಯಾನಂ". ಧ್ಯಾನವನ್ನು ಮಾಡುವುದೆಂದರೆ ಭಗವಂತನನ್ನು ಆರಾಧಿಸುವುದು. ಆದ್ದರಿಂದ "ಭಗವಂತನು ಚೈತನ್ಯ ಸ್ವರೂಪನೆಂದು ತಿಳಿದುಕೊಂಡು ಧ್ಯಾನವನ್ನು ಮಾಡಿ ಭಗವತ್ ಸಾಕ್ಷಾತ್ಕಾರ ಹೊಂದೋಣ.



"ಮೈತ್ರಿಯ ಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ದ್ವೇಷವು ಅಂತ್ಯವಾಗುತ್ತದೆ.
ಕರುಣಾ ಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ಕ್ರೌರ್ಯವು ಅಂತ್ಯವಾಗುತ್ತದೆ.
ಮುದಿತಾ ಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ಅಸೂಯೆ ಅಂತ್ಯವಾಗುತ್ತದೆ.
ಉಪೇಕ್ಷಾ ಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ಪ್ರಿಯ, ಅಪ್ರಿಯ ಭಾವ ಅಂತ್ಯವಾಗುತ್ತದೆ.
ಅಶುಭಾಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ಸುಂದರತೆಯ ಭಾವ ಅಂತ್ಯವಾಗುತ್ತದೆ.
ಅನಿತ್ಯ ಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ನಾನು ಎಂಬ ಅಹಂ ಅಂತ್ಯವಾಗುತ್ತದೆ.
ಅನಾಪಾನಾಸತಿ ಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ಜ್ಞಾನ ದೊರೆಯುತ್ತದೆ,
ಜ್ಞಾನದಿಂದ ಮುಕ್ತಿ ಸಿಗುತ್ತದೆ."

- ಭಗವಾನ್ ಬುದ್ಧ

# 15. ಭಗವಂತನ ಶಕ್ತಿ ಅಪಾರ !

ಅನಂತವಾದ ಸೃಷ್ಟಿಯಲ್ಲಿ ಕೋಟ್ಯಾನುಕೋಟಿ ಲೋಕಗಳಲ್ಲಿ ಕಣ್ಣಿಗೆ ಕಾಣಿಸುವ ಭೌತಿಕ ಲೋಕಗಳು ಇವೆ. ಕಣ್ಣಿಗೆ ಕಾಣಿಸದ ಸು – ಲೋಕಗಳು ಇವೆ, ಒಂದೇ ರೀತಿಯಾಗಿ ನಮ್ಮ ಕಣ್ಣಿಂದ ನೋಡಲಾಗುವ ಭೌತಿಕ ಲೋಕಗಳು ಅಂದರೆ ಭೂಮಿ, ಚಂದ್ರ, ಸುರ್ಯ, ನಕ್ಷತ್ರಗಳು ಇವೆಲ್ಲವನ್ನು ಸೇರಿಸಿ ಒಂದು ನೀರಿನ ಹನಿಯಂತಹವು ಎನ್ನುತ್ತಾರೆ. ಇನ್ನೂ ನಮ್ಮ ಸೃಷ್ಟಿಯಲ್ಲಿ ನೋಡಬಲ್ಲ ಭೌತಿಕ ಲೋಕಗಳು ಎಷ್ಟಿವೆ ಎಂದರೆ ಸಮುದ್ರದಷ್ಟು ಎನ್ನುತ್ತಾರೆ

ಅಚಿದರೆ ನೀರಿನ ಹನಿಗೆ ಸಮುದ್ರಕ್ಕೆ ಎಷ್ಟು ಅಂತರವಿದೆ ಎಂದು ತಿಳಿದುಕೊಂಡರೆ ಈ ಅನಂತವಾದ ಸೃಷ್ಟಿಯಲ್ಲಿ ಎಷ್ಟು ಭೂಮಂಡಲಗಳು, ಎಷ್ಟು ಸೂರ್ಯ ಗೋಳಗಳು, ಕೋಟ್ಯಾನುಕೋಟಿ ಗ್ರಹಗಳು, ವಿಶ್ವಗಳು ಇವೆಯೊ ಎಂದು ಊಹಿಸಿಕೊಳ್ಳಬಹುದು. ಸೃಷ್ಠಿಯಲ್ಲಿ ಭೌತಿಕ ಲೋಕಗಳಲ್ಲದೆ ಕಣ್ಣಿಗೆ ಕಾಣಿಸದ ಸು–ಲೋಕಗಳು ಕೂಡಾ ಕೋಟ್ಯಾನುಕೋಟಿ ಇವೆ, ಅವು ಕಾಣಿಸುವ ಭೌತಿಕ ಲೋಕಗಳಿಗಿಂತ ಮೂರು ಪಟ್ಟು ಇವೆ ಎನ್ನುತ್ತಾರೆ. ಹೀಗಾಗಿ ಭಗವಂತನಿಂದ ಸೃಷ್ಟಿಸಲ್ಪಟ್ಟು ನಡೆಯಲ್ಪಡುತ್ತಿರುವ ಸೃಷ್ಟಿ, ಮಾನವನ ಬುಧ್ದಿ ಮತ್ತೆಗೆ ನಿಲುಕದ್ದು ಎಂದು ತಿಳಿದು ಕೋಳ್ಳಬಹುದು ಅಂದರೆ ಭಗವಂತನ ಕುರಿತು ಆಗಲಿ, ಭಗವಂತನ ಶಕ್ತಿ ಕುರಿತಾಗಲಿ ನಾವು ಅರ್ಥ ಮಾಡಿಕೊಳ್ಳಲಾರೆವೆಂದೆ ಹೇಳಬೇಕು. ಅರ್ಥ ಮಾಡಿಕೊಳ್ಳಲಾರೆವು ಕೂಡಾ.

ಇಚಿತಹ ಅದ್ಭುತವಾದ, ಅನಂತವಾದ ಭಗವಂತನ ಸೃಷ್ಟಿಯಲ್ಲಿ ಅಂದರೆ ಕೋಟಿ, ಕೋಟಿ, ಕೋಟಿ ಕೋಟಿ ಲೋಕಗಳಲ್ಲಿ ಅಸಲು ಭೂಮಂಡಲದ ಅಸ್ತಿತ್ವ ಎಷ್ಟು? ಅದರಲ್ಲಿ ಒಂದು ಖಂಡವೆಷ್ಟು? ಆಲೋಚಸಿದರೆ ಅದರಲ್ಲಿ ಒಂದು ದೇಶವೆಷ್ಟು? ಅದರಲ್ಲಿ ಒಂದು ರಾಜ್ಯವೆಷ್ಟು? ಅದರಲ್ಲಿ ಒಂದು ಜಿಲ್ಲೆ, ಅದರಲ್ಲಿ ಒಂದು ಗ್ರಾಮ, ಆಲೋಚಿಸದರೆ ಅದರಲ್ಲ ನಮ್ಮ ಮನೆ, ಅದರಲ್ಲಿ ನಮ್ಮನ್ನು ಊಹಿಸಿಕೊಂಡರೆ, ಈ ಅನಂತವಾದ ಸೃಷ್ಟಿಯಲ್ಲಿ ನಮ್ಮ ಅಸ್ತಿತ್ವ ಎಷ್ಟು ಸೂಕ್ಷ್ಮಾತಿ ಸೂಕ್ಷ್ಮ! ಎಂದು ಆಲೋಚಿಸಿಕೊಳ್ಳಬಹುದು.

ನಾವು ಎಷ್ಟೊ ಅಧ್ಬುತಗಳನ್ನು ಸೃಷ್ಟಿಸುತ್ತೇವೆ ಎಂದು ಅಂದುಕೊಳ್ಳುತ್ತೇವೆ, ಹಾಗೆ

ಕಾರುಗಳು, ವಿಮಾನಗಳು, ರೇಡಿಯೋಗಳು, ಟಿ.ವಿಗಳು, ಮೊಬೈಲ್‌ಗಳು, ಕಂಪ್ಯೂಟರ್ಗ್ಗಳು, ಅಂತರಿಕ್ಷ ನೌಕೆಗಳು, ರೋಬೋಟ್‌ಗಳು, ಹೀಗೆ ಎಷ್ಟೋ ನಾವು ಸೃಷ್ಟಿಮಾಡಿದ್ದೆವೆ. ಹಾಗಾದರೆ ಹೀಗೆ ನಾವು ಸೃಷ್ಟಿಸಿದವೇ ಎಷ್ಟೋ ಅದ್ಬುತಗಳನ್ನು ಮಾಡುತ್ತಿದ್ದರೆ ಇನ್ನು ಅಂತಹ ನಮ್ಮನ್ನು ಸೃಷ್ಟಿಸಬಲ್ಲಂತಹ ಭಗವಂತನ ಶಕ್ತಿ ಎಷ್ಟೆಂದು ನಾವು ಊಹಿಸಿಕೊಳ್ಳಬಹುದು.

ಆಲೋಚಿಸಿರಿ ನಾವು ಎಷ್ಟೊ ತಯಾರು ಮಾಡಿದರೂ ಯಾವುದು ಶಾಶ್ವತವಾಗಿ ಇರುವುದಿಲ್ಲ. ನಾವು ಶ್ರೇಷ್ಠ(ಉತ್ತಮ) ಎನ್ನುವಂತಹವುಗಳೆಲ್ಲಾ ಅಶಾಶ್ವತವಾದವು ಗಳೆ ಆಗುತ್ತವೆ. ಆದರೆ ಭಗವಂತನ ಸ್ರಷ್ಟಿ ಶಾಶ್ವತವಾಗಿ ಕೋಟಿಗಟ್ಟಲೆ ವರ್ಷಗಳಿಂದ ಕೆಲಸ ಮಾಡುತ್ತಲೆ ಇದೆ.

ಭೂಮಿ ತಿರುಗುವುದು, ಚಂದ್ರನು ತಿರುಗುವುದು, ಹಗಲು ಋತುಗಳು, ಯುಗಗಳು ಹಾಗೆಯೇ ಕೋಟಿಗಟ್ಟಲೆ ಲೋಕಗಳು –ಕೆಲಸಮಾಡುತ್ತಿದೆ ಅಷ್ಟೆ ಅಲ್ಲ, ಅಸಲು ಆಲೋಚಿಸಿದರೆ ಸಮಸ್ತ ಜೀವಿಗಳೆ ಅಲ್ಲ, ಮಾನವನ ದೇಹವೆ ಒಂದು ಅಧ್ಬುತವಾದ ಸೃಷ್ಟಿ ಎಂದು ತಿಳಿದುಕೊಳ್ಳಬಹುದು.

ನಾವು ಚಂದ್ರಮಂಡಲಕ್ಕೆ ಹೋಗುವಂತಾದೆವು, ಇದನ್ನು ಮಾಡುವಂತಾದೆವು ಅದನ್ನು ಸೃಷ್ಟಿಸಬಲ್ಲೆವು ಎಂದುಕೊಳ್ಳತ್ತೇವೆ ಹಾಗೆಯೆ ನನಗೆ ಇಷ್ಟು ಬುಧ್ಧಿಜ್ಞಾನಗಳಿವೆ, ಅದು ಮಾಡಿದ್ದೇನೆ, ಇದನ್ನು ಸಾಧಿಸಿದ್ದೇನೆ ಎಂದು ಗರ್ವಪಡುತ್ತಿರುತ್ತೇವೆ. ಅಷ್ಟೆ ಅಲ್ಲ ಅದು ನನ್ನದು, ಇದು ನನ್ನದು ಎನ್ನುತ್ತೇವೆ. ಎಲ್ಲಾ ನನಗೆ ಗೊತ್ತು, ನಾನು ಸಾಧಿಸಲಾಗದ್ದು ಏನೂ ಇಲ್ಲವೆಂದೂ ಕೊಳ್ಳುತ್ತೇವೆ.

ಸ್ವಲ್ಪ ಆಲೋಚಿಸಿರಿ, ಮುಪ್ಪು ಬರದಂತೆ ಮಾಡಿಕೊಳ್ಳಬಲ್ಲೆವೆ? ಯೌವನವನ್ನು ನಿಲ್ಲಿಸಿಕೊಳ್ಳಬಲ್ಲೆವೆ? ರೋಗಗಳೂ ಬರದಂತೆ ತಡೆಯಬಲ್ಲವೆ, ಸಾವನ್ನು ತಡೆಯ ಬಲ್ಲವೆ ಅಷ್ಟಕ್ಕೂ ಘಟಿಸಿದ ಸಂಘಟನೆಗಳನ್ನು ಮರೆಯಬಲ್ಲೆವೆ? ದುಃಖವಿಲ್ಲದಂತೆ ಜೀವಿಸ ಬಲ್ಲೆವೆ? ಯಾವ ವಿಷಯದಲ್ಲಾಗಲಿ ಭಯವಿಲ್ಲದಂತೆ ಇರಬಲ್ಲೆವೆ? ಎಷ್ಟೊ ಮಹತ್ವವಾದವುಗಳನ್ನು ಸಾಧಿಸಲು ಸಾಧ್ಯವಾದಾಗ ಇಂತಹವುಗಳನ್ನು ಏಕೆ ಸಾಧಿಸಲಾಗುತ್ತಿಲ್ಲ? ಎಷ್ಟೊ ಜಯಿಸಿದ್ದೇವೆ ಎಂದುಕೊಳ್ಳುವ, ನಾವು ಕೋಪವನ್ನು ಜಯಿಸಿದ್ದೇವೆಯೇ? ಈರ್ಷ್ಯಧ್ವೇಷಗಳನ್ನು ಜಯಿಸಿದ್ದೇವೆಯೇ? ಬಯಕೆಗಳನ್ನು ಗೆದ್ದಿರುವೆವೆ? ಮನಸ್ಸನ್ನು ಜಯಿಸಿದ್ದೇವೆಯೆ?

ಎಲ್ಲವನ್ನು ಮಾಡಬಲ್ಲೆವು ಎಂದು ಕೊಳ್ಳುತ್ತೇವೆ ಎಂದು ಕೊಳ್ಳುವ ನಾವು ಅಸತ್ಯವನ್ನು ನುಡಿಯದಂತೆ ಏಕೆ ಇರಲಾಗುತ್ತಿಲ್ಲ? ಇತರರನ್ನು, ಪ್ರಾಣಿಗಳನ್ನು ಏಕೆ

ಹಿಂಸಿಸದಂತೆ ಏಕೆ ಇರಲಾಗುತ್ತಿಲ್ಲ? ರಾಗದ್ವೇಷಗಳನ್ನು ಇರದಂತೆ ಏಕೆ ಜೀವಿಸುತ್ತಿಲ್ಲ? ಎಲ್ಲರೂ ಸಮಾನವೆಂಬ ಭಾವ ನಮ್ಮಲ್ಲೆ ಏಕೆ ಉಂಟಾಗುತ್ತಿಲ್ಲ, ಇರುವುದರಲ್ಲಿಯೆ ಏಕೆ ತೃಪ್ತಿಯಿಂದ ಇರಲಾಗುತ್ತಿಲ್ಲ? ನಮ್ಮಲ್ಲಿರುವ ದುರ್ಗುಣಗಳನ್ನು ಏಕೆ ತೊಲಗಿಸಿಕೊಳ್ಳಲಾಗುತ್ತಿಲ್ಲ ನಮಗೆ? ಕಣ್ಣು ಮುಚ್ಚಿಕೊಂಡು ಏಕೆ ಧ್ಯಾನ ಮಾಡಲಾಗುತ್ತಿಲ್ಲ?

ಈ ಸಣ್ಣ ವಿಷಯಗಳನ್ನೆ ಸಾಧಿಸಲಾಗದು ನಾವು ಏನೋ ಮಾಡಿದ್ದೇವೆ, ಸಾಧಿಸಿದ್ದೇವೆ ನನಗೆ ಎಲ್ಲ ತಿಳಿದಿದೆ ಎಂದು ಗರ್ವಪಡುವುದು ಎಷ್ಟು ಅವಿವೇಕವೋ ಆಲೋಚಿಸಿರಿ. ಇಷ್ಟು ಅಲ್ಪವಾದ ನಾವು ಊಹಿಸಲಾಗದ, ಅನಂತವಾದ, ಸಕಲ ಚರಾಚರ ಸೃಷ್ಟಿಯನ್ನು ನಡೆಸುತ್ತಿರುವ ಭಗವಂತನ ಶಕ್ತಿಯನ್ನು ಅರ್ಥಮಾಡಿ ಕೋಳ್ಳಬಲ್ಲೆವೆ?

ನಾವು ಅಂತಹ ಶಕ್ತಿವಂತನಾದ ಭಗವಂತನನ್ನು ಪೂಜಾ ಮಂದಿರಕ್ಕೊ ಆಲಯಕ್ಕೊ, ಚರ್ಚಿಗೊ, ಮಸೀದಿಗೊ ಪರಿಮಿತಿಗೋಲಿಸುವುದು ಬಹಳ ಅನ್ಯಾಯವಲ್ಲವೆ? ಅನಂತವಾದ ಆತನ ಶಕ್ತಿಯನ್ನು ತಿಳಿಯದ ನಾವು ಪೂರ್ತಿಯಾಗಿ ಅಜ್ಞಾನದಲ್ಲಿ ಇದ್ದಂತೆಯೆ ಅಲ್ಲವೆ?

ಇಂತಹ ಮಹಿಮಾನ್ವಿತ ಭಗವಂತನನ್ನು ಸಣ್ಣ, ಸಣ್ಣ ಪೂಜೆಗಳಿಂದ, ಸ್ತೋತ್ರಗಳಿಂದ, ಪ್ರಾರ್ಥನೆಗಳಿಂದ ವಶಮಾಡಿಕೊಳ್ಳಬಹುದೆಂದು ಎರಡು ಹಣ್ಣು, ನಾಲ್ಕು ಹೂಗಳಿಂದ, ಆತನ ಅನುಗ್ರಹವನ್ನು ಹೊಂದುಬಹುದೆಂದು ಭಾವಿಸುವುದು ಅವಿವೇಕವಲ್ಲವೆ?

ಸ್ವಲ್ಪ ಆಲೋಚಿಸಿದರೆ ಸಾಮಾನ್ಯರಾದ ನಾವೇ ಹೂಗಳು ಭಟ್ಟರ ಹೂಗಳಿಗೆ ಸಣ್ಣ ಸಣ್ಣ ಆಸೆಗಳಿಗೆ ಬಗ್ಗುವುದಿಲ್ಲ ಅಂದರೆ ಅಂತಹ ಶಕ್ತಿವಂತನಾದ ಭಗವಂತನು ಹೂಗಳಿಗೆ, ಪ್ರಾರ್ಥನೆಗಳಿಗೆ, ಪೂಜೆಗಳಿಗೆ, ಸ್ತೋತ್ರಗಳಿಗೆ ಹೇಗೆ ವಶವಾಗುತ್ತಾನೆ? ಆದ್ದರಿಂದ ಭಗವಂತನ ಶಕ್ತಿಯನ್ನು ಅರ್ಥಮಾಡಿಕೊಳ್ಳಬೇಕು ಅದಕ್ಕೆ ತಕ್ಕಂತೆ ವರ್ತಿಸಿಬೇಕು.

ಭಗವಂತನೆಂದಿಗೂ ಆತನು ಮೆಚ್ಚುವಂತೆ ವರ್ತಿಸುವವರಿಗೆ ಆತನು ಒಲಿಯುತ್ತಾನೆ. ಅವರನ್ನೆ ಅನುಗ್ರಹಸುತ್ತಾನೆ ಆತನ ಅನುಗ್ರಹ ಬೇಕೆನ್ನುವವವರು ಮೊದಲು ಸಮಸ್ತವೂ ಆತನೆ ಎಂದು ತಿಳಿದುಕೊಳ್ಳಬೇಕು. ಆತನ ಸೃಷ್ಟಿಯನ್ನು, ಸೃಷ್ಟಿಯಲ್ಲಿ ಆತನ ರೂಪಗಳಾದ ಸಹ ಜೀವಿಗಳನ್ನು ಪ್ರೀತಿಸಬೇಕು. ಅವುಗಳು ಮೇಲೆ ದಯೆ, ಕರುಣೆ ತೋರಿಸಬೇಕು ಒಳ್ಳೆಯ ಗುಣಗಳನ್ನು ಹೊಂದಿರಬೇಕು ಅಷ್ಟೆ ಅಲ್ಲ ಆತನು ಲೋಕಕ್ಕೆ ಒಳ್ಳೆಯದು ಮಾಡುವುದರಿಂದ ಮಾತ್ರವೇ ಭಗವಂತನ ಅನುಗ್ರಹ ಹೊಂದುಬಲ್ಲೆವು.

ಆದ್ದರಿಂದ ಭಗವಂತನ ಸಿಧ್ಧಾಂತವನ್ನು ಅರ್ಥಮಾಡಿಕೊಳ್ಳಬೇಕು, ಪಾಪಗಳನ್ನು ಮಾಡಬಾರದು, ನಾವುಕೂಡಾ ಭಗವಂತ ಶಕ್ತಿಯಲ್ಲಿ ಭಾಗವೆ ಎಂದು ತಿಳಿದುಕೊಳ್ಳಬೇಕು ನಮ್ಮ ಭಾಗದ ಸ್ರಷ್ಟಿಕರ್ತನ ಪಾತ್ರ ಪೋಷಿಸಬೇಕು. ಲೋಕವನ್ನು, ಪ್ರಕೃತಿ ಯನ್ನು ಪ್ರೀತಿಸಬೇಕು, ಪ್ರಕ್ರತಿಯೊಂದಿಗೆ ಸಹಜೀವನ ಮಾಡಬೇಕು. ಹಾಗೆ ಮಾಡಿದರೆ ನಮಗೂ ಕೂಡಾ ಶಕ್ತಿಗಳು ಜೊತೆಗೂಡುತ್ತಾ ಇರುತ್ತವೆ.  ನಿಧಾನವಾಗಿ ನಮ್ಮಲ್ಲಿ ದಿವ್ಯತ್ವವು ಜಾಗ ಮಾಡಿಕೊಂಡು ನಾವು ಕೂಡಾ ಭಗವತ್‌ಸ್ವರೂಪರಾಗಿ ಬದಲಾಗುತ್ತೇವೆ. ಅದೇ ಮಾನವನ ಜೀವನ ಲಕ್ಷ್ಯ.

ಇದನ್ನು ಸಾಧಿಸಬೇಕೆಂದರೂ ಭಗವಂತನ ಕುರಿತಗಾಲಿ, ಭಗವಂತನ ಶಕ್ತಿ ಕುರಿತಾಗಲಿ, ತಿಳಿದುಕೊಳ್ಳುವುಬೇಕೆಂದರೆ ಧ್ಯಾನವನ್ನು ಮಾಡಬೇಕಾದದ್ದೆ, ಧ್ಯಾನವನ್ನು ಮಾಡಿದರೇನೆ ಎಲ್ಲಾ ತಿಳಿದುಕೊಳ್ಳಬಲ್ಲವು. ಅರ್ಥಮಾಡಿಕೊಳ್ಳಬಲ್ಲೆವು. ಅದ್ದರಿಂದ ಪ್ರತಿದಿನ ಧ್ಯಾನವನ್ನು ಮಾಡೋಣ.

**ಧ್ಯಾನ ಮಾಡುವ ಪದ್ಧತಿ:**



**ಉಸಿರಾಟದ ಮೇಲೆ ಗಮನ :** ಅವರಿಗೆ ತಕ್ಕ ಸುಖಾಸನದಲ್ಲಿ ಅವರು ಹಾಯಾಗಿ ಕುಳಿತು... ಕೈಗಳೆರಡನ್ನು ಕಟ್ಟಿ... ಕಣ್ಣೆರಡು ಮುಚ್ಚಿಕೊಂಡು... ಪ್ರಕೃತಿ ಸಹಜವಾಗಿ ನಡೆಯುತ್ತಿರುವ ಉಚ್ವಾಸ ನಿಶ್ವಾಸಗಳನ್ನು ಗಮನಿಸುತ್ತಾ ಇರಬೇಕು!

ನಡುವೆ ಹಲವಾರು ಆಲೋಚನೆಗಳು ಬರುತ್ತಿದ್ದರು... ಅದನ್ನು ಆಗಿಂದಾಗ್ಗೆ ನಿಲ್ಲಿಸಿ... ಮತ್ತೆ ಮತ್ತೆ ಉಸಿರಾಟದ ಮೇಲೆ ಗಮನ ಹರಿಸುತ್ತಾ... ಗಮನವನ್ನು ಕೇಂದ್ರೀಕರಿಸುತ್ತಿದ್ದರೆ... ಕ್ರಮೇಣ ಆಲೋಚನಾ ರಹಿತ ಸ್ಥಿತಿ ಮೂಡುತ್ತದೆ. ಚಿತ್ತ ವೃತ್ತಿಗಳು ನಿಂತು ಹೋಗುತ್ತವೆ. ಮನಸ್ಸು ನಿರ್ವಿಷಯವಾಗಿ ಶೂನ್ಯವಾಗುತ್ತದೆ. ಮನಸ್ಸು ಶಾಂತಿಸುತ್ತದೆ. ಇದೇ ಧ್ಯಾನ ಸ್ಥಿತಿ.

ಇದೆ ಆಲೋಚನಾ ರಹಿತ ಸ್ಥಿತಿ ಈ ಸ್ಥಿತಿಯಲ್ಲಿ ವಿಶ್ವಮಯ ಪ್ರಾಣಶಕ್ತಿ ಅಪಾರವಾಗಿ ಶರೀರದೊಳಗೆ ಪ್ರವೇಶಿಸಿ ನಾಡಿಮಂಡಲವನ್ನು ಶುದ್ಧಿ ಮಾಡುತ್ತದೆ. ಆ ಶಕ್ತಿಯಿಂದ ರೋಗಗಳೆಲ್ಲವೂ ಕಡಿಮೆಯಾಗುತ್ತವೆ. ನಾಡೀಮಂಡಲ ಶುದ್ಧಿಯಿಂದ ಕರ್ಮಗಳು ದಹ್ಣವಾಗುತ್ತವೆ. ಪ್ರತಿನಿತ್ಯ ಯಾರ ವಯಸ್ಸು ಎಷ್ಟಿರುತ್ತದೆಯೋ ಕನಿಷ್ಠ ಅಷ್ಟು ನಿಮಿಷಗಳು ಕಡ್ಡಾಯವಾಗಿ ದಿನಕ್ಕೆ ಎರಡು ಬಾರಿ ಧ್ಯಾನ ಮಾಡಬೇಕು.

# 16. ಭಕ್ತಿ ಎಂದರೆ?

ಯಾವ ಕೆಲಸ ಮಢುವಾಗ ದೃಷ್ಟಿ ಭಗವಂತನ ಮೇಲೆ ಇರುವುದೋ ಆ ಕೆಲಸವನ್ನು ಭಕ್ತಿ ಎನ್ನುತ್ತಾರೆ. ಯಾವ ಕೆಲಸ ಮಾಡುವಾಗ ದೃಷ್ಟಿ ಭಗವಂತನ ಮೇಲೆ ಇರುವುದಿಲ್ಲವೋ ಆ ಕೆಲಸವನ್ನು ಭಕ್ತಿ ಎನ್ನುವುದಿಲ್ಲ.

ಸಾಧಾರಣವಾಗಿ ಪೂಜೆ ಮಾಡಿದರೂ, ಭಜನೆ ಮಾಡಿದರೂ, ಫ್ರಾರ್ಥನೆಮಾಡಿದರೂ, ಸ್ತೋತ್ರಗಳು ಓದಿದರೂ, ನಾಮ ಜಪ ಮಾಡಿದರು ಭಕ್ತಿ ಎನ್ನುತ್ತೇವೆ. ಕಾರಣ ಆ ಕೆಲಸ ಮಾಡುತ್ತಿರುವಾಗ ನಮ್ಮ ದೃಷ್ಟಿ ಭಗವಂತನ ಮೇಲೆ ಇರುತ್ತದೆ ಆದ್ದರಿಂದ, ಟಿ.ವಿ

ನೋಡುತ್ತಿದ್ದರೂ, ಆಡುತ್ತಿದ್ದರೂ, ತಿನ್ನುತ್ತಿದ್ದರೂ ಭಕ್ತಿ ಎನ್ನುವುದಿಲ್ಲ ಕಾರಣ ಈ ಕೆಲಸಗಳು ಮಾಡುತ್ತಿರುವಾಗ ನಮ್ಮ ದೃಷ್ಟಿ ಭಗವಂತನ ಮೇಲೆ ಇರುವುದಿಲ್ಲ. ಅದ್ದರಿಂದ ಭಕ್ತಿಗೆ ಸರಿಯಾದ ನಿರ್ವಚನೆ "ಭಗವಂತನ ಮೇಲೆ ದೃಷ್ಟಿ ಇಡುವುದು."

ಹಾಗೆ ಭಗವಂತನ ಮೇಲೆ ವಿಧವಿಧವಾಗಿ ದೃಷ್ಟಿಯಿಟ್ಟು. ನಮ್ಮ ಕೋರಿಕೆಗಳು ತೀರಿಸೆಂದು ಬೇಡಿಕೊಳ್ಳುತ್ತೇವೆ. ಅಂದರೆ ಕಷ್ಟಗಳು ತೀರಿಸಬೇಕೆಂದು, ರೋಗಗಳು ವಾಸಿಯಾಗಬೇಕೆಂದು, ದುಃಖ ದೂರಾಗಬೇಕೆಂದು, ಸಮಸ್ಯೆಗಳು ಇಲ್ಲದೆ ಇರಬೇಕೆಂದು, ಹೀಗೆ ಅನೇಕ ರೀತಿಯಾ ಕೋರಿಕೆಗಳೊಂದಿಗೆ ದೃಷ್ಟಿ ಭಗವಂತನ ಮೇಲೆ ಇಡುತ್ತೇವೆ .

ಹಾಗೆ ಭಗವಂತನ ಮೇಲೆ ಇಡುವ ದೃಷ್ಟಿಯೆಲ್ಲಾ ಕೋರಿಕೆಗಳು ಕುರಿತೆ! ಅಂದರೆ ಭಗವಂತನ ಮೇಲೆ ದೃಷ್ಟಿ ಇಡುವುದಕ್ಕೆ ಕಾರಣ ಬಯಕೆಗಳೇ, ಒಂದು ರೀತಿಯಲ್ಲಿ ನೋಡಿದಾಗ ಬಾಹ್ಯವಾಗಿ ಪ್ರದರ್ಶಿಸುವ ಕ್ರಿಯೆಗಳು ಭಗವಂತನ ಮೇಲೆ ದೃಷ್ಟಿ ಆಸೆಗಳ ಮೇಲೆ, ಅಂತಹವರ ಭಕ್ತಿ "ಕೋರಿಕೆಗಳ ಭಕ್ತಿ" ಆಗುತ್ತದೆ ಅಷ್ಟೆ ಹೊರೆತು ಅದು "ಭಗವದ ಭಕ್ತಿ" ಅಲ್ಲ.

ಯಾರಾದರೆ ಕೋರಿಕೆಗಳು ಇಲ್ಲದಂತೆ ಭಗವಂತನ ಮೇಲೆ ದೃಷ್ಟಿ ಇಡುತ್ತಾರೋ

ಅವರದೆ ನಿಜವಾದ  ಭಕ್ತಿ ಯಾಗುತ್ತದೆ. ನಮ್ಮದು "ಭಗವದ್ಭಕ್ತಿ ಅಲ್ಲ ಕಾರಣ "ನಾವು ಭಗವಂತನಿಂದ ಕೋರುತ್ತಿದ್ದೇವೆ" ಆದರೆ ಭಗವಂತನನ್ನು ಕೋರುತ್ತಿಲ್ಲ".

ಹಾಗಾದರೆ "ನಿಜವಾದ ಭಕ್ತಿ" ಯಾವುದೆಂದರೆ, ಸತ್ಯವಾದ ಭಗವಂತನ ಮೇಲೆ ಕೋರಿಕೆ ಇಲ್ಲದೆ ದೃಷ್ಟಿ ಇಡುವುದು. ಅದನ್ನೆ ನಿಜವಾದ ಆರಾಧನೆ ಎನ್ನುತ್ತಾರೆ. ಹಾಗಾದರೆ ಸತ್ಯವಾದ ಭಗವಂತನಾರು? ವಿಗ್ರಹವೇ, ಫೋಟೋನಾ? ಎರಡೂ ಅಲ್ಲ,

ಏಕೆಂದರೆ ಫೋಟೋ, ವಿಗ್ರಹ ದೇವರ ಪ್ರತಿರೂಪಗಳೆ ಆಗಲಿ ಭಗವಂತನಲ್ಲ, ಗಾಂಧಿ ಫೋಟೋ ಗಾಂಧಿಯವರು ಆಗುವುದಿಲ್ಲವಲ್ಲ ? ಹಾಗಾದರೆ ಭಗವಂತನ ಮೇಲೆ ದೃಷ್ಟಿ ಇಡಬೇಕೆಂದರೆ ಭಗವಂತನು ಯಾರು? ಎಲ್ಲಿರುತ್ತಾನೆ? ಅಂದರೆ ಆತನು ಎಲ್ಲರಲ್ಲೂ ಆತ್ಮ ಸ್ವರೂಪನಾಗಿ ಇರುವನೆಂದು ತಿಳಿದು ಕೊಂಡಿದ್ದೇವೆ. ಆದ್ದರಿಂದ ಆತ್ಮದ ಮೇಲೆ ದೃಷ್ಟಿ ಇಟ್ಟರೆ ಸತ್ಯವಾದ ಭಗವಂತನ ಮೇಲೆ ದೃಷ್ಟಿಯಿಟ್ಟಂತೆಯೆ.

ಹಾಗಾದರೆ ಆತ್ಮ ಯಾರು?  ಆತ್ಮ ಎಂದರೆ ನಮ್ಮ ಸ್ವರೂಪವೇ ಆದ್ದರಿಂದ ಆತ್ಮದ ಮೇಲೆ, ಅಂದರೆ ನಮ್ಮ ಸ್ವರೂಪದ ಮೇಲೆ ದೃಷ್ಟಿ ಇಟ್ಟರೆ ಅದೇ "ನಿಜವಾದ ಭಕ್ತಿ" ಅಂದರೆ ನಮ್ಮ "ಸ್ವರೂಪದೊಂದಿಗೆ ಅನು ಸಂದಾನವಾಗಿ ಇರುವುದೇ ನಿಜವಾದ ಭಕ್ತಿ"

ಆ ಮಾರ್ಗವೆ "ಶ್ವಾಸದ ಮೆಲೆ ಗಮನ" ಅಂದರೆ "ಧ್ಯಾನ ಮಾಡುವುದೇ ಭಕ್ತಿ." ಧ್ಯಾನದ ಮೂಲಕವೆ ನಮ್ಮ ಸ್ವರೂಪವಾದ ಆತ್ಮದಲ್ಲಿ ಇರಬಲ್ಲೆವು. ಆದ್ದರಿಂದ ಉಪನಿಷತ್ತುಗಳಲ್ಲಿ ಭಕ್ತಿ ಅಂದರೆ "ಸ್ವರೂಪನು ಸಂಧಾನ ಭಕ್ತಿ ರೀತಿಯ ಭಿಧಿಯತೇ" ಎಂದು ಹೇಳಲ್ಪಟ್ಟಿದೆ.

ಅಂದರೆ ಯಾವ ಬಯಕೆ ಇಲ್ಲದೆ ಆತ್ಮದ ಮೇಲೆ ದೃಷ್ಟಿ ಇಡುವುದೇ "ನಿಜವಾದ ಭಕ್ತಿ" ಅಂದರೆ ಏನೂ ಆಶಿಸದೆ ಧ್ಯಾನ ಮಾಡುವುದೇ "ಭಕ್ತಿ" ಇದೇ ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮ ಹೇಳಿದ "ನಿಷ್ಕಾಮಕರ್ಮ."

# 17. ಭಕ್ತಿಯಲ್ಲಿ ವಿಧಗಳು !

ಭಗವಂತನ ಮೇಲೆ ಇಷ್ಟವನ್ನು ತೊರಿಸುವುದೇ ಭಕ್ತಿ ಎಂದುಕೊಳ್ಳುತ್ತೇವೆ. ಹಾಗೇ ನಮ್ಮ ಇಷ್ಟವನ್ನು ಅನೇಕ ರೀತಿಯಾಗಿ ಪ್ರದರ್ಶಿಸುತ್ತಾ ನಾವೆ ಭಕ್ತರೆಂದುಕೊಳ್ಳುತ್ತೇವೆ. ನಮ್ಮನ್ನು ಮೀರಿದ ಭಕ್ತರು ಬೇರೆಯಾರು ಇಲ್ಲವೆಂದು ಕೂಡಾ ಅಂದುಕೊಳ್ಳುತ್ತೇವೆ ನಾವು ಏನು ಮಾಡಿದರೆ ಅದು ಏನನ್ನು ಬಾವಿಸಿದರೆ ಅದೇ ಭಕ್ತಿ ಎಂದು ಅಂದು ಕೊಳ್ಳುತ್ತೇವೆ ಹಾಗೆಯೇ ಭಗವಂತನ ಕುರಿತು ನಮಗೇ ಎಲ್ಲಾ ಗೋತ್ತು ಎಂದುಕೊಳ್ಳುತ್ತವೆ.

ನಾವು ಹೇಗೆ ಭಾವಿಸಿದರೆ ಭಗವಂತನು ಹಾಗೆ ಇರುತ್ತಾನೆಂದುಕೊಳ್ಳುತ್ತೇವೆ. ನಾವು ಏನು ಮಾಡಿದರೆ ಅದನ್ನೆ ಭಗವಂತನು ಮೆಚ್ಚಿಕೊಳ್ಳುತ್ತಾನೆ ಎಂದು ಕೊಳ್ಳುತ್ತೇವೆ. ಹಾಗೆ ಭಗವಂತನ ವಿಷಯದಲ್ಲಿ ನಮಗೆ ಇಷ್ಟವಾದ ವಿಧದಲ್ಲಿ ನಮ್ಮ ಇಷ್ಟಾನುಸಾರ ಆರಾಧಿಸುತ್ತಾ, ಪೂಜಿಸುತ್ತಾ, ಪ್ರಾರ್ಥಿಸುತ್ತಾ, ಭಜನೆಗಳನ್ನು ಮಾಡುತ್ತಾ, ಕೀರ್ತಿಸುತ್ತಾ ಅದನ್ನೆ ಭಗವಂತನು ಮೆಚ್ಚಿಕೊಳ್ಳುತ್ತಾನೆ ಎಂದು ಅಂದುಕೊಳ್ಳುತ್ತೇವೆ, ಅಷ್ಟೇ ಹೊರೆತು ಅಸಲು ನಾವು ಮಾಡುವ ಕೆಲಸ ಭಗವಂತನು ಮೆಚ್ಚುತ್ತಿದ್ದಾನೆಯೇ? ಇಲ್ಲವೇ? ಎಂದು ಆಲೋಚಿಸುವುದಿಲ್ಲ.

ನಮ್ಮನ್ನು ನಾವು ಭಕ್ತರೆಂದು ಕೊಂಡರೆ ಸರಿಹೋಗುವುದಿಲ್ಲ "ಇವನು ನನ್ನ ಭಕ್ತನು ಎಂದು ಭಗವಂತನು ಅಂದುಕೊಳ್ಳಬೇಕು" ಹಾಗೆ ಭಗವಂತನು ಯಾರನ್ನು ಭಕ್ತನೆಂದು ಭವಿಸುತ್ತಾನೋ, ಅವನೇ ನಿಜವಾದ ಭಕ್ತನು. ಅವನಿಗೆ ಆತನ ಅನುಗ್ರಹ ಲಭಿಸುತ್ತದೆ. ಅಂತಹವರ ಜೀವನೆ ಧನ್ಯವು. ಅವನೆ ಕೊನೆಗೆ ಮೋಕ್ಷವನ್ನು ಹೊಂದಬಲ್ಲ

ಸದ್ಯಕ್ಕೆ "ಎಲ್ಲರಿಗೂ ಭಗವಂತನಿದ್ದಾನೆ, ಆದರೆ ಭಗವಂತನಿಗೆ ಭಕ್ತರಿಲ್ಲ" ಹಾಗಾದರೆ ಭಗವಂತನ ದೃಷ್ಟಿಯಲ್ಲಿ ಭಕ್ತರೆಂದರೆ ಯಾರು? ಭಕ್ತಿ ಎಂದರೆ ಏನು ? ಎಂದು ತಿಳಿದುಕೊಳ್ಳೋಣ

**ಭಕ್ತಿಯಲ್ಲಿ 2 ವಿಧಗಳಿವೆ**

1. ಭುಕ್ತಿಗಾಗಿ ಭಕ್ತಿ 2. ಮುಕ್ತಿಗಾಗಿ ಭಕ್ತಿ

ಪ್ರಪಂಚದಲ್ಲಿ  ಬಹಳ ಮಂದಿ ಮೊದಲನೇ ರೀತಿಯ ಭಕ್ತರೆ ಆಗಿದ್ದಾರೆ.

ಭುಕ್ತಿಗಾಗಿ ಭಕ್ತಿ, ಅಂದರೆ ಕೋರಿಕೆಗಳಿಗೊಸ್ಕರ ಭಗವಂತನನ್ನು ಆರಾಧಿಸುವುದು, ಅಂದರೆ ನಮ್ಮ ಅಗತ್ಯಗಳು, ಸುಖಗಳು, ಬೋಗಗಳು ಹೊಂದುವುದಕ್ಕಾಗಿ, ಆಸೆಗಳೂ, ಕಷ್ಟಗಳು, ಸಮಸ್ಯೆಗಳು, ನೋವುಗಳು ತೊಂದರೆಗಳು ತೀರುವುದಕ್ಕಾಗಿ ಆರಾಧಿಸುತ್ತೇವೆ. ಇಂತಹ ತಮ್ಮ ಬಯಕೆಗಳು ನೆರೆವೇರದಿದ್ದರೂ, ತಾವು ಅಂದು ಕೊಂಡದ್ದು ನಡೆಯದಿದ್ದರೂ, ತಾವು ಕೋರಿದ್ದು ಭಗವಂತನು ಕೊಡಲಿಲ್ಲವೆಂದು ಆ ಭಗವಂತನ ಫೋಟೋ  ಬದಲಾಯಿಸಿ ಇನ್ನೊಂದು ಪೋಟೋ ಇಡುತ್ತಾರೆ ಇನ್ನು ಮತಗಳನ್ನು ಕೂಡಾ ಬದಲಾಯಿಸುತ್ತಾರೆ ಇದನ್ನು ನೋಡಿದರೆ ಇವರ ಭಕ್ತಿ ಬಯಕೆಗಳ ಮೇಲೆಯೆ ಹೊರತು ಭಗವಂತನ ಮೇಲೆ ಅಲ್ಲ ಎಂದು ತಿಳಿಯುತ್ತದೆ. ಆದ್ದರಿಂದ ಇಂತಹ ಕೋರಿಕೆಗಳು ಇರುವ ಭಕ್ತಿಯನ್ನು "ಭುಕಿಗಾಗಿ ಬಕ್ತಿ" ಎನ್ನುತ್ತಾರೆ.

ಇನ್ನು 2ನೇ ರೀತಿಯ ಭಕ್ತರು ಅತಿ ಕಡಿಮೆ ಜನ ಮಾತ್ರವೇ ಇರುತ್ತಾರೆ. ಇವರಿಗೆ ಬಯಕೆಗಳು ಮುಖ್ಯವಲ್ಲ. ಇವರ ಹಂಬಲ, ಅವೇದನೆ ಎಷ್ಟು ಹೊತ್ತು ಭಗವಂತನನ್ನು ದರ್ಶಿಸಬೇಕೆಂದು, ಬಗವಂತನನ್ನು ಸೇರಬೇಕೆಂಬುದು, ಈ ದುಃಖಮಯ ಜೀವನದಿಂದ ಶಾಶ್ವತವಾಗಿ ಹೊರಬರಬೇಕೆಂದು ಇವರು ಆಶಿಸುತ್ತಾರೆ. ಇವರು ಯಾವ ಕೋರಿಕೆಗಳನ್ನು ಕೋರುವುದಿಲ್ಲ. ಇವರಿಗೆ ಯಾವ ಆಸೆಗಳಿರುವುದಿಲ್ಲ ಯಾವ ತಾಪತ್ರಯಗಳು ಇರುವುದಿಲ್ಲ. ಎಷ್ಟು ಹೊತ್ತು ಭಗವಂತನನ್ನು ಹೊಂದಬೇಕೆಂಬುದೇ ಇವರ ಹಂಬಲ. ಆದ್ದರಿಂದ ಇವರು ತಮ್ಮ ಲಕ್ಷ್ಯವನ್ನು ಸಾಧಿಸುವವರೆಗೂ ಅವರ ಜೀವನದಲ್ಲಿ ಎಷ್ಟು ಕಷ್ಟಗಳು ಎದುರಾದರೂ ಲೆಕ್ಕಿಸುವುದಿಲ್ಲ ಎಷ್ಟು ನೋವುಗಳನ್ನಾದರೂ ಸಂತೋಷವಾಗಿ ಅನುಭವಿಸುತ್ತಾರೆ ಧನ, ಸಂಪತ್ತು, ಭೋಗಬಾಗ್ಯಗಳು, ಶಾರೀರಕ ಸುಖಗಳು, ಹೆಸರು, ಕೀರ್ತಿಗಳು. ಅಧಿಕಾರಗಳು, ಎಲ್ಲವನ್ನು, ಕಸಪೊರಿಕೆಗೆ ಸಮಾನವಾಗಿ ನೋಡುತ್ತಾರೆ. ಇವರು ಭಗವಂತನನ್ನು ಬಿಟ್ಟು ಮತ್ತೀನೇನು ಆಶಿಸುವುದಿಲ್ಲ ಎಷ್ಟುಹೊತ್ತು ಆ ಭಗವಂತನ ದರ್ಶನ 'ಅಂದರೆ ಆತ್ಮದರ್ಶನ' ಕ್ಕಾಗಿ ಅಂದರೆ ಆತ್ಮ ಸಾಕ್ಷಾತ್ಕರಕ್ಕಾಗಿ ಅಹರ್ನಿಶಿ ಹಂಬಲಿಸುತ್ತರೆ, ಧ್ಯಾನ ಸಾಧನೆ  ಮಾಡುತ್ತಾರೆ

ಇಚಿತಹವರ ಭಕ್ತಿಯೊಂದನ್ನು ಪರೀಕ್ಷಿಸಲು ಭಗವಂತನು ಎಷ್ಟು ಕಷ್ಟಗಳನ್ನು ಕೊಟ್ಟರೂ, ಎಷ್ಟು ಸಮಸ್ಯೆಗಳನ್ನು ಸೃಷ್ಟಿಸಿದರು, ಎಷ್ಟು ಪ್ರಲೋಭನೆಗಳಿಗೆ ಗುರಿ ಪಡಿಸಿದರೂ, ಅಂದರೆ ಹಣ, ಸ್ತ್ರೀ, ಪದವಿ, ಹೆಸರು, ಅಧಿಕಾರ, ಐಶ್ವರ್ಯ ಇಂತಹವುಗಳನ್ನು ಆಸೆ ತೋರಿಸುದರೂ, ಅವರು ವಿಚಲಿತರಾಗುವುದಿಲ್ಲ ಕೊನೆಗೆ ಎಲ್ಲ ಪರೀಕ್ಷೆಗಳಲ್ಲಿ ವಿಜಯ ಸಾಧಿಸಿ ಭಗವಂತನ ದರ್ಶನ ಹೋಂದಿ, ಅಂದರೆ ಆತ್ಮವನ್ನು ಸಾಕ್ಷಾತ್ಕರಿಸಿಕೊಂಡು ಮುಕ್ತರಾಗುತ್ತಾರೆ.

ಹೀಗೆ ಯಾವ ಬಯಕೆಗಳು ಇಲ್ಲದೆ ಅಂದರೆ ಪ್ರತಿಫಲಾಪೇಕ್ಷೆ ಇಲ್ಲದೆ ಯರಾಗಲಿ ಭಗವಂತನನ್ನು ಆರಾಧಿಸುತ್ತಾರೊ, ಭಗವಂತನ ಮೇಲೆ ಇಷ್ಟವನ್ನು ತೊರಿಸುತ್ತಾರೋ, ಅವರದೆ ನಿಜವಾದ ಭಕ್ತಿ ಅವರನ್ನೆ ಭಗವಂತನು ಭಕ್ತನನ್ನಾಗಿ ಸ್ವೀಕರಿಸುತ್ತಾನೆ. ಅನುಗ್ರಹಿಸುತ್ತಾನೆ ಇದನ್ನೆ "ಮುಕ್ತಿಗಾಗಿ ಭಕ್ತಿ" ಎಂದು ಹೇಳುತ್ತಾರೆ. ಇದೆ ನಿಜವಾದ ಭಕ್ತಿ. ಇಂತಹ ಭಕ್ತರನ್ನು ನಾವು ಪುರಾಣಗಳಲ್ಲಿ ಎಷ್ಟೋ ಜನರನ್ನು ನೋಡಿದ್ದೇವೆ ಅವರಲ್ಲಿ ಪ್ರಹ್ಲಾದನು, ಧೃವನು, ಮಾರ್ಕಂಡೇಯನು, ಅಂಬರೀಷನು, ತುಕಾರಾಂ, ಅನ್ನಮ್ಯ, ತ್ಯಾಗಯ್ಯ, ರಾಮದಾಸು, ಪೋತನ, ಇಂತಹವರುಗಳೇ ಇವರು ಇವರೆಲ್ಲಾ ಕೋರಿಕೆಗಳಿಂದ ಭಗವಂತನ ಮೇಲೆ ಭಕ್ತಿ ಪ್ರದರ್ಶಿಸಿದವರು ಅಲ್ಲ. ಎಕೆಂದರೆ ಅವರು ಭಗವಂತರನ್ನು ಬದಲಾಯಿಸಿಲ್ಲ ಅವರ ಲಕ್ಷ್ಯವನ್ನು ಸಾಧಿಸುಲು ಎಂತಹ ಕಷ್ಟಗಳನ್ನಾದರೂ ಲೆಕ್ಕಿಸದೆ ಏನನ್ನು ಆಶಿಸದೆ ಆ ಭಗವಂತನ ಮೇಲೆ ವಿಶ್ವಾಸವಿಟ್ಟು ತಮ್ಮ ನಿಜವಾದ ಭಕ್ತಿಯನ್ನು ಪ್ರದರ್ಶಿಸಿದರು.

ಹಾಗೆ ಏನು ಆಶಿಸದೆ ಆ ಭಗವಂತನ ನಿಜರೂಪವಾದ ಆತ್ಮದ ಮೇಲೆ ದೃಷ್ಟಿ ಇಟ್ಟವರೆ ನಿಜವಾದ ಭಕ್ತರು. ಹಾಗೆ ನಿಜವಾದ ಭಕ್ತನಾಗ ಬೇಕೆಂದರೆ, ಒಂದೇ ಮಾರ್ಗ ಅದೆ ಧ್ಯಾನ "ಧ್ಯಾನ ಮಾಡುವುದೆಂದರೆ ಮನಸ್ಸನ್ನು ಶೂನ್ಯ ಮಾಡಿ ಭಗವಂತನ ಸ್ವರೂಪವಾದ ಆತ್ಮದ ಮೇಲೆ ದೃಷ್ಟಿ ಇಡುವುದು," ಇದನ್ನೆ ಸರಿಯಾದ ಭಕ್ತಿ ಎನ್ನುತ್ತಾರೆ. "ಮುಕ್ತಿಗಾಗಿ ಭಕ್ತಿ" ಎನ್ನುತ್ತಾರೆ, ಉಳಿದವರೆಲ್ಲಾ ಕೋರಿಕೆಗಳ ಭಕ್ತರಾಗಲಿ, ಭಗವಂತನ ಭಕ್ತರಲ್ಲ.

ಆದ್ದರಿಂದ "ನಿಜವಾದ ಭಕ್ತರು" ಆಗಬೇಕು ಮುಕ್ತಿಯನ್ನು ಹೊಂದಬೇಕು ಧ್ಯಾನವನ್ನು ಮಾಡಬೇಕು "ಆಶಿಸದ ಭಕ್ತಿಯಿಂದಲೆ ಮುಕ್ತಿ ಸಾಧ್ಯವೆಂದು ತಿಳಿದುಕೊಳ್ಳಬೇಕು."

**ಯೋಗಿಗಳು ಹೇಳಿದ ಧ್ಯಾನವೇ – ಮಾಡಿದ ಧ್ಯಾನವು**



**ಧ್ಯಾನ ಅಂದರೆ ಶ್ವಾಸದಿಂದ ಧ್ಯಾಸ**

# 18. ನಿಜವಾದ ಭಕ್ತರು

ನಾವು ಎಷ್ಟೋ ಕೋರಿಕೆಗಳಿಂದ ಭಗವಂತನ ಮೇಲೆ ದೃಷ್ಟಿ ಇಡುತ್ತೇವೆ. ಅಂದರೆ ಕೋರಿಕೆಗಳ ಕುರಿತೆ ಭಗವಂತನ ಮೇಲೆ

ದೃಷ್ಟಿಯಿಡುತ್ತೇವೆ. ಅಂದರೆ ವಾಸ್ತವವಾಗಿ ನಮ್ಮ ದೃಷ್ಟಿ ಕೋರಿಕೆಗಳ ಮೇಲೆಯೆ ಹೊರೆತು ಭಗವಂತನ ಮೇಲೆ ಅಲ್ಲ. ಆದರೆ ಭಕ್ತಿ ಅಂದರೆ ಭಗವಂತನ ಮೇಲೆ, ದೃಷ್ಟಿ ಇಡುವುದು ಹಾಗಿರುವಾಗ ಕೋರಿಕೆಗಳ ಮೇಲೆ ದೃಷ್ಟಿ ಇಟ್ಟದ್ದು ಭಕ್ತಿ ಹೇಗೆ ಆಗುತ್ತದೆ? ಆದ್ದರಿಂದ ಕೋರಿಕೆಗಳಿದ್ದರೆ, ಭಕ್ತಿಯಲ್ಲ, ಕೋರಿಕೆಗಳು ಇಲ್ಲದ ಭಕ್ತಿಯೇ ನಿಜವಾದ ಭಕ್ತಿ. ಗೀತೆಯಲ್ಲಿ ಶ್ರೀ ಕ್ರಷ್ಣ ಬಗವಾನನು ಈ ವಿಷಯವನ್ನೆ ಹೇಳಿದ್ದಾನೆ. ಯಾವ ಕೆಲಸ ಮಾಡಿದರು ಪ್ರತಿಫಲಾಪೇಕ್ಷೆ ಇಲ್ಲದೆ ಮಾಡು ಎಂದಿದ್ದಾರೆ. "ನಿಷ್ಕಾಮಕರ್ಮ" ಮಾಡು ಎಂದಿದ್ದಾರೆ.

ಯಾರಾದರೂ ನಮ್ಮ ಮನೆಗೆ ಬಂದು ಏನಾದರೂ ಕೇಳಿದರೆ ಅವರನ್ನು ಬೇಡುವವನು ಎನ್ನುತ್ತೇನೆ, ಅಷ್ಟೆ ಹೊರೆತು ಕೋರುವವನು, ಯೋಚಿಸುವವನು, ವಿನಂತಿಸುವವನು ಎನ್ನವುದಿಲ್ಲ. ಅಷ್ಟೇ ಅಲ್ಲ ಅವರನ್ನು ಬಹಳ ಕೇವಲವಾಗಿ ಕೀಳಾಗಿ ನೋಡುತ್ತೇವೆ.

ಹಾಗೆಯೇ ನಾವು ಭಗವಂತನನ್ನು ಕೋರಿಕೊಳ್ಳುತ್ತಿದ್ದೆವೆಂದುಕೊಳ್ಳುತ್ತೇವೆ. ಆದರೆ ಕೋರಿಕೊಳ್ಳುವವರೆಲ್ಲ ಯೋಚಿಸುವವರೆ. ಹಾಗೆ ಭಗವಂತನನ್ನು ಯೋಚಿಸುವುದು ತಪ್ಪೆನು? ಎಂದುಕೊಳ್ಳುತ್ತೇವೆ ಆದರೆ "ನಮ್ಮನ್ನು ಯೋಚಿಸುವ ನಮ್ಮ ಕೆಳಗಿನವರನ್ನು ನಾವು ಹೇಗೆ ಭಾವಿಸುತ್ತೇವೆಯೋ, ನಮ್ಮ ಮೇಲಿನವನು ಕೂಡಾ ನಮ್ಮನ್ನು ಹಾಗೆಯೆ ಭಾವಿಸುತ್ತಾನೆ. ಅಂದರೆ ನಮ್ಮನ್ನು ಯೋಚಿಸುವವರು ನಮ್ಮ ದೃಷ್ಟಿಯಲ್ಲಿ ಹೇಗೆ ನೋಡಲ್ಪಡುತ್ತಾರೊ? ಭಗವಂತನನ್ನು ಯೊಚಿಸುವವರು ಕೂಡಾ ಆತನ ದೃಷ್ಟಿಯಲ್ಲಿ ಹಾಗೇಯೆ ನೋಡಲ್ಪಡುತ್ತಾರೆ.

ಭಗವಂತನು ನಮಗೆ ಹಣ, ಸಂಪತ್ತು, ಬುಧ್ಧಿ, ಶಕ್ತಿ ಎಲ್ಲಾ ಕೊಟ್ಟರೂ ಇನ್ನೂ

ಆತನನ್ನು ಕೋರಿಕೊಂಡರೆ  ಆತನು ಎನೆಂದು ಕೊಳ್ಳುತ್ತಾನೆ. ಈ ವಿಷಯವನ್ನು ನಾವು ಆಲೋಚಿಸುತ್ತಿಲ್ಲ ಎಕೆಂದರೆ ನಾವುಕಷ್ಟ ಪಡುವುದಕ್ಕೆ  ಇಷ್ಟಪಡುವುದಿಲ್ಲ ಯಾವ ಕಷ್ಟವು ಇಲ್ಲದೆ ಎಲ್ಲಾ ಹೊಂದಬೆಕೆನ್ನುತ್ತೇವೆ.

ಅಷ್ಟೆ ಅಲ್ಲ ಭಗವಂತನು ಕೊಟ್ಟವುಗಳೆನ್ನೇ ಸರಿಯಾದ ರೀತಿಯಲ್ಲಿ ಉಪಯೋಗಿಸದೆ, ಕೊಟ್ಟವುಗಳೆಂದರೆಲೆ ತೃಪ್ತಿಹೊಂದದೆ ಏನು ಮಾಡಬಾರದೊ. ಅದನ್ನು ಮಾಡುತ್ತಾ, ಏನು ಕೇಳಬೇಕೊ ತಿಳಿಯದೆ, ಹೇಗೆ ವರ್ತಿಸಬೇಕೊ ಹಾಗೆ ವರ್ತಿಸದೆ  ಯಾವ ಮಾರ್ಗದಲ್ಲಿ ನಡೆಯಬೇಕೊ ಆ ಮಾರ್ಗದಲ್ಲಿ ನಡೆಯದೆ, ಕೊಟ್ಟವುಗಳನ್ನೆ ದುರ್ವಿನಿಯೋಗ ಮಾಡುತ್ತಾ, ಜೀವನವನ್ನು ದುಃಖಮಯ ಮಾಡಿಕೊಂಡು, ಕೊನೆಗೆ ಏನು ಮಾಡಬೇಕೊ ತಿಳಿಯದೆ, ಯಾಚಕರಾಗುತ್ತಿದ್ದೇವೆ. ಪ್ರಸ್ತುತ ಪ್ರಪಂಚದ ಸ್ಥಿತಿ ಹೀಗೆ ಇದೆ.

ಈ ನಡುವೆ ಪ್ರಪಂಚದಲ್ಲಿ ಭಕ್ತಿ ಹೆಚ್ಚಾಗಿದೆ ಎಂದು ಕೊಳ್ಳುತ್ತೇವೆ. ಆದರೆ ಗಮನಿಸಿದರೆ ಪ್ರಪಂಚದಲ್ಲಿ ಭಕ್ತಿ ಹೆಚ್ಚಾಗಿಲ್ಲ, ಭಕ್ತರು ಹೆಚ್ಚಾಗಿಲ್ಲ, ಹೆಚ್ಚಿದ್ದು ಯಾಚಕರು, ಗಮನಿಸಿದರೆ ಭಗವಂತನನ್ನು ಕೋರಿಕೊಳ್ಳದೆ ಆರಾಧಿಸುವವರು ಬಹಳ ಕಡಿಮೆ. ಯಾಚಿಸುವ ಕೆಲಸವನ್ನೆ ನಾವು ಭಕ್ತಿ ಎಂದುಕೊಳ್ಳುತ್ತೇವೆ ಆದರೆ ಯಾಚಿಸುವ ಭಕ್ತಿ ಬೇರೆ ಏಕೆಂದರೆ ಭಗವಂತನಾರಾಧನೆಯಿಂದ ಕೋರಿಕೆಯನ್ನು ಹಾಕಿದರೇನೆ ಭಕ್ತಿಯಾಗುತ್ತದೆ ಅಷ್ಟೆ ಹೊರೆತು ಕೋರಿಕೆಗಳು ಇದ್ದರೆ ಅದು ಯಾಚನೆ ಆಗುತ್ತದೆ ಈ ಕೆಲಸವನ್ನು ಪವಿತ್ರವಾದದ್ದೆಂದು ಭಾವಿಸಿ, ಎಷ್ಟೋ ಉತ್ತಮರೆಂದು ಉಬ್ಬಿ ಹೋಗುತ್ತಿದ್ದೇವೆ. ಆದರೆ ನಾವು ಸರ್ವಶಕ್ತರಾಗಿದ್ದೂ ಕೂಡಾ ಸಮಸ್ತವನ್ನೂ ಸಾಧಿಸಬಲ್ಲರಾಗಿದ್ದರೂ ಕೂಡಾ ಈ ವಿಷಯವನ್ನು ಆಲೋಚಿಸುತ್ತಿಲ್ಲ.

ಆಹಾರ ವಿಲ್ಲದವರು, ನಿರ್ಗತಿಕರು ಕೋರುವುದರಲ್ಲಿ ಅರ್ಥವಿದೆ, ಆದರೆ ಎಲ್ಲಾ ಇದ್ದು ಕೂಡಾ ಕೋರುವುದು ವಿಚಿತ್ರವಾಗಿದೆ. ಏನು ಇಲ್ಲದವರು ಆಹಾರಕ್ಕಾಗಿ ಕೋರುವುದು ಆದರೆ ಎಲ್ಲಾ ಇದ್ದರೂ ಕೂಡಾ ಅತ್ಯಾಸೆಯಿಂದ ಕೋರುತ್ತಿರುತ್ತಾರೆ

ಸ್ವಲ್ಪ ಈ ವಿಷಯವನ್ನು ಆಲೋಚಿಸಬೆಕು ನಾವು ಯಾವುದಾದರೂ ಆಲಯಕ್ಕೆ ಹೋದಾಗ ಹೊರಗೆ  ಕೆಲವು ಬಿಕ್ಷುಕರಿಗೆ ಕೆಲವು ಪೈಸೆಗಳನ್ನು ಹಾಕುತ್ತೆ ಹಾಗೆ ಹಾಕಿದಾಗ ಮಾಡಿದ್ದೇವೆ ಎಂದು ಉಬ್ಬಿ ಹೋಗುತ್ತೇವೆ. ಆ ಬಿಕ್ಷುಕರು ಕೂಡಾ ಆಲಯಕ್ಕೆ ಯಾವುದೋ ಘನ ಕಾರ್ಯ ಮಾಡುವುದಕ್ಕೆ ಹೋಗುತ್ತಿದ್ದೆವೆ ಎಂದುಕೊಳ್ಳುತ್ತಾರೆ. ಆದರೆ ಅವರು ಹೊರಗೆ  ಯಾವ ಕೆಲಸವನ್ನು ಮಾಡುತ್ತಿದ್ದಾರೋ ಒಳಗೆ ಹೋಗಿ ನಾವು ಕೂಡಾ, ಆದೆ ಕೆಲಸವನ್ನು ಮಾಡುತ್ತಿದ್ದೇವೆ ಎಂಬ ವಿಷಯ ಅವರಿಗೆ ತಿಳಿಯದು.

ಎಕೆಂದರೆ ನಾವು ಉಟ್ಟುಕೊಂಡ ರೇಷ್ಮೆ ಸೀರೆಗಳು, ಸೂಟು, ಕೋಟು ವಸ್ತ್ರಗಳು, ಅಲಂಕಾರಗಳನ್ನು ನೋಡಿ ನಾವು ಉತ್ತಮರೆಂದು ಅವರು ಅಂದುಕೊಳ್ಳುತ್ತಾರೆ.

ಆಲೋಚಿಸಿದರೆ, ಯಾಚಿಸುವುದೆನ್ನುವುದು, ವಿಶೇಷವಾದ ಕೆಲಸವೇನಲ್ಲ, ಉತ್ತಮ ಕೆಲಸವೂ ಅಲ್ಲ ಎಲ್ಲಾ ಇದ್ದು ನಾವು ಅತ್ಯಾಸೆಯಿಂದ ಮಾಡುವ ಕೆಲಸಕ್ಕೆ ಭಕ್ತಿ ಎಂಬ ಪವಿತ್ರವಾದ ಪದವನ್ನು ಜೋಡಿಸಿ ಭಕ್ತರೆಂದು ಉಬ್ಬಿಹೋಗುತ್ತಿದ್ದೇವೆ ಆದರೆ ಎಷ್ಟಿದ್ದರೂ ಸಂತೃಪ್ತಿ ಹೊಂದದೆ ಇರುವವರು ಯಾಚಕರಾಗಿ ಬದಲಾಗಬೆಕಾದದ್ದೆ.

ನಾವು ಎಷ್ಟು ಹೊತ್ತು "ಭಗವಂತನಿಂದ ಕೋರುತ್ತೇವೆಯಾಗಲಿ, ಭಗವಂತನನ್ನು ಕೋರುತ್ತಿಲ್ಲ" ಭಗವಂತನನ್ನು ಕೋರುವವರನ್ನೆ ಭಗವಂತನು ಇಷ್ಟ ಪಡುತ್ತಾನೆ ಅಷ್ಟೇ ಹೊರತು ಆತನಿಂದ ಎಲ್ಲಾ ಕೋರುವವರನ್ನು, ಫೋಟೋಗಳನ್ನು ಬದಲಾಯಿಸುವವರನ್ನು ಆತನು ಹೇಗೆ ಇಷ್ಟ ಪಡುತ್ತಾನೆ ?

ಭಗವಂತನಿಗೆ "ನಿಜವಾದ ಭಕ್ತರಾಗ ಬೇಕೆಂದರೆ" ಕೋರಿಕೊಳ್ಳದೆ ಆರಾಧಿಸಬೇಕು ನಿಷ್ಕಾಮವಾಗಿ ಆರಾದಿಸಬೇಕು ಹಾಗೆ ಕೋರಿಕೆಗಳು ಇಲ್ಲದೆ ಆರಾಧಿಸಬೇಕೆಂದರೆ ಕೋರಿಕೆಗಳ ಮೂಲವಾದ ಮನಸ್ಸುನ್ನು ಜಯಿಸಬೇಕು. ಮನಸ್ಸುನ್ನು ಜಯಿಸಬೇಕೆಂರೆ "ಶ್ವಾಸದ ಮೇಲೆ ಗಮನ" ಧ್ಯಾನ ಮಾಡಬೇಕು. ಧ್ಯಾನವನ್ನು ಮಾಡಿದರೆ ಕೋರಿಕೆಗಳನ್ನು ಜಯಿಸಿ ಬಗವಂತನಿಗೆ ನಿಜವಾದ ಭಕ್ತರಾಗುತ್ತೇವೆ. ಆದ್ದರಿಂದ ಆಲಯಗಳನ್ನು ಧ್ಯಾನ ಕೇಂದ್ರಗಳಾಗಿ ಬದಲಾಯಿಸೋಣ, ಪವಿತ್ರವಾದ ಧ್ಯಾನವನ್ನು ಮಾಡುವುದಕ್ಕೆ ಆಲಯಗಳನ್ನು, ಮಂದಿರಗಳನ್ನು ಉಪಯೋಗಿಸೋಣ ನಿಜವಾದ ಭಕ್ತಿ ಕೇಂದ್ರಗಳಾಗಿ ಬದಲಾಯಿಸೋಣ, ನಾವು ಕೂಡಾ "ನಿಜವಾದ ಭಕ್ತರಾಗೋಣ,"

# 19.ಯಾರೂ ನಿಜವಾದ ಭಕ್ತರು ?

ನಾವು ಭಗವಂತನ ಭಕ್ತರೆಂದು ಭಾವಿಸುತ್ತೇವೆ. ಭಕ್ತರೆಂದುಕೊಳ್ಳುತ್ತೇವೆ, ಆಗಲಿ ಭಕ್ತರೆಂದು ಹೇಳಿಕೊಳ್ಳುವ ಮೊದಲು ಅಸಲು ನಮಗೆ ಭಗವಂತನೆಂದರೆ ಇಷ್ಟವೆನಾ? ಎಂದು ಆಲೋಚಿಸಬೆಕು ಅಂದರೆ ನಮ್ಮ ಪ್ರವರ್ತನೆ ಭಗವಂತನೆಂದರೆ ಇಷ್ಟವೆನ್ನುವಂತೆ ಇದೆಯಾ? ಇಲ್ಲ? ನಿಜವಾಗಿ ನಮ್ಮ ವರ್ತನೆ ಆತನೆಂದರೆ ಇಷ್ಟ ಎನ್ನುವಂತೆ ಇದ್ದರೇನೆ ಭಗವಂತನೆಂದರೆ ನಮ್ಮ ಇಷ್ಟದ್ದಂತೆ. ಆದರೆ ನಮ್ಮ ವರ್ತನೆ ಅದಕ್ಕೆ ಭಿನ್ನವಾಗಿ ಅಂದರೆ ಭಗವಂತನು ಹೇಗೆ ಇಷ್ಟನಾದಂತೆ? ನಮಗೆ ಇಷ್ಟವಿಲ್ಲದ ಭಗವಂತನಿಗೆ ನಾವು ಭಕ್ತರೇಗೆ ಆಗುತ್ತೇವೆ?. ನಾನು ಆತನ ಭಕ್ತನೆಂದು ಸುಮ್ಮನೆ ಅಂದುಕೊಂಡರೆ ಸರಿ ಹೋಗದು ಹೇಳಿಕೊಂಡರೂ ಪ್ರಯೋಜನವಿಲ್ಲ.

ಏಕೆಂದರೆ ಭಗವಂತನ ಮೆಲೆ ಸ್ವಾರ್ಥದಿಂದ ಕೂಡಿದ ಇಷ್ಟವು ನಿಜವಾದ ಇಷ್ಟವಲ್ಲ "ನಿಸ್ವಾರ್ಥವಾದ ನಿಷ್ಕಾಮವಾದ, ಇಷ್ಟವೆ ನಿಜವಾದ ಇಷ್ಟ" ಅದೇ ನಿಜವಾದ ಭಕ್ತಿ ಇಷ್ಟವನ್ನು ತೋರಿಸುವುದೆಂದರೆ, ಅಂದರೆ ಕಾಣಿಕೆಗಳನ್ನು ಅರ್ಪಿಸುವುದಲ್ಲ. ವರ್ತನೆಯಲ್ಲಿ ತೋರಿಸಬೇಕು. ಭಗವಂತನ ಅರಿವು ಮಾಡಿಕೊಂಡು ಪ್ರತಿವಿಷಯದಲ್ಲೂ, ಪ್ರತಿಕಾರ್ಯದಲ್ಲೂ, ಪ್ರತಿಕ್ಷಣ ಪ್ರತಿಮಾತಿನಲ್ಲಿ, ವರ್ತನೆಯಲ್ಲಿ ಭಗವಂತನ ಮೇಲೆ ಇಷ್ಟವನ್ನು ತೋರಿಸಬೇಕು, ಆಗ ಭಗವಂತನ ಮೇಲೆ ನಮಗೆ ಇಷ್ಟವಿದ್ದಂತೆ.

ಕೆಲಸಗಳು ಇಲ್ಲದೆ, ಮಾತುಗಳಿದ್ದರೆ ಲಾಭವಿಲ್ಲ ಮಾತುಗಳಿಗಿಂತ ಕಾರ್ಯ ಗಳು ಮುಖ್ಯ ನಾವು ನಮ್ಮ ಮಾತುಗಳಿಗೆ ಪ್ರಾಮುಖ್ಯತೆ ಕೊಟ್ಟರೆ, ಭಗವಂತನು ಕೆಲಸಗಳಿಗೆ ಪ್ರಾಮುಖ್ಯತೆ ಕೊಡುತ್ತಾನೆ. ಅಷ್ಟೇ ಅಲ್ಲಿ ಭಗವಂತನು ಕಾಣಿಕೆಗಳಿಗೆ ಪ್ರಾಮುಖ್ಯತೆ ಕೊಡುವುದಿಲ್ಲ. ಏಕೆಂದರೆ ಭೂಮಿಯ ಮೇಲೆ ಸಮಸ್ತ ಸಂಪತ್ತುಗಳೇ ಅಲ್ಲ ಸೃಷ್ಟಿಯಲ್ಲಿ ಸಮಸ್ತ ಲೋಕಗಳ ಆತನವೆ. ಅ ಸಮಸ್ತ ಲೋಕಗಳಲ್ಲಿರುವ ಸಮಸ್ತ ಸಂಪತ್ತು ಆತನದೆ, ಆವುಗಳ ಮುಂದೆ ನಾವು ಕೊಡುವ ಕಾಣಿಕೆಗಳು ಎಷ್ಟರ ಮಟ್ಟದವು.

ಆದ್ದರಿಂದ ಕೆಲಸಗಳು ವರ್ತನೆ ಮುಖ್ಯವಾದ್ದರಿಂದ ಭಗವಂತನ ಬಗ್ಗೆ ನಮ್ಮ

ಕೆಲಸಗಳು ಹೇಗಿರಬೇಕು? ನಾವು ಹೇಗೆ ವರ್ತಿಸಬೆಕು? ಎಂಬುದನ್ನು ತಿಳಿದುಕೊಳ್ಳಬೇಕು, ಅದಕ್ಕಿಂತ ಮೊದಲು ಅಸಲು ಭಗವಂತನೆಂದರೆ ಯಾರು? ತಿಳಿದುಕೊಳ್ಳಬೇಕು. ಆತನನ್ನು ಅರಿತುಕೊಳ್ಳಬೇಕು. ಈ ಸಕಲ ಚರಾಚರ ಸೃಷ್ಟಿಯನ್ನು ಸೃಷ್ಟಿಸಿದ್ದು ಭಗವಂತನೆ ಸೃಷ್ಟಿಯ ಆದಿಯಿಂದ, ಯುಗಗಳು ಆದಿಯಿಂದ ಯಾವ ಶಕ್ತಿಯಾದರೆ ನಿರಂತರವಾಗಿ, ಅವಿನಾಶಿಯಾಗಿ ಪ್ರಕಾಶಿಸುತ್ತಿದೆಯೋ ಆ ಅತೀತ ಶಕ್ತಿಯೆ ಭಗವಂತನು, ಆತನೆ ಸೃಷ್ಟಿಕರ್ತ ಆತನ ಕುರಿತು ವರ್ಣಿಸಲು ಯಾರಿಂದಲೂ ಸಾಧ್ಯವಿಲ್ಲ.

ಭಗವಂತನು ಸರ್ವಾಂತರ್ಯಾಮಿ ಅಂದರೆ ಎಲ್ಲಾ ತಾನಾಗಿಯೇ ಇರುವವನು ಸಮಸ್ತ ಮಾನವರೆ ಅಲ್ಲ, ಭೂಮಿಯ ಮೇಲೆ ಸಮಸ್ತ ಜೀವಿಗಳೂ, ಪ್ರಾಣಿಗಳು ಇದನ್ನು ಅರ್ಥ ಮಾಡಿಕೊಂಡು ಆತನ ಸೃಷ್ಟಿಯನ್ನು ಪ್ರೀತಿಸಬೇಕು, ಗೌರವಿಸಬೇಕು ಸಮಾಭಾವದಿಂದ ನೋಡಬೇಕು.

ಹಾಗಾದರೆ ಎಲ್ಲಾ ಆತನೇ ಆದಾಗ ಆತನು ಅಲ್ಲದ, ಇಲ್ಲದ್ದು ಇಲ್ಲದಾಗ ಸಹ ಮಾನವರನ್ನು ಬೇರೆ ಕುಟುಂಬವೆಂದು ಕುಲವೆಂದು, ಕೀಳಾಗಿ, ಕಡಿಮೆಯಾಗಿ ನೋಡಬಾರದು. ನಾವು ಬೇರೆ ಮತವೆಂದು ದ್ವೇಷಿಸಿಬಾರದು ಬೇರೆದೇಶವೆಂದು ಯುಧ್ಧಗಳು ಮಾಡಬಾರದು ನಮ್ಮ ಸ್ವಾರ್ಥಕ್ಕಾಗಿ ಭಗವತ್ ಸ್ವರೂಪರಾದ ಇತರ ಮಾನವರನ್ನು ಮೋಸಗೋಳಿಸಬಾರದು ನಾವು ಯಾರಗೂ ಏನು ಮಾಡಿದರೂ ಅವಮಾನಿಸಬಾರದು, ನೋಯಿಸಬಾರದು, ಕೀಳಾಗಿ ನೋಡಬಾರದು ನಷ್ಟವನ್ನುಂಟು ಮಾಡಬರದು ನವು ಯರಿಗೆ ಏನು ಮಾಡಿದರೂ ಅದು ಭಗವಂತನಿಗೆ ಮಾಡಿದಂತೆಯೆ ಆಗುತ್ತದೆ ಇತರರಿಗೆ ಯಾವ ಕಷ್ಟಗಳನ್ನುಂಟು ಮಾಡಿದರೂ ಭಗವಂತನಿಗೆ ಕಷ್ಟ ಉಂಟು ಮಾಡುವುದೇ ಆಗಿದೆ ಇಷ್ಟವಾದ ಭಗವಂತನಿಗೆ ಕಷ್ಟವನ್ನುಂಟು ಮಾಡಬಾರದು

ಅಷ್ಟೆ ಅಲ್ಲ ಭಗವತ್ ಸ್ವರೂಪರಾದ ಸಹ ಮುಗ್ಧ ಜೀವಿಗಳನ್ನು ಹಿಂಸೆ ಪಡಿಸಬಾರದು ಅವುಗಳ ಮಾಂಸವನ್ನು ಭಕ್ಷಿಸಬಾರದು ಯಾವ ಜೀವಿಯನ್ನು ಹಿಂಸಿಸಿದರೂ ಭಗವಂತನನ್ನು ಹಿಂಸಿಸಿದಂತಲ್ಲವೇ ಹಾಗಾದರೆ ಭಗವಂತನೆಂದರೆ ಇಷ್ಟವಾದಾಗ ಆತನನ್ನು ಹೇಗೆ ಹಿಂಸೆ ಪಡಿಸುತ್ತೇವೆ ಇಷ್ಟವಾದವರನ್ನು ಯರಾದರೂ ಹಿಂಸಿಸುತ್ತಾರೆಯೇ ? ಹಿಂಸಿಸುತ್ತಾ ಅವರೆಂದರೆ ಇಷ್ಟವೆಂದು ಹೇಳುತ್ತೇವೆಯೇ?

ಮತ್ತೇ ಮಾತುಗಳಲ್ಲಿ ಭಗವಂತನೆಂದರೆ ಹೇಳಿ, ಕೈಗಳಿಂದ ಹಿಂಸಿಸುತ್ತಿದ್ದೇವೆ, ಹೀಗೆ ಭಗವಂತನ ರೂಪಗಳ ಬಗ್ಗೆ ನಿರ್ದಯವಾಗಿ ವರ್ತಿಸಿದರೆ ಭಗವಂತನೆಂದರೆ ಇಷ್ಟವಿಲ್ಲವೆಂದೆ ಅರ್ಥವಲ್ಲವೆ? ತನಗೆ ಇಷ್ಟವಿಲ್ಲದ ಭಗವಂತನ ಬಗ್ಗೆ ಹಾಗೆ ವರ್ತಿಸುವುದಿಲ್ಲವಲ್ಲ? ಭಗವಂತನ ಬಗ್ಗೆ ಹಾಗೆ ವರ್ತಿಸುವುದಿಲ್ಲ? ಭಗವಂತನ ಬಗ್ಗೆ

ಹಾಗೆ ವರ್ತಿಸುವವರು ಭಗವಂತನಿಗೆ ಹೇಗೆ ಇಷ್ಟವಾಗುತ್ತಾನೆ ಭಗವಂತನಿಗೆ, ಭಕ್ತನೂ ಅಲ್ಲ ಅವನದು ಭಕ್ತಿಯೂ ಅಲ್ಲ

ಗೀತೆಯಲ್ಲಿ "ಅದ್ವೇಷ್ಟಾ ಸರ್ವಭೂತಾನಾಂ" ಅಂದರೆ ಯಾವ ಪ್ರಾಣಿಯನ್ನು ದ್ವೇಷಿಸಿದವನು ನನಗೆ ಭಕ್ತನು, ಅತ್ಯಂತ ಪ್ರಿಯಾನಾಗುತ್ತಾನೆ" ಎಂದು ಶ್ರೀ ಕೃಷ್ಣ ಪರಮಾತ್ಮ ಹೇಳಿದ್ದಾರೆ.

ಆದ್ದರಿಂದ ಯಾರಾದರೂ ಜೀವ ಹಿಂಸೆ ಮಾಡರೊ, ಸಮಸ್ತ ಮಾನವವರನ್ನು, ಜೀವಿಗಳನ್ನು ತಮ್ಮ ಜೊತೆಗೆ ಸಮಾನವಾಗಿ ಪ್ರೇಮಿಸುತ್ತಾರೋ? ತಮ್ಮ ಭಾದೆಯಂತೆ ಇತರ ಜೀವಿಗಳ ಭಾದೆ ಎಂದು ತಿಳಿದುಕೊಳ್ಳುತ್ತಾರೋ? ತಮ್ಮ ಹಾಗೆ ಅವು ಕೂಡಾ ಆನಂದವಾಗಿ ಇರಬೇಕೆಂದು ಕೋರಿಕೊಳ್ಳುವವರೆ ಭಗವಂತನ ನಿಜವಾದ ಭಕ್ತರು.

ಸೃಷ್ಟಿಯಲ್ಲಿ ಸಮಸ್ತ ಜೀವಿಗಳು ಭಗವಂತನ ಸ್ವರೂಪಗಳೆಂದು ತಿಳಿದುಕೊಳ್ಳಬೇಕೆನ್ನುವ ಭಗವಂತನಿಗೆ "ನಿಜವಾದ ಭಕ್ತನು" ಆಗಬೇಕೆಂದರೆ? ಒಂದೇ ಮಾರ್ಗ ಅದೇ "ಅನುಪಾನಸತಿ ಧ್ಯಾನ" ಧ್ಯಾನ ಮಾಡಿದರೆ ಎಲ್ಲಾ ಸತ್ಯಗಳನ್ನು ತಿಳಿದುಕೊಳ್ಳುತ್ತೇವೆ.

## ಪಿರಮಿಡ್ ಧ್ಯಾನಿಗಳ ತತ್ವಸಾರ

ಜ್ಞಾನ ನವರತ್ನಗಳು

ಆತ್ಮವೇ ಪರಬ್ರಹ್ಮ

ಜೀವಿಯೇ ದೇವರು, ದೇಹವೇ ದೇವಾಲಯ

ಉಸಿರೇ ಗುರು, ಸಮಯವೇ ಸಾಧನೆ

ಸಹನೆಯೆ ಪ್ರಗತಿ, ಅನುಭವವೇ ಜ್ಞಾನ

ದಾನವೇ ಧರ್ಮ, ಧರ್ಮವೇ ಪುಣ್ಯ

# 20. ದೇವರುಗಳೆಲ್ಲಾ ದಾರಿ ತೋರಿಸಲೆಂದೇ ಬಂದಿದ್ದಾರೆ।

ದೇವರು ಶಕ್ತಿ ಸ್ವರೂಪನು, ದಯಾಮಯನು, ಕರುಣಾಮಯನು, ಆದ್ದರಿಂದ ಆತನನ್ನು ಪೂಜಿಸಿದರು, ಭಜನೆ ಮಾಡಿದರು, ಪ್ರಾರ್ಥಿಸಿದರೂ, ನಮಾಜು ಮಾಡಿದರೂ ಕಷ್ಟಗಳನ್ನು ತೀರಿಸುತ್ತಾನೆಂದು, ದುಃಖಗಳನ್ನು ತೊಲಗಿಸುತ್ತಾನೆಂದು ಭಾವಿಸುತ್ತಾರೆ. ಇದೇ ಅಭಿಪ್ರಾಯ ಎಷ್ಟು ಪೀಳಿಗೆಗಳಿಂದ ಎಲ್ಲರಲ್ಲೂ ಇದೆ. ಆದ್ದರಿಂದ ಪೂಜೆ, ಪ್ರಾರ್ಥನೆ, ನಮಾಜು, ಭಜನೆಗಳ ಮೂಲಕ ದೇವರನ್ನು ಪ್ರಸನ್ನನನ್ನಾಗಿ ಮಾಡಿಕೊಂಡು, ಕೋರಿಕೆಗಳನ್ನು ತೀರಿಸಿಕೊಳ್ಳಬಹುದೆಂದು ಅಂದುಕೊಳ್ಳುತ್ತಾರೆ. ಅದೇ ಮಾಡುತ್ತಿದ್ದಾರೆ. ಆ ನಂಬಿಕೆಯಿಂದ ಇದ್ದಾರೆ. ಅದಕ್ಕಿಂತ ಇನ್ನು ಆಲೋಚಿಸುತ್ತಿಲ್ಲ.

ಆದರೆ ನಾವು ಆರಾಧಿಸುವ ದೇವರುಗಳೆಲ್ಲಾ ನಮ್ಮ ಕಷ್ಟಗಳನ್ನು ತೀರಿಸಲು ಬಂದಿಲ್ಲ. ಅವರು ನಮ್ಮ ಕಷ್ಟಗಳನ್ನು ತೊಲಗಿಸಿಕೊಳ್ಳುವ ಮಾರ್ಗವನ್ನು ತೋರಿಸಲು ಬಂದವರೆಂದು ತಿಳಿದುಕೊಳ್ಳಬೇಕು.

ನಾವು ಅಶಾಂತಿಯಿಂದ, ಅಂತ್ಯವಿಲ್ಲದ ದುಃಖಗಳಿಂದ, ಬಾಧೆಪಡುತ್ತಾ ಅವುಗಳಿಂದ ಹೊರಬರಲಾರದೆ, ದಿಕ್ಕು ತೋಚದ ಸ್ಥಿತಿಯಲ್ಲಿ ಇರುವಾಗ, ನಮ್ಮನ್ನು ಉದ್ಧರಿಸಲು, ನಮ್ಮ ದುಃಖಗಳನ್ನು ನಿವಾರಿಸಿಕೊಳ್ಳುವ ದಾರಿಯನ್ನು ತೋರಿಸಲು, ಆವಶ್ಯಕತೆಗೆ ಅನುಗುಣವಾಗಿ ಒಂದೊಂದು ಪ್ರದೇಶದಲ್ಲಿ, ಅಲ್ಲಿಯ ಪರಿಸ್ಥಿತಿಯನ್ನು ಗಮನಿಸಿ, ಒಂದೊಂದು ರೂಪದಲ್ಲಿ ಭಗವಂತನು ಅವತರಿಸುತ್ತಾನೆ.

ದಾರಿ ತಪ್ಪಿ ಏನು ಮಾಡಬೇಕೊ ಎಂದು ತಿಳಿಯದ ಸ್ಥಿತಿಯಲ್ಲಿ ಇದ್ದ ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸುವುದಕ್ಕೆ ಬರುತ್ತಾನೆ. ಅಷ್ಟೇ ಅಲ್ಲ ನಾವು ಹೇಗೆ ಜೀವಿಸಬೇಕೆಂದು ತಾನೇ ಸ್ವಯಂ ಆಚರಿಸಿ ತೋರಿಸುತ್ತಾನೆ. ಮಾನವ ಜೀವನದ ಶ್ರೇಷ್ಠತೆಯನ್ನು ಹೇಳುತ್ತಾ, ಮಾನವನು ಅಂದುಕೊಂಡರೆ ಸಾಧಿಸಲಾರದ್ದು ಯಾವುದೂ ಇಲ್ಲವೆಂದು ಸ್ವಯಂ ತನ್ನ ಜೀವನದ ಮೂಲಕ ಬೋಧಿಸುತ್ತಿದ್ದಾನೆ. ತಾನು ಆದರ್ಶಪ್ರಾಯವಾಗಿ ನಿಲ್ಲುತ್ತಿದ್ದಾನೆ. ಹಾಗೆ ತಾನು ಮಾಡಬೇಕಾದ ಕಾರ್ಯ

ಪೂರ್ಣಗೊಂಡ ನಂತರ ತನ್ನ ಅವತಾರವನ್ನು ಸಾಕುಮಾಡುತ್ತಿದ್ದಾನೆ. ಹೀಗೆ ಯುಗ ಯುಗಗಳಿಂದ ಭಗವಂತನು ಪ್ರಪಂಚದಾದ್ಯಂತ ಎಷ್ಟೋ ರೂಪಗಳಲ್ಲಿ ಬರುವುದನ್ನು ನಾವು ಗನಿಸುತ್ತಲೇ ಇದ್ದೇವೆ.

ಹಾಗೆ ಬಂದ ದೇವರುಗಳೆಲ್ಲಾ ತಮಗಿರುವ ಶಕ್ತಿಯಿಂದ ಎಷ್ಟೊ ಮಹಿಮೆಗಳನ್ನು ತೋರಿಸುತ್ತಾ, ನಮಗೆ ಎಷ್ಟೋ ಬೋಧೆಗಳನ್ನು ಮಾಡುತ್ತಿದ್ದಾರೆ. ಆದರೆ ನಾವು ಅವರ ಶಕ್ತಿಗಳನ್ನು ನೋಡುತ್ತಿದ್ದೇವೆಯಾಗಲೀ, ಅವರ ಬೋಧೆಗಳನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಅವರು ಶಕ್ತಿವಂತರು ಆದ್ದರಿಂದ ಅವರನ್ನು ಆರಾಧಿಸಿದರೆ ಕಷ್ಟಗಳು ತೀರುತ್ತವೆ ಎಂದು ಭಾವಿಸುತ್ತಿದ್ದೇವೆ. ಆದರೆ ಅವರು ಬೋಧಿಸಿದ ವಿಷಯಗಳನ್ನು ಆಚರಿಸಿದರೆ ಈ ಜನ್ಮದಲ್ಲಿ ಅನುಭವಿಸುತ್ತಿರುವ ದುಃಖಗಳು ಮಾತ್ರವಲ್ಲ, ಶಾಶ್ವತವಾಗಿ ದುಃಖದಿಂದ ಹೊರ ಬರಬಹುದೆಂದು ಗ್ರಹಿಸಲಾರದವರಾಗಿದ್ದೇವೆ. ಎಷ್ಟು ಹೊತ್ತು "ಅವರ ಪಾದಗಳನ್ನು ಪೂಜಿಸುತ್ತೇವಾಗಲಿ ಅವರ ಮಾತುಗಳನ್ನು ಹಿಡಿದುಕೊಳ್ಳುತ್ತಿಲ್ಲ." "ಅವರನ್ನು ಭಜನೆಗಳಿಂದ, ಸ್ತೋತ್ರಗಳಿಂದ ಆರಾಧಿಸುತ್ತಿದ್ದೇವೆ ಆಗಲಿ, ಆದರ್ಶವಾಗಿ ತೆಗೆದುಕೊಳ್ಳುತ್ತಿಲ್ಲ" "ಅವರನ್ನು ಪ್ರಾರ್ಥಿಸುತ್ತಿದ್ದೇವೆ ಆಗಲೀ ಪಾಪಗಳನ್ನು ತೊಲಗಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿಲ್ಲ". "ಶಕ್ತಿ ಹೀನರೆಂದು, ಅಲ್ಪರೆಂದು, ಭಾವಿಸುತ್ತಿದ್ದೇವಾಗಲೀ, ನಮಗೆ ಶಕ್ತಿಯಿಂದ ಸಾಧನೆ ಮಾಡಿದರೆ, ಕೋರಿಕೊಂಡದ್ದು ಸಾಧಿಸಬಲ್ಲೆವೆಂದು ತಿಳಿದುಕೊಳ್ಳದೆ ಹೋಗುತ್ತಿದ್ದೇವೆ.

ಗಮನಿಸಿದರೆ ಯುಗ ಯುಗಗಳಿಂದ ದೇವರುಗಳು ಬಂದು ಹೋಗುತ್ತಿದ್ದರೂ ನಮ್ಮ ಸ್ಥಿತಿ–ಗತಿಗಳು ಉನ್ನತಿಗೇರುತ್ತಿಲ್ಲ. ನಮ್ಮ ದುಃಖ ಪೂರ್ತಿಯಾಗಿ ನಿವಾರಣೆ ಆಗುತ್ತಿಲ್ಲ.

ಶ್ರೀ ರಾಮಚಂದ್ರನು ಬಂದು ಹೋದ ನಂತರ ತ್ರೇತಾಯುಗ ಅಂತ್ಯವಾಗಿ, ದ್ವಾಪರಯುಗ ಬಂದಿತು. ಹಾಗೆಯೇ ಶ್ರೀ ಕೃಷ್ಣ ಭಗವಾನನು ಬಂದು ಹೋದ ನಂತರ ದ್ವಾಪರಯುಗ ಅಂತ್ಯವಾಗಿ ಕಲಿಯುಗ ಬಂದಿತು. ಹಾಗೆ ದೇವರುಗಳು ಬಂದು ಹೋದರೂ ನಮ್ಮ ಜೀವನಗಳು ಇನ್ನೂ ಸ್ವಾರ್ಥದಿಂದ ಕೂಡಿ ಇನ್ನೂ ಇನ್ನೂ ದುಃಖ ಭೂಮಿಗೆ ತುಂಬುತ್ತಿವೆ. ಕಲಿಯುಗ ಪ್ರವೇಶದ ನಂತರ ಬುದ್ಧ ಭಗವಾನನು, ಜೀಸಸ್‌ಕ್ರೈಸ್ಟ್, ಮಹಮ್ಮದ್, ಕಬೀರ, ನಾನಕ್, ಮಹಾವೀರ, ರಾಮಕೃಷ್ಣ ಪರಮ ಹಂಸ, ರಮಣ ಮಹರ್ಷಿ, ಸತ್ಯಸಾಯಿಬಾಬಾ, ಹೀಗೆ ಎಷ್ಟೋ ಮಂದಿ ಬಂದರೂ ದುಃಖವು ಹೆಚ್ಚುತ್ತಿದೆಯೇ ಹೊರತು, ದುಃಖದಿಂದ ವಿಮುಕ್ತಿ ಹೊಂದುತ್ತಿಲ್ಲ.

ಇದಕ್ಕೆ ಮುಖ್ಯ ಕಾರಣ ಆ ದೇವರುಗಳೆಲ್ಲಾ ಬೋಧಿಸುವುದು ಒಂದು, ನಾವು

ಮಾಡುವುದು ಇನ್ನೊಂದು. ನಾವು ಅವರು ಹೇಳಿದ್ದು ಆಚರಿಸದೆ ಅವರನ್ನು ಆರಾಧಿಸುವುದಕ್ಕೆ ಅಭ್ಯಾಸಗೊಂಡಿದ್ದೇವೆ. ಆದ್ದರಿಂದ ದುಃಖದಿಂದ ಪೂರ್ತಿಯಾಗಿ ನಿವಾರಣೆ ಹೊಂದದೆ, ಶಾಂತಿಯಾಗಿ ಜೀವಿಸುವುದಕ್ಕೆ ಆಗುತ್ತಿಲ್ಲ.

ಆಲೋಚಿಸಿದರೆ ಭೂಲೋಕದಲ್ಲಿ ಯಾವ ದೇವರು ಮಾನವನ ದುಃಖವನ್ನು ತೊಲಗಿಸಿಲ್ಲ. ದುಃಖಗಳನ್ನು ತಡೆದುಕೊಳ್ಳುವ ಮಾರ್ಗ, ದುಃಖದಿಂದ ಶಾಶ್ವತವಾಗಿ ಹೊರಬರುವ ಮಾರ್ಗಗಳನ್ನು ಮಾತ್ರವೇ ಬೋಧಿಸಿ ಹೋದರು.

ಎಲ್ಲರ ಹಾಗೆ ಪ್ರಸ್ತುತ ಬ್ರಹ್ಮರ್ಷಿ ಪತ್ರಿಯವರು ನಮ್ಮ ರೋಗಗಳು, ದುಃಖಗಳು ನಿವಾರಿಸಿಕೊಳ್ಳುವ ಮಾರ್ಗವಾದ ಧ್ಯಾನ ಸಾಧನೆ ಬೋಧಿಸಿದ್ದಾರೆ. ಈ ಧ್ಯಾನ ಸಾಧನೆಯ ಮೂಲಕ ತಾತ್ಕಾಲಿಕವಾಗಿ ಅಲ್ಲದೇ, ಶಾಶ್ವತವಾಗಿ ದುಃಖವನ್ನು ನಿವಾರಿಸಿಕೊಳ್ಳುತ್ತೇವೆ ಮುಕ್ತಿಯನ್ನು ಹೊಂದುತ್ತೇವೆ.

# "ಧ್ಯಾನ ಮಾಡುವ ವಿಧಾನ"

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

**ಧ್ಯಾನವನ್ನು ಯಾರಾದರೂ ಮಾಡಬಹುದು**
**ಯಾವ ವಯಸ್ಸಿನವರಾದರೂ ಮಾಡಬಹುದು**
**ಯಾವ ಸಮಯದಲ್ಲಿಯಾದರೂ ಮಾಡಬಹುದು**
**ಯಾವ ಸ್ಥಳದಲ್ಲಿಯಾದರೂ ಮಾಡಬಹುದು.**

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

# 21. ಬೆಳೆಯ ಬೇಕೆಂದರೆ ಕೆಳಸ್ಥಾಯಿಯನ್ನು ಬಿಡಬೇಕು

ಮಾನವರೆಲ್ಲರೂ ನೋಡಲಿಕ್ಕೆ ಒಂದೇ ತರಹ ಇದ್ದರೂ ಒಬ್ಬೊಬ್ಬರು ಒಂದೊಂದು ಜನ್ಮದಲ್ಲಿರುತ್ತಾರೆ. ಕೆಲವರು 50 ಜನ್ಮಗಳಲ್ಲಿದ್ದರೆ, ಇನ್ನು ಕೆಲವರು 100 ಜನ್ಮಗಳಲ್ಲಿರುತ್ತಾರೆ. ಹಾಗೆಯೇ ಇನ್ನೂ ಹೆಚ್ಚು ಜನ್ಮಗಳಲ್ಲಿಯೂ ಇರುವವರು ಕೂಡಾ ಇದ್ದಾರೆ. ಹಾಗೆ ಪ್ರಾಥಮಿಕ ಜನ್ಮಗಳಲ್ಲಿ ಇರುವವರ ಆತ್ಮಸ್ಥಾಯಿಯನ್ನು ಶೈಶವಾತ್ಮ ಎನ್ನುತ್ತಾರೆ. ಇವರು ಭಗವಂತನಿಲ್ಲ ಎನ್ನುತ್ತಾರೆ. ಇದ್ದರೆ ತೋರಿಸು ಎಂದು ವಾದಿಸುತ್ತಾರೆ. ಪೂಜೆಗಳನ್ನು ಮಾಡುವುದಿಲ್ಲ.

ಇಂತಹವರನ್ನು ಆಗಲೇ ಜನ್ಮಿಸಿದ ಹಸುಗೂಸಿನ ಸ್ಥಿತಿ ಎನ್ನಬಹುದು. ತಿಳಿದುಕೊಳ್ಳುವುದಕ್ಕಾಗಿ ಓದಿನ ವಿಷಯದಲ್ಲಿ ಇನ್ನೂ ವಿದ್ಯೆ ಪ್ರಾರಂಭಿಸಿದ್ದವರಂತೆ ಭಾವಿಸಬಹುದು. ಇವರದು "ಮೂಲಾಧಾರ ಚಕ್ರದ ಸ್ಥಿತಿ" ಈ ಸ್ಥಿತಿಯಲ್ಲಿ ಇವರ ವರ್ತನೆ ಹೀಗೆಯೇ ಇರುತ್ತದೆ. ಅದು ಅವರ ದೋಷವಲ್ಲ. ಅದು ಅದರ ಜನ್ಮ ಸ್ಥಿತಿ.

***********

ಹಾಗೆ ಕೆಲವು ಜನ್ಮಗಳನ್ನು ತೆಗೆದುಕೊಂಡ ಮೇಲೆ (ಅಂದರೆ ಇದಕ್ಕೆ ಪ್ರತ್ಯೇಕವಾಗಿ ಇಷ್ಟು ಜನ್ಮಗಳು ಎಂದು ಇರುವುದಿಲ್ಲ) ಇವರಸ್ಥಾಯಿ ಬೆಳೆಯುತ್ತದೆ. ಆ ಜನ್ಮಗಳಲ್ಲಿ ಕೆಲವು ಪಾಠಗಳನ್ನು ಕಲಿತುಕೊಳ್ಳುತ್ತಾರೆ. ಜೀವನದಲ್ಲಿ ಎಷ್ಟೋ ಕಷ್ಟಗಳನ್ನು, ಸುಖಗಳನ್ನು ಅನುಭವಿಸುತ್ತಾರೆ. ಎಲ್ಲವನ್ನೂ ನೋಡುತ್ತಾರೆ, ಎಲ್ಲರನ್ನು ನೋಡುತ್ತಾರೆ ಅನುಭವಗಳನ್ನು ಸಂಪಾದಿಸುತ್ತಾರೆ. ಸ್ವಲ್ಪ ವೃದ್ಧಿಯಾಗುತ್ತಾರೆ. ಯಾವದೋ ಶಕ್ತಿ ಇದನ್ನೆಲ್ಲಾ ನಡೆಸುತ್ತದೆ ಎಂದು ಭಾವಿಸುತ್ತಾರೆ. ಆ ಶಕ್ತಿಯೇ ದೇವರು ಎಂದು ಅಂದುಕೊಳ್ಳುತ್ತಾರೆ. ಆದ್ದರಿಂದ ಈ ಸ್ಥಿತಿಯಲ್ಲಿ ದೇವರಿದ್ದಾನೆಂದುಕೊಳ್ಳುತ್ತಾರೆ. ಆದರೆ ತಾನು ನಂಬಿದವನೇ ದೇವರು, ಇನ್ನು ಯಾರೂ ದೇವರು ಅಲ್ಲ ಎಂದು ಹೇಳುತ್ತಾರೆ.

ಇಲ್ಲಿ ಇವರ ಆತ್ಮ ಸ್ಥಾಯಿಯನ್ನು 'ಬಾಲಾತ್ಮ' ಎಂದು ಎನ್ನುತ್ತಾರೆ. ದೇವರು

ಇದ್ದಾನೆಂದು ನಂಬುತ್ತಾರೆ. ಆದ್ದರಿಂದ ಇವರು ಪೂಜೆಗಳು, ಭಜನೆಗಳು, ಪ್ರಾರ್ಥನೆಗಳನ್ನು ಮಾಡುತ್ತಾರೆ. ಇಂತಹವರನ್ನು ಬೆಳೆಯುವ ಮಗುವಿನ ವೃದ್ದಿದೆಶೆ ಎಂದು ಹೇಳಬಹುದು. ವಿದ್ಯೆಯ ವಿಷಯಕ್ಕೆ ಬಂದರೆ ಪ್ರಾಥಮಿಕ ಓದಿನಲ್ಲಿ ಪ್ರವೇಶಿಸಿದವರೆಂದು ಭಾವಿಸಬಹುದು. ಇವರದು "ಸ್ವಾದಿಷ್ಠಾನ ಚಕ್ರಸ್ಥಾಯಿ".

***********

ಹೀಗೆ ಇನ್ನು ಕೆಲವು ಜನ್ಮಗಳು ತೆಗೆದುಕೊಂಡ ನಂತರ ಇನ್ನು ಅನುಭವವನ್ನು ಸಂಪಾದಿಸಿ ಈ ಸೃಷ್ಟಿಯೆಲ್ಲಾ ಒಂದು ಶಕ್ತಿಯಿಂದ ನಡೆಯುತ್ತಿದೆ. ರೂಪಗಳು ಬೇರೆಯಾದರೂ ದೇವರು ಒಬ್ಬನೆ ಎಂದು ತಿಳಿದುಕೊಳ್ಳುತ್ತಾರೆ. ಆದ್ದರಿಂದ ಎಲ್ಲಾ ದೇವರು ಒಂದೇ ಎನ್ನುತ್ತಾರೆ.

ಇಲ್ಲಿ ಇವರ ಆತ್ಮ ಸ್ಥಾಯಿಯನ್ನು 'ಯುವಾತ್ಮ' ಎಂದು ಅನ್ನುತ್ತಾರೆ. ಆ ಸ್ಥಿತಿಯಲ್ಲಿ ಇವರು ದೇವರ ಸ್ತೋತ್ರಗಳನ್ನು ಮಾಡುತ್ತಾರೆ. ಬೆಳೆಯುವ ಮಗುವಿನ ತಪ್ಪು ಹೆಜ್ಜೆಗಳು ಹಾಕುವ ದೆಶೆ. ವಿದ್ಯೆಯಲ್ಲಿ ಹೈಸ್ಕೂಲು ಓದಿನಲ್ಲಿ ಇರುವವರಂತೆ ಭಾವಿಸಬಹುದು. ಇವರದು 'ಮಣಿಪೂರಕ ಚಕ್ರಸ್ಥಾಯಿ'.

***********

ಇನ್ನು ಇನ್ನು ಬಹಳ ಜನ್ಮಗಳು ತೆಗೆದುಕೊಂಡ ನಂತರ ದೇವರು ಎಲ್ಲೂ ಇಲ್ಲ, ನನ್ನಲ್ಲಿಯೇ ಇದ್ದಾನೆ, ಆತ್ಮಸ್ವರೂಪನಾಗಿದ್ದಾನೆ ಎಂದು ಪುಸ್ತಕಗಳ ಮೂಲಕ, ಪಂಡಿತರ ಮೂಲಕ, ದೊಡ್ಡವರ ಮೂಲಕ ತಿಳಿದುಕೊಳ್ಳುತ್ತಾನೆ,

ಇವರ ಆತ್ಮ ಸ್ಥಿತಿಯನ್ನು "ಪ್ರೌಢಾತ್ಮ" ಎಂದು ಹೇಳುತ್ತಾರೆ. ಈ ಸ್ಥಿತಿಯಲ್ಲಿ ಮಂತ್ರವನ್ನು ಜಪಿಸುತ್ತಿರುತ್ತಾರೆ. ಬೆಳೆಯುವ ಮಗು ಚೆನ್ನಾಗಿ ನಡೆಯುವ ದೆಸೆ, ವಿದ್ಯೆಯಲ್ಲಿ ಜೂನಿಯರ್ ಕಾಲೇಜಿನ ಸ್ಥಾಯಿಯಲ್ಲಿ ಇರುವವರು ಎಂದು ಭಾವಿಸಬಹುದು. ಇವರದು 'ಅನಾಹುತ ಚಕ್ರದ ಸ್ಥಾಯಿ".

***********

ಹೀಗೆ ಇನ್ನು ಕೆಲವು ಜನ್ಮಗಳನ್ನು ತೆಗೆದುಕೊಂಡ ಮೇಲೆ, ತನ್ನಲ್ಲಿರುವ ಭಗವಂತನು ಅಂದರೆ ಆತ್ಮನನ್ನು ತಿಳಿಯಲು ಪ್ರಯತ್ನಿಸುತ್ತಾರೆ.

ಇವರ ಆತ್ಮ ಸ್ಥಿತಿಯನ್ನು 'ವೃದ್ಧಾತ್ಮ' ಎಂದು ಹೇಳುತ್ತಾರೆ. ಈ ಸ್ಥಿತಿಯಲ್ಲಿ

ಧ್ಯಾನವನ್ನು ಪ್ರಾರಂಭಿಸುತ್ತಾರೆ. ಬೆಳೆಯುವ ಮಗುವು ಓಡುತ್ತಿರುವ ದೆಶೆಯುಳ್ಳವನು. ವಿದ್ಯೆಯಲ್ಲಿ ಕಾಲೇಜಿನ ಸ್ಥಾಯಿಯಲ್ಲಿ ಇರುವವರೆಂದು ಭಾವಿಸಬಹುದು. ಇವರದು "ವಿಶುದ್ಧ ಚಕ್ರಸ್ಥಾಯಿ".

***********

ಇನ್ನೂ ಕೆಲವು ಜನ್ಮಗಳ ನಂತರ ಭಗವಂತನೆ ನನ್ನಲ್ಲಿರುವನು ಎನ್ನುವ ಸ್ಥಿತಿಯಿಂದ ಆ ಭಗವಂತನು ನಾನೇ ಅಂದರೆ 'ಅಹಂ ಬ್ರಹ್ಮಾಸ್ಮಿ" ಎಂದು ಅನುಭವ ಪೂರ್ವಕವಾಗಿ ತಿಳಿದುಕೊಳ್ಳುತ್ತಾರೆ.

ಎಲ್ಲಾ ಕೆಲಸಗಳನ್ನು ಮಾಡಬಲ್ಲ ಬಾಲಕನದಸೆ, ವಿದ್ಯೆಯಲ್ಲಿ ಸ್ನಾತಕೋತ್ತರ ಪದವಿ ಪಡೆದವರೆಂದು ಭಾವಿಸಬಹುದು. ಇವರದು "ಅಜ್ಞಾಚಕ್ರ ಸ್ಥಾಯಿ".

***********

ಹಾಗೆ ಕೊನೆಯ ಜನ್ಮಕ್ಕೆ ಸೇರಿಕೊಳ್ಳುತ್ತಾರೆ. ಬ್ರಹ್ಮ ಜ್ಞಾನಿಗಳಾಗುತ್ತರೆ. ಸಕಲ ಚರಾಚರ ಸೃಷ್ಟಿ ಕುರಿತು ಪೂರ್ತಿಯಾಗಿ ತಿಳಿದುಕೊಳ್ಳುತ್ತಾರೆ. "ಪೂರ್ಣಾತ್ಮ" ಸ್ಥಾಯಿಗೆ ಸೇರಿಕೊಳ್ಳುತ್ತಾರೆ. ದಿವಯದೃಷ್ಟಿ ಸಂಪಾದಿಸುತ್ತಾರೆ. ತ್ರಿಕಾಲ ಜ್ಞಾನಿಗಳಾಗುತ್ತಾರೆ. ಎಲ್ಲಾ ತಾನೇ ಎಲ್ಲೆಲ್ಲೂ ತಾನೇ ಎಂದು ತಿಳಿದುಕೊಳ್ಳುತ್ತಾರೆ. ವಿದ್ಯೆಯಲ್ಲಿ ಪಿಹೆಚ್‌ಡಿ ಸಂಪಾದಿಸಿದವರೆಂದು ಭಾವಿಸಬಹುದು. "ಸಹಸ್ರಾರ ಸ್ಥಿತಿಗೆ" ಸೇರಿದವರು. ಎಲ್ಲಾ ವಿಧಗಳ ಕೆಲಸಗಳನ್ನು ಸಂಪೂರ್ಣ ನೈಪುಣ್ಯದಿಂದ ಮಾಡಬಲ್ಲ ಯುವಕದೆಸೆ ಎನ್ನಬಹುದು.

***********

ಹೀಗೆ ಪ್ರತಿಯೊಬ್ಬರು ಜನ್ಮಗಳು ಹೆಚ್ಚಾದಷ್ಟು ಮೊದಲು ದೇವರಿದ್ದಾನೆಂದು, ನಂತರ ತಾನು ನಂಬಿರುವವನೇ ದೇವರು, ನಂತರ ದೇವರೆಲ್ಲಾ ಒಂದೇ ಎಂದು, ಆಮೇಲೆ ದೇವರು ಎಲ್ಲೂ ಇಲ್ಲ, ತನ್ನಲ್ಲಿಯೇ ಇರುತ್ತಾನೆಂದು, ತನ್ನಲ್ಲಿರುವ ಆತ್ಮನೆ ಭಗವತನೆಂದು ಕೊನೆಗೆ ಭಗವಂತನು ತಾನೇ ಎಂದು ತಿಳಿದುಕೊಳ್ಳುತ್ತಾರೆ. ಎಲ್ಲಾ ಒಂದೇ ಎಂದು ಕೂಡ ತಿಳಿದುಕೊಳ್ಳುತ್ತಾರೆ.

***********

ಹೀಗೆ ಆತ್ಮ ಸ್ಥಾಯಿ ಬೆಳೆದಂತೆಲ್ಲ ಅಸಲು ಪೂಜೆ ಮಾಡುವವರು ನಿಧಾನವಾಗಿ

ಪೂಜೆಗಳನ್ನು ಮಾಡುತ್ತಾ, ಸ್ತೋತ್ರಗಳನನು ಓದುತ್ತಾ, ನಂತರ ಜಪ ಮಾಡುತ್ತಾ, ಕೊನೆಗೆ ಧ್ಯಾನದಲ್ಲಿ ಬರುತ್ತಾರೆ. ಧ್ಯಾನ ಮಾಡುತ್ತಾ ದಿವ್ಯ ದೃಷ್ಟಿ ಸಂಪಾದಿಸಿಕೊಂಡು ದೇವರಾಗುತ್ತಾರೆ.

***********

ಇಲ್ಲಿ ನಾವು ಆಲೋಚಿಸಬಾಕಾದದ್ದು, ನಮ್ಮ ಆತ್ಮ ಸ್ಥಾಯಿ ಬೆಳೆದಂತೆಲ್ಲಾ ಕೆಳಗಿನ ಸ್ಥಾಯಿಯನ್ನು ಬಿಡಬೇಕು. ಹಸುಗೂಸು ನಡೆಯುವುದು ಬಂದಾಗ ಅಂಬೆಗಾಲಿಡುವುದು ಬಿಟ್ಟು ಮೇಲೆದ್ದು ನಿಂತು ನಡೆಯುತ್ತಾನೆ. ಅಷ್ಟೇ ಹೊರತು ಅಂಬೆಗಾಲು ಇಡುವುದಿಲ್ಲ. ಹಾಗೆ 15 ವರ್ಷ ವಯಸ್ಸಾದರೂ ಅಂಬೆಗಾಲಿಡುವವನನ್ನು ಎಲ್ಲರೂ ಹೀಯಾಳಿಸುತ್ತಾರೆ.

***********

ಕಾಲೇಜಿಗೆ ಹೋಗುವವನು ಕಾಲೇಜು ಪುಸ್ತಕಗಳನ್ನು ಬಿಟ್ಟು, ಹೈಸ್ಕೂಲು ಪುಸ್ತಕಗಳನ್ನು ಓದುತ್ತಾ ಕೂಡುವುದಿಲ್ಲ. ಹಾಗೆ ಓದಿದರೆ ಕಾಲೇಜು ಓದು ಬರುವುದಿಲ್ಲ. ಮೇಲೆ ಹೋಗಲಾರ. ಹಾಗೆಯೇ ತಾನೇ ಭಗವಂತನೆಂದು ತಿಳಿದುಕೊಳ್ಳಬೇಕೆಂದರೆ, ಆತ್ಮಾನುಭೂತಿ ಹೊಂದ ಬೇಕೆಂದರೂ, ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದರೂ, ಎಲ್ಲಿಯೋ ದೇವರಿದ್ದಾನೆಂದು ಪೂಜಿಸುತ್ತಾ, ಭಜನೆಗಳನ್ನು ಮಾಡುತ್ತಾ, ಪ್ರಾರ್ಥನೆಗಳನ್ನು ಮಾಡುತ್ತಾ ಕುಳಿತುಕೊಂಡರೆ, ಎಷ್ಟು ನೂರು ಜನ್ಮಗಳನ್ನು ಎತ್ತಿದರೂ ಹಾಗೆಯೇ ಇರುತ್ತಾರೆ.

ಆದ್ದರಿಂದ ಖಡ್ಡಾಯವಾಗಿ ಅಂತರ್ಮುಖಿಯಾಗಬೇಕು. ಧ್ಯಾನಮಾಡಬೇಕು, ನಿರಂತರ ಧ್ಯಾನ ಸಾಧನೆ ಮಾಡಬೇಕು. ದಿವ್ಯದೃಷ್ಟಿ ಸಂಪಾದಿಸಿಕೊಳ್ಳಲೇ ಬೇಕು. ಜನ್ಮ ಪರಂಪರೆ ತಿಳಿದುಕೊಳ್ಳ ಬೇಕು. ಶರೀರ ಬಿಟ್ಟ ಮೇಲೆ ನಾವು ಯಾವ ಯಾವ ಲೋಕಗಳಿಗೆ ಹೋಗುತ್ತೇವೆಯೋ? ಈಗಲೇ ತಿಳಿದುಕೊಳ್ಳಬೇಕು. ಸೃಷ್ಟಿಯೊಂದರ ರಹಸ್ಯಗಳನ್ನು ಅಧ್ಯಯನ ಮಾಡಬೇಕು. ಸತ್ಯವನ್ನು ತಿಳಿದುಕೊಳ್ಳಬೇಕು. ಪೂರ್ಣಾತ್ಮ ಸ್ಥಿತಿಗೆ ಬೆಳೆಯಬೇಕು. ಇದು ಮಾನವ ಜನ್ಮದ ಗುರಿ/ಲಕ್ಷ್ಯ.

***********

ಕನ್ನಡಿಗೆ ಹಿಡಿದ ಧೂಳನ್ನು ತೆಗೆದರೆ ರೂಪವು ಕಾಣಿಸುತ್ತದೆ. ಮಾಸವನ್ನು ತೊಲಗಿಸಿದರೆ ಶಿಶುವು ಕಾಣಿಸುತ್ತದೆ. ಹೊಗೆ ಹೋದರೆ ಬೆಂಕಿ ಕಾಣಿಸುತ್ತದೆ. ಹಾಗೆಯೇ ಧ್ಯಾನದ ಮೂಲಕ ಮನಸ್ಸು ನಿರ್ಮಲ ಮಾಡಿಕೊಂಡರೆ ಆತ್ಮ ಸಾಕ್ಷಾತ್ಕಾರವಾಗುತ್ತದೆ. ನಾವೇ ಭಗವಂತರೆಂದು ತಿಳಿದುಕೊಳ್ಳುತ್ತೇವೆ.

ಇದಕ್ಕಾಗಿ ಜೀವ ಹಿಂಸೆ ಬಿಡಬೇಕು. ಮಾಂಸಹಾರ ಸೇವನೆ ಬಿಡಬೇಕು. ಅಹಂಕಾರ ತೊಲಗಿಸಿಕೊಳ್ಳಬೇಕು. ಆಗಲೇ ಮನಸ್ಸು ನಿರ್ಮಲವಾಗುತ್ತದೆ. ಆಗ ನಮ್ಮಲ್ಲಿರುವ ಆತ್ಮವನ್ನು ದರ್ಶಿಸಬಲ್ಲೆವು. ವಯಸ್ಸು ಹೆಚ್ಚಿದಷ್ಟು ಗುಣಗಳು ಬದಲಾಗದಿದ್ದರೆ, ನಾವು ಬಾಲ್ಯ ಸ್ಥಿತಿಯಲ್ಲಿ ಇದ್ದಂತೆಯೇ! ಹಾಗೆಯೇ ಬಾಲಕನಾದರೂ ಒಳ್ಳೆಯ ಗುಣಗಳನ್ನು ಹೊಂದಿದ್ದಾನೆ. ವೃದ್ಧನೇ "ಆದ್ದರಿಂದ ವಯೋವೃದ್ದರಾಗಬಾರದು, ಜ್ಞಾನವೃದ್ದರಾಗಬೇಕು." ಎನ್ನುತ್ತಾರೆ.

ವಯಸ್ಸಾದರೂ ಏನೂ ತಿಳಿಯದವನು ವರ್ತಿಸಿದಂತೆ ವರ್ತಿಸಿದರೆ ಅಜ್ಞಾನಿ ಎನುತ್ತಾರೆ. ಬುದ್ಧನ ಮಾತುಗಳಲ್ಲಿ ಹೇಳಬೇಕೆಂದರೆ ಬಾಲಕನು/ಬಾಲನು ಎಂದು ಹೇಳುತ್ತಾರೆ. ಆದ್ದರಿಂದ ಎಷ್ಟು ವಯಸ್ಸು ಹೆಚ್ಚಾದರೂ ಧ್ಯಾನ ಮಾಡದಂತೆ ಪೂಜೆಗಳು, ಭಜನೆಗಳು, ಪ್ರಾರ್ಥನೆಗಳು, ಪಾರಾಯಣಗಳು ಮಾಡುತ್ತಾ ಕುಳಿತುಕೊಂಡರೆ ಬಾಲ್ಯಸ್ಥಿಯಲಲಿದ್ದಂತೆಯೇ. ಪ್ರಾಥಮಕ ಪಾಠಶಾಲೆಯ ಓದಿನಲ್ಲಿಯೇ, ಅತನ ಜೀವನವೆಲ್ಲಾ ಇದ್ದಂತೆಯೇ, ಓಡುವ ಮಗು ಅಂಬೆಗಾಲಿಡುತ್ತಾ ಇದ್ದರೆ ಹೇಗಿರುತ್ತದೆಯೋ ಹಾಗೆ ಇದ್ದಂತೆ.

***********

ಮೋಕ್ಷವನ್ನು ಹೊಂದಲು ಆರು ಮೆಟ್ಟಿಲು ಹತ್ತಬೇಕೆಂದಾಗ ಮೊದಲು ನಾವು ಒಂದು ಕಾಲನ್ನು ಮೊದಲ ಮೆಟ್ಟಿಲ ಮೇಲೆ ಇಡುತ್ತೇವೆ. ನಂತರ 2ನೇ ಕಾಲು 2ನೇ ಮೆಟ್ಟಿಲ ಮೇಲೆ ಇಡುತ್ತೇವೆ. ಹಾಗೆ ಮಾಡದೇ ಮೊದಲ ಮೆಟ್ಟಿಲ ಮೇಲೆ ಕಾಲು ಹಾಗೆಯೇ ಇಟ್ಟರೆ ಜೀವನ ಪರ್ಯಂತ ಮೊದಲ ಮೆಟ್ಟಿಲ ಮೇಲೆಯೇ ಇದ್ದುಬಿಡುತ್ತೇವೆ. ಮೋಕ್ಷವನ್ನು ಹೊಂದುವುದಿಲ್ಲ. ಮುಂದಿನ ಪುಟ ಓದಬೇಕೆಂದರೆ ಹಿಂದಿನ ಪುಟವನ್ನು ತಿರುವಿಹಾಕಬೇಕಲ್ಲ? ವಿಜಯವಾಡದಿಂದ ಹೈದರಾಬಾದ್‌ಗೆ ಹೋಗಬೇಕೆಂದರೆ ವಿಜಯವಡವನ್ನು ಬಿಡಬೇಕಲ್ಲವೇ.

ಆದ್ದರಿಂದ ಇಲ್ಲಿ ಗ್ರಹಿಸ ಬೇಕಾದದ್ದು ನಾವು 3ನೇ ಮೆಟ್ಟಿಲ ಮೇಲೆ ಕಾಲು ಇಡುವುದಕ್ಕೆ, ಮೊದಲ ಮೆಟ್ಟಿಲ ಮೇಲಿನ ಕಾಲನ್ನು ತೆಗೆಯುತ್ತೇವೆ. ಆದರೆ ಪೂರ್ತಿ ಮೊದಲ ಮೆಟ್ಟಿಲಿನಿಂದ ಹಿಂದಕ್ಕೆ ಹಾಕುವುದಿಲ್ಲ. ಅಂದರೆ ಭಗವಂತನನ್ನು ಹೊಂದಲು ಪೂಜೆಗಳ ಬದಲಿಗೆ ಇನ್ನೂ ಅತ್ಯುನ್ನತ್ತವಾದ ಸಾಧನೆಯಲ್ಲಿ ಪ್ರವೇಶಿಸುತ್ತೇವೆ. ಅಷ್ಟೇ ಹೊರತು ಭಗವಂತನನ್ನು ಬಿಟ್ಟು ಬಿಡುತ್ತಿಲ್ಲ.

ಪೂಜೆಗಳು, ಭಜನೆಗಳು, ಪ್ರಾರ್ಥನೆಗಳು, ಸ್ತೋತ್ರಗಳು ಮಾಡುತ್ತಾ ನಮ್ಮ

ಕಾಲವನ್ನು, ಮಾನವ ಜನ್ಮವನ್ನು ವ್ಯರ್ಥ ಮಾಡದಂತೆ, ಅಮೂಲ್ಯವಾದ ಸಮಯವನ್ನು ಧ್ಯಾನಕ್ಕೆ ಉಪಯೋಗಿಸಬೇಕು. ಧ್ಯಾನ ಸಾಧನೆ ಮಾಡಿ ಭಗವಂತನ ಅನುಭೂತಿ ಹೊಂದಬೇಕು. ಆತ್ಮ ಸಾಕ್ಷಾತ್ಕಾರದ ಮೂಲಕ ಶಾಶ್ವತವಾಗಿ ದುಃಖವನ್ನು ನಿವಾರಿಸಿಕೊಳ್ಳಬೇಕು. ಇದನ್ನೇ ಕೊನೆಯ ಜನ್ಮ ಮಾಡಿಕೊಳ್ಳಬೇಕು. ದೇವರಾಗಿ ಬದಲಾಗಬೇಕು. ಇದೇ ಬ್ರಹ್ಮರ್ಷಿ ಪತ್ರೀಜಿಯವರು ಕೊಡುವ ಸಂದೇಶ. ಆದ್ದರಿಂದ ಬೆಳೆಯ ಬೇಕೆಂದರೆ ಕೆಳಗಿನ ಸ್ಥಾಯಿಯನ್ನು ಬಿಡಬೇಕೆಂದು ತಿಳಿದುಕೊಳ್ಳಬೇಕು.

## ಧ್ಯಾನ ಮಾಡಿ

**ಧ್ಯಾನವೆಂದರೆ?**

'ಧ್ಯಾನ'ವೆಂದರೆ 'ಪ್ರಾರ್ಥನೆ' ಯಲ್ಲ! 'ಧ್ಯಾನ' ಎಂದರೆ 'ನಾಮಸ್ಮರಣೆ' ಯಲ್ಲ!'ಧ್ಯಾನ' ಎಂದರೆ 'ಮಂತ್ರ ಜಪವಲ್ಲ'! 'ಧ್ಯಾನ' ಎಂದರೆ 'ಶ್ವಾಸದ ಮೇಲೆ ಗಮನ!' 'ಶ್ವಾಸದ ಮೇಲೆ ಗಮನವೇ' ಬುದ್ಧನು ಬೋಧಿಸಿದ 'ಆನಾಪಾನಾಸತಿ'

**"ಸತ್ಯ"**

ನಮ್ಮ ಜನ್ಮವನ್ನು ನಾವೇ ಆಯ್ಕೆ ಮಾಡಿಕೊಂಡು ಬಂದಿದ್ದೇವೆ. ತಮ್ಮನ್ನು ತಾವೇ ಉದ್ಧರಿಸಿಕೊಳ್ಳಬೇಕು. ಒಬ್ಬರನ್ನು ಮತ್ತೊಬ್ಬರು ಉದ್ಧರಿಸಲಾರರು!ಸೃಷ್ಟಿಯಲ್ಲಿ ಕೋಟ್ಯಾನುಕೋಟಿ ಲೋಕಗಳಿವೆ. ನಾವು ಈ ಲೋಕದಲ್ಲಿ ಕೇವಲ 'ಯಾತ್ರಿಕರು'.

**"ಸಾವು"**

ಮರಣಿಸುವುದು ಎಂದರೆ ಶರೀರವನ್ನು ಬಿಡುವುದು! 'ಸಾಯುವುದು'ಎಂದರೆ, ನಮ್ಮ ಸುತ್ತಲೂ ಇರುವ ಪ್ರಪಂಚವನ್ನು ಬದಲಾಯಿಸುವುದು. ಸಾಯುವುದು ಎಂದರೆ, ನೂತನ ಪ್ರಪಂಚ ಸೇರುವುದು.

**"ಕರ್ಮ ಸಿದ್ಧಾಂತ"**

ಅವರ ಕರ್ಮವನ್ನು ಅವರೇ ಅನುಭವಿಸಬೇಕು. ನಾವು ಕೆಟ್ಟದ್ದನ್ನು ಬಯಸಿದರೆ, ನಮಗೆ ಕೆಟ್ಟದ್ದೇ ಆಗುತ್ತದೆ. ನಮ್ಮ ಒಳ್ಳೆಯತನ ನಮಗೆ ಒಳ್ಳೆಯದು ಮಾಡುತ್ತದೆ.

**"ಜ್ಞಾನ"**

ಎಲ್ಲರಿಂದ ಎಲ್ಲವನ್ನೂ ಕಲಿಯಬೇಕು. ಸಮಯವನ್ನು ಕ್ಷಣವಾದರೂ ವ್ಯರ್ಥ ಮಾಡಬಾರದು. ಅಣುವಿನಷ್ಟು ಶಕ್ತಿಯನ್ನೂ ವ್ಯರ್ಥ ಮಾಡಬಾರದು. ಪ್ರಸ್ತುತ ನಾವಿರುವ ಜನ್ಮವನ್ನು ಭೂಮಿಯ ಮೇಲಿನ ಕೊನೆಯ ಜನ್ಮವನ್ನಾಗಿ ಮಾಡಿಕೊಳ್ಳಬೇಕು.

**– ಪತ್ರೀಜಿ**

# 22. ಲೋಕ ಮೆಚ್ಚುವುದನ್ನು ಭಗವಂತನು ಮೆಚ್ಚುವುದಿಲ್ಲ !

ನಾವು ಏನು ಮಾಡಿದರೂ, ಇತರರು ಏನೆಂದುಕೊಳ್ಳುತ್ತಾರೆಂದೇ ಮಾಡುತ್ತೇವೆ ಅಷ್ಟೇ ಹೊರತು ಭಗವಂತನು ಏನಂದುಕೊಳ್ಳುತ್ತಾನೆಂದು ಆಲೋಚಿಸುವುದಿಲ್ಲ ಹಾಗೆ ಲೋಕವು ಮೆಚ್ಚುವ ಕೆಲಸಗಳನ್ನೆ ಮಾಡುತ್ತೇವೆ. ಆದರೆ ಬಗವಂತನು ಮೆಚ್ಚುವ ಕೆಲಸಗಳನ್ನು ಮಾಡುವುದಿಲ್ಲ.

ಕಷ್ಟಗಳು ಬಂದಾಗ, ಸಮಸ್ಯೆಗಳು ಬಂದಾಗ, ಇಲ್ಲಿ ಯಾವುದಾದರೂ ಭಗವಂತನ ಫೋಟೋ ಆಗಲಿ, ವಿಗ್ರಹವನ್ನು ನೋಡಿದಾಗ ಮಾತ್ರವೇ, ನಮಗೆ ಭಗವಂತನು ನೆನಪಿಗೆ ಬರುತ್ತಾನೆ. ಇತರ ಸಮಯಗಳಲ್ಲಿ ಭಗವಂತನ ನೆನಪೇ ಇರುವುದಿಲ್ಲ. ಆ ಅಲ್ಪ ಸ್ವಲ್ಪ ಸಮಯದಲ್ಲಿ ಕೂಡಾ ನಮ್ಮ ಸಮಸ್ಯೆಗಳಲ್ಲಿ, ಬಾಧೆಗಳು, ಕೋರಿಕೆಗಳು ಹೇಳುವುದಕ್ಕೆ ಸರಿಹೋಗುತ್ತದೆಯಾಗಲೀ, ಭಗವಂತನ ಕುರಿತು ಆಲೋಚಿಸುವುದಿಲ್ಲ.

ಎಷ್ಟು ಹೊತ್ತು ಆತನಿಂದ ಎಲ್ಲಾ ಕೋರಿಕೊಳ್ಳುತ್ತೇವೆಯಾಗಲಿ, ಆದರೆ ನಮ್ಮ ಕಡೆಯಿಂದ ಭಗವಂತನು ಏನನ್ನು ಆಶಿಸುತ್ತಾನೆ? ನಾವು ಹೇಗೆ ಇರಬೇಕೆಂದು ಭಗವಂತನು ಕೋರಿಕೊಳ್ಳುತ್ತಾನೆ? ಎಂದು ಆಲೋಚಿಸುವುದಿಲ್ಲ ಎಷ್ಟು ಹೊತ್ತು ಭಗವಂತನು ನಮ್ಮನ್ನು ಆನಂದದಿಂದ ಇರಿಸಬೇಕೆಂದು ಆಶಿಸುತ್ತೇವೆ. ಆದರೆ ನಾವು ಏನು ಮಾಡಿದರೆ ಭಗವಂತನನ್ನು ಆನಂದದಿಂದ ಇರಿಸಲು ಸಾಧ್ಯವಾಗುತ್ತದೆ ಎಂದು ಆಲೋಚಿಸುವುದಿಲ್ಲ? ನಾವು ಹೇಗೆ ವರ್ತಿಸಿದರೆ ಭಗವಂತನಿಗೆ ಆನಂದ ಉಂಟಾಗುತ್ತದೆ ಎಂದು ಆಲೋಚಿಸುವುದಿಲ್ಲ? ನಮಗೆ ಎಂತಹ ಗುಣಗಳು ಇದ್ದರೆ ಭಗವಂತನು ಮೆಚ್ಚುತ್ತಾನೆಂದು ಆಲೋಚಿಸುವುದಿಲ್ಲ.

ನಾವು ಎಷ್ಟು ಹೊತ್ತು ಲೋಕವನ್ನು ಕುರಿತು, ಎಲ್ಲಾವನ್ನು ಮಾಡುತ್ತೇವೆಯಾಗಲೀ, ಭಗವಂತನ ಕುರಿತು ಏನೂ ಮಾಡುತ್ತಿಲ್ಲ. ಎಷ್ಟು ಹೊತ್ತು ಲೋಕ ಮೆಚ್ಚವ ರೂಪವನ್ನು ಅಲಂಕರಿಸಿಕೊಳ್ಳುತ್ತೇವೆ. ಆದರೆ ಭಗವಂತನು ಮೆಚ್ಚುವ ಒಳ್ಳೆಯ ಗುಣಗಳನ್ನು ಅಲಂಕರಿಸಿಕೊಳ್ಳುತ್ತಿಲ್ಲ. ಎಷ್ಟು ಹೊತ್ತು ಮಡಿ ಆಚಾರವೆಂದು ದೇಹ ಶುದ್ಧಿ, ಬಾಹ್ಯ

ಶುದ್ಧಿಗೆ ಪ್ರಾಮುಖ್ಯತೆ ಕೊಡುತ್ತಿದ್ದೇವೆಯಾಗಲೀ, ಅಂತರ್ ಶುದ್ಧಿಗೆ, ಭಾವ ಶುದ್ಧಿಗೆ, ಪ್ರಾಮುಖ್ಯತೆ ಕೊಡುತ್ತಿಲ್ಲ. ತಲೆಯನ್ನು ಬೋಳಿಸಿಕೊಳ್ಳುತ್ತಿದ್ದೆಯಾಗಲಿ ಯೋಚನೆಗಳನ್ನು ಬೋಳಿಸಿಕೊಳ್ಳುತ್ತಿಲ್ಲ.

ಲೋಕದ ಜನ ಆಸ್ತಿ, ಅಂತಸ್ತು ನೋಡುತ್ತಾರೆ. ಪದವಿಗಳು, ಉದ್ಯೋಗ, ಹಿರಿಮೆ, ಹೆಸರು, ಪ್ರಖ್ಯಾತಿಗಳನ್ನು ನೋಡುತ್ತಾರೆ. ಆದ್ದರಿಂದ ನಾವು ಇವುಗಳಿಗೆ ಪ್ರಾಮುಖ್ಯತೆ ಕೊಡುತ್ತಿದ್ದೇವೆ. ಅವುಗಳ ಹಿಂದೆಯೇ ಓಡುತ್ತಿದ್ದೇವೆ. ನಮ್ಮ ಸಮಯವನ್ನು, ಜೀವನವನ್ನು ಅವುಗಳಿಗಾಗಿಯೇ ವ್ಯಯಿಸುತ್ತಿದ್ದೇವೆ. ಅವುಗಳನ್ನು ಸಂಪಾದಿಸುತ್ತಾ ಲೋಕದ ಮೆಚ್ಚುಗೆಗಾಗಿ ಪ್ರಯತ್ನಿಸುತ್ತಿದ್ದೇವೆ. ಆದರೆ ಭಗವಂತನು ಮೆಚ್ಚುವ ಒಳ್ಳೆಯ ವರ್ತನೆ, ಒಳ್ಳೆಯ ಮಾತುಗಳು, ಒಳ್ಳೆಯ ಗುಣಗಳನ್ನು ಸಂಪಾದಿಸಿಕೊಳ್ಳಲು ಪ್ರಯತ್ನಿಸುತ್ತಿಲ್ಲ.

ಅಷ್ಟೇ ಅಲ್ಲ ಸೃಷ್ಟಿಯಲ್ಲಿ ಭಗವಂತನ ರೂಪಗಳಾದ ಸಮಸ್ತ ಪ್ರಾಣಿಗಳ ಬಗ್ಗೆ, ಪ್ರೇಮ, ದಯೆ, ಕರುಣೆ ತೋರಿಸುತ್ತಿಲ್ಲ. ಎಲ್ಲರನ್ನೂ ಸಮಭಾವದಿಂದ ನೋಡುತ್ತಿಲ್ಲ. ಎಲ್ಲಾ ಆತನ ರೂಪಗಳೇ ಎಂದು ಭಾವಿಸುತ್ತಿಲ್ಲ. ಇನ್ನು ಕುಟುಂಬಾಭಿಮಾನವನ್ನು, ಕುಲಾಭಿಮಾನವನ್ನು ತೋರಿಸುತ್ತಿದ್ದೇವೆ. ಮತಗಳ ದ್ವೇಷದಿಂದವರ್ತಿಸುತ್ತಿದ್ದೇವೆ. ಪ್ರದೇಶ, ದೇಶೀಯ ದುರಭಿಮಾನದಿಂದ ದ್ವೇಷಿಸುತ್ತಾ ಇದ್ದೇವೆ. ಮತ್ತೆ ಭಗವಂತನು ಹೇಗೆ ಮೆಚ್ಚಿಕೊಳ್ಳುತ್ತಾನೆ? ಭಗವಂತನು ಮಚ್ಚಿಕೊಳ್ಳಬೇಕೆಂದರೆ ಅತನು ಮೆಚ್ಚಿಕೊಳ್ಳುವ ಸರ್ವ ಸಮಾನತ್ವವನ್ನು ಆಚರಿಸಬೇಕು. ಏಕೆಂದರೆ "ಸಮತ್ವವೇ ದೈವತ್ವ" ಆದ್ದರಿಂದ, ಭಗವಂತನು ಮೆಚ್ಚುವ ಸಮತ್ವಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು.

ನಾವು ಲೋಕದ ಜನರಿಗೆ ದೊಡ್ಡವರಾಗಿ ಕಾಣುವಂತೆ ಪೂಜೆಗಳು, ಭಜನೆಗಳು, ಪ್ರಾರ್ಥನೆಗಳು, ನಮಾಜುಗಳು ಮಾಡುತ್ತೇವೆ. ಕಾಣಿಕೆಗಳನ್ನು ಸಮರ್ಪಿಸುತ್ತೇವೆ. ಆದರೆ ಭಗವಂತನು ಮೆಚ್ಚುವ ಅಹಿಂಸಾಧರ್ಮವನ್ನು ಆಚರಿಸುತ್ತಿಲ್ಲ. ಲೋಕದ ಮೆಚ್ಚುಗೆಗಾಗಿ ಜೀವಿಗಳನ್ನು ಹಿಂಸಿಸಿ ಔತಣದ ಊಟಗಳನ್ನು ಇಡುತ್ತಿದ್ದೇವೆ. ಆದರೆ ಭಗವಂತನ ರೂಪಗಳಾದ ಜೀವಿಗಳನ್ನು ಹಿಂಸಿಸುವುದರ ಮೂಲಕ ಭಗವಂತನ ಆಗ್ರಹಕ್ಕೆ ಗುರಿಯಾಗುತ್ತಿದ್ದೇವೆಂದು ತಿಳಿಯುತ್ತಿಲ್ಲ.

ಆದ್ದರಿಂದ ಲೋಕ ಮೆಚ್ಚುವುದನ್ನು ಭಗವಂತನು ಮೆಚ್ಚುವುದಿಲ್ಲವೆಂದು ತಿಳಿದು ಕೊಳ್ಳುವುದಿಲ್ಲ. ನಮ್ಮ ಜೀವನ ಧನ್ಯವಾಗಬೇಕೆಂದರೆ ಲೋಕ ಮೆಚ್ಚುವುದಲ್ಲ, ಭಗವಂತನು ಮೆಚ್ಚಬೇಕು ಆದ್ದರಿಂದ ಭಗವಂತನು ಮೆಚ್ಚುವುದನ್ನೇ ನಾವು ಮಾಡಬೇಕು. ಹಾಗೆ ಮಾಡಿದಾಗಲೇ ಭಗವಂತನ ಅನುಗ್ರಹ ನಮಗಾಗುತ್ತದೆ, ಆದ್ದರಿಂದ ಭಗವಂತನು

ಮೆಚ್ಚುವುದು ನಮ್ಮ ಗುಣಗಳನ್ನು. ನಮ್ಮ ಒಳ್ಳೆಯ ವರ್ತನೆಯನ್ನು ಮಾತ್ರವೆಂದು ನೆನಪಿಡಬೇಕು. ಮತ್ತೆ ಒಳ್ಳೆಯ ಗುಣಗಳು ಹೇಗೆ ಬರುತ್ತವೆ? ಒಳ್ಳೆಯ ಗುಣಗಳು ಬರಬೇಕಾದರೆ ಏನು ಮಾಡಬೇಕು? ಅಸಲು ಗುಣಗಳು ಯಾವುದಕ್ಕೆ ಸಂಬಂಧಿಸಿದವು. ಸಂಬಂಧಪಟ್ಟವು? ಗುಣಗಳು ಮನಷ್ಸಿಗೆ ಸಂಬಂಧಿಸಿದವು "ಒಳ್ಳೆಯ ಮನಸ್ಸು" ಇದ್ದರೆ ಒಳ್ಳೆಯ ಗುಣಗಳು ಉಂಟಾಗಿ ಒಳ್ಳೆಯ ಕೆಲಸಗಳನ್ನು ಮಾಡುತ್ತೇವೆ. "ಕೆಟ್ಟ ಮನಸ್ಸು" ಇದ್ದರೆ ಕೆಟ್ಟ ಗುಣಗಳು ಉಂಟಾಗಿ ಕೆಟ್ಟ ಕೆಲಸಗಳನ್ನು ಮಾಡುತ್ತೇವೆ.

ಕೆಟ್ಟ ಮನಸ್ಸು, ಒಳ್ಳೆಯ ಮನಸ್ಸಾಗಿ ಬದಲಾಗಬೇಕೆಂದರೆ "ಅನಾಪಾನಸತಿಧ್ಯಾನ"ವನ್ನು ಮಾಡಬೇಕು. ಧ್ಯಾನ ಮಾಡುವುದರಿಂದ ಮನಸ್ಸನ್ನು ಶುದ್ಧಿ ಮಾಡಿಕೊಳ್ಳಬಹುದು. ಒಳ್ಳೆಯ ಮನಸ್ಸಾಗಿ ಬದಲಾಯಿಸಿಕೊಳ್ಳಬಹುದು. ಒಳ್ಳೆಯ ಮನಸ್ಸು ಇದ್ದರೆ ಭಗವಂತನು ಮೆಚ್ಚುವ ಕೆಲಸಗಳನ್ನು ಮಾಡತ್ತೇವೆ. ಭಗವಂತನ ಅನುಗ್ರಹ ಹೊಂದುತ್ತೇವೆ. ಧನ್ಯರಾಗುತ್ತೇವೆ. ಆದ್ದರಿಂದ ಧ್ಯಾನವನ್ನು ಮಾಡೋಣ.

# 23. ಪೂಜೆಗಿಂತ ಗುಣ ಮುಖ್ಯ!

ಒಬ್ಬ ವ್ಯಕ್ತಿ ಪ್ರತಿದಿನ ಭಗವಂತನ ಪಟಕ್ಕೆ ಶ್ರದ್ಧೆಯಿಂದ ಪೂಜೆಯನ್ನುಮಾಡುತ್ತಾನೆ. ಆದರೆ ಭಗವಂತನು ಮೆಚ್ಚುವ ಕೆಲಸಗಳನ್ನು ಮಾಡುವುದಿಲ್ಲ. ಅಂದರೆ ಅಸತ್ಯವನ್ನು ನುಡಿಯುತ್ತಾನೆ. ಎಲ್ಲರನ್ನು ಹಿಂಸಿಸುತ್ತಾನೆ. ಜೀವಹಿಂಸೆ ಮಾಡುತ್ತಾನೆ. ಮಾಂಸ ಭಕ್ಷಣೆ ಮಾಡುತ್ತಾನೆ. ಸ್ವಾರ್ಥದಿಂದ ಎಲ್ಲರನ್ನೂ ಮೋಸಗೊಳಿಸುತ್ತಾನೆ. ಹೀಗೆ ಭಗವಂತನಿಗೆ ಒಪ್ಪದ ಕೆಲಸಗಳನ್ನು ಮಾಡುತ್ತಿರುತ್ತಾನೆ.

ಇನ್ನೊಬ್ಬ ವ್ಯಕ್ತಿ ಭಗವಂತನ ಪಟಕ್ಕೆ ಪೂಜೆ ಮಾಡುವುದಿಲ್ಲ. ಆದರೆ ಭಗವಂತನು ಮೆಚ್ಚುವ ಕೆಲಸಗಳು ಅಂದರೆ ಎಲ್ಲರನ್ನು ಪ್ರೀತಿಸುತ್ತಾನೆ. ಸತ್ಯವನ್ನೇ ನುಡಿಯುತ್ತಾನೆ. ಧರ್ಮವನ್ನು ಆಚರಿಸುತ್ತಾನೆ, ಜೀವ ಹಿಂಸೆ ಮಾಡುವುದಿಲ್ಲ. ಹೀಗೆ ಎಲ್ಲಾ ಭಗವಂತನು ಮೆಚ್ಚುವ ಕೆಲಸಗಳನ್ನೇ ಮಾಡತ್ತಾನೆ.

ಇವರಿಬ್ಬರಲ್ಲಿ ಭಗವಂತನು ಯಾರನ್ನು ಅನುಗ್ರಹಿಸುತ್ತಾನೆ? ಸ್ವಲ್ಪ ಅಲೋಚಿಸಿದರೆ ಎರಡನೆಯ ವ್ಯಕ್ತಿಯನ್ನೇ, ಅಂದರೆ ಭಗವಂತನು ಮೆಚ್ಚುವಂತೆ ಒಳ್ಳೆಯ ಕೆಲಸಗಳನ್ನು ಮಾಡುವ ವ್ಯಕ್ತಿಯನ್ನೇ, ಅಂದರೆ ಒಳ್ಳೆಯ ಗುಣಗಳು ಉಳ್ಳ ವ್ಯಕ್ತಿಯನ್ನೇ. ಆತನು ಅನುಗ್ರಹಿಸುತ್ತಾನೆಂದು ಹೇಳುತ್ತೇವೆ. ಆದರೆ ಭಗವಂತನು ಪೂಜೆಗಿಂತಿ, ಗುಣಗಳಿಗೆ ಪ್ರಾಮುಖ್ಯತೆ ಕೊಡುತ್ತಾನೆಂದು ತಿಳಿಯುತ್ತದೆ. ಆದರೆ ನಾವು ಪೂಜೆಗೆ ಪ್ರಾಮುಖ್ಯತೆ ಕೊಡುತ್ತೇವೆ. ಭಗವಂತನು ಮೆಚ್ಚುವ ಗುಣಗಳಿಗೆ ಪ್ರಾಮುಖ್ಯತೆ ಕೊಡುತ್ತಿಲ್ಲ. ಒಳ್ಳೆಯ ಕೆಲಸಗಳನ್ನು ಮಾಡುತ್ತಿಲ್ಲ.

ನಾವು ಪೂಜೆ ಮಾಡುತ್ತಾ ಭಗವಂತನಿಂದ (+) ಅಂಕಗಳನ್ನು ಸಂಪಾದಿಸುತ್ತಿದ್ದೇವೆಂದು ಅಂದುಕೊಳ್ಳುತ್ತೇವೆ. ಆದರೆ ಪೂಜೆ ಮಾಡಿದ್ದಕ್ಕೆ ನಮಗೆ (–) ಅಂಕಗಳು ಬರುತ್ತಿವೆಯೋ, ಇಲ್ಲವೋ ತಿಳಿಯದಾಗಲಿ, ಕೆಟ್ಟ ಕೆಲಸಗಳು ಮಾಡಿದ್ದಕ್ಕೆ ಎಲ್ಲಾ (–) ಅಂಕಗಳು ಮಾತ್ರ ಬರುತ್ತವೆ. ಹಾಗೆಯೇ ಭಗವಂತನ ಪೂಜೆ

ಮಾಡದಿದ್ದರೂ ನಮಗೆ (–) ಅಂಕಗಳು ಬರುವುದಿಲ್ಲ. ಮೇಲಾಗಿ ಭಗವಂತನು ಮೆಚ್ಚುವ ಕೆಲಸಗಳು ಮಾಡುವುದರಿಂದ ಖಂಡಿತವಾಗಿಯೂ (+) ಅಂಕಗಳು ಬರುತ್ತವೆ.

ನಾವು ಎಷ್ಟು ಪೂಜೆಗಳನ್ನು ಮಾಡಿದರೂ, ಪ್ರಾರ್ಥನೆಗಳನ್ನು, ಭಜನೆಗಳನ್ನೂ, ನಮಾಜುಗಳನ್ನು ಮಾಡಿದರೂ, ಕಷ್ಟಗಳು, ಭಾದೆಗಳು ತಿರುತ್ತಿಲ್ಲ. ಸಮಸ್ಯೆಗಳಿಂದ ಬಳಲುತ್ತಾ, ರೋಗಗಳಿಂದ ಬಾಧೆ ಪಡುತ್ತಿದ್ದೇವೆ. ಕಾರಣ ಪೂಜೆಗಳು ಮಾಡುತ್ತೇವೆ, ಆಮೇಲೆ ಎಲ್ಲಾ ಮಾಮೂಲೆ, ನಮ್ಮ ಇಷ್ಟ ಬಂದಂತೆ ವರ್ತಿಸುತ್ತಿದ್ದೇವೆ. ಅಸೂಯೆ, ದ್ವೇಷಗಳಿಂದ ಎಲ್ಲರಿಗಿಂತಲೂ, ಎಲ್ಲದರಲ್ಲೂ, ಉನ್ನತವಾಗಿ ಇರಬೇಕೆಂಬ ಸ್ವಾರ್ಥದಿಂದ ನಾನು, ನನ್ನ ಕುಟುಂಬ ಚೆನ್ನಾಗಿದ್ದರೆ ಸಾಕು ಎಂದು ಎಲ್ಲರನ್ನು ಅನೇಕ ರೀತಿಯಾಗಿ ಮೋಸಗೊಳಿಸುತ್ತಾ, ಬಾಧಿಸುತ್ತಾ, ಅವಮಾನಿಸುತ್ತಾ, ಮಾಡಬಾರದ ಕೆಲಸಗಳನ್ನು ಮಾಡುತ್ತೇವೆ.

ಇನ್ನು ಕಾಣಿಸಿದ್ದೆಲ್ಲವೂ ಶಾಶ್ವತವೆಂದುಕೊಂಡು, ನೋಡಿದೆಲ್ಲಾ ನಮ್ಮ ಸ್ವಂತದ್ದು ಆಗಬೇಕೆಂಬ ಸ್ವಾರ್ಥದ ಆಲೋಚನೆಯಿಂದ, ಲೋಭದಿಂದ ವ್ಯವಹರಿಸುತ್ತಿದ್ದೇವೆ. ಇಂತಹ ಕೆಲಸಗಳನ್ನು ಮಾಡುತ್ತಾ ಭಗವಂತನ ಕೆಲಸ ಮಾಡುತ್ತಿದ್ದೇವಲ್ಲಾ, ನಮಗೇನು ಪರವಾಗಿಲ್ಲ ಬಿಡು ಎಂದು ಭಾವಿಸುತ್ತಿದ್ದೇವೆ.

ಇನ್ನು ಪೂಜೆಗಳು, ಪ್ರಾರ್ಥನೆಗಳು, ನಮಾಜು ಮಾಡಿದರೆ ಸಾಕು, ಭಗವಂತನು ಎಲ್ಲಾ ಕ್ಷಮಿಸುತ್ತಾನೆಂದು ಭಾವಿಸುತ್ತೇವೆ. ಪೂಜೆಗೆ ಪ್ರಾಮೂಕ್ಯತೆ ಕೊಡುತ್ತಿದ್ದೇವೆ. ಆದರೆ ಭಗವಂತನು ಯಾವುದಕ್ಕೆ ಪ್ರಾಮುಖ್ಯತೆ ಕೊಡುತ್ತಾನೋ ತಿಳಿದುಕೊಳ್ಳದೆ ಹೋಗುತ್ತಿದ್ದೇವೆ.

ಒಬ್ಬ ವ್ಯಕ್ತಿ ಪೂಜೆ ಮಾಡುತ್ತಿರುತ್ತಾನೆ. ಸ್ವಲ್ಪ ಕುಡಿಯಲು ನೀರು ಕೊಡಿ ಎಂದು ಕೇಳುತ್ತಾನೆ. ಆಗ ಆ ವ್ಯಕ್ತಿ ನಾನು ಪೂಜೆಯನ್ನು ಮಾಡತ್ತಿದ್ದೇನೆ, ಮುಂದೆ ಹೋಗು ಎನ್ನುತ್ತಾನೆ. ಇಲ್ಲಿ ನಾವು ಸ್ವಲ್ಪ ಆಲೋಚಿಸಿದರೆ ಸಾಕು ನಾವು ಮಾಡುವ ಪೂಜೆಗಿಂತಲೂ ಭಗವತ್ ಸ್ವರೂಪನಾದ ಅಂದರೆ ಆತ್ಮ ಸ್ವರೂಪನಾದ ಆ ಜೀವನಿಗೆ ಕುಡಿಯಲು ನೀರು ಕೊಟ್ಟು ದಾಹವನ್ನು ತೀರಿಸಿದ್ದಾರೆ ಭಗವಂತನು ಮೆಚ್ಚುತ್ತಾನೆ ಎಂದು, ಅನುಗ್ರಹಿಸುತ್ತಾನೆ ಎಂದು ಭಾವಿಸಿಕೊಳ್ಳದೆ ಹೋಗುತ್ತಿದ್ದೇವೆ. ಪೂಜೆ ಮಾಡುತ್ತಿದ್ದೇನಲ್ಲಾ ಎಂದು ಸಂತೃಪ್ತಿ ಹೊಂದುತ್ತಾನೆ.

ನೆರೆಹೊರೆಯವರನ್ನು ಪ್ರೇಮಿಸಬೇಕು. ಏಕೆಂದರೆ ಎಲ್ಲಾ ಭಗವತ್ ಸ್ವರೂಪರೇ ಆದ್ದರಿಂದ. ಆದರೆ ನಾವು ನಮ್ಮ ಹೆಂಡತಿ, ಮಕ್ಕಳನ್ನು ಮಾತ್ರವೇ ಪ್ರೀತಿಸುತ್ತೇವೆ, ನಮ್ಮ

ಮಗು ಅತ್ತರೆ ಎತ್ತಿಕೊಳ್ಳುತ್ತೇವೆ. ಪಕ್ಕದ ಮನೆಯ ಮಗು ಅತ್ತರೂ ಹಿಡಿಸಿಕೊಳ್ಳುವುದಿಲ್ಲ. ಇದು ಭಗವಂತನ ದೃಷ್ಟಿಯಲ್ಲಿ ಪ್ರೇಮವಲ್ಲ.

ನಮ್ಮ ಮನೆಯಲ್ಲಿ ಯಾರಾದರೂ ಸತ್ತರೆ ತಿಂಗಳುಗಟ್ಟಲೆ ದುಃಖ ಪಡುತ್ತೇವೆ. ಆದರೆ ಒಂದು ರೈಲು ದುರಂತದಲ್ಲಿ ನೂರಾರು ಮಂದಿ ಸತ್ತರೆಂದು ತಿಳಿದರೂ ದುಃಖ ಬರುವುದಿಲ್ಲ.

ಒಬ್ಬಾತನು ನೆರೆಹೊರೆಯವರ ಸೇವೆ ಕುರಿತು ಗಂಟೆಗಟ್ಟಲೆ ಉಪನ್ಯಾಸವನ್ನು ಕೊಟ್ಟು, ಉಪನ್ಯಾಸ ಆದ ನಂತರ ಹೋಗುವಾಗ ನಡೆಯುತ್ತಿರುವ ದಾರಿಯಲ್ಲಿ ಕಲ್ಲು ಕಾಣಿಸುತ್ತದೆ. ಆದರೂ ಹಿಡಿಸಿಕೊಳ್ಳುವುದಿಲ್ಲ. ಇನ್ನೊಬ್ಬ ವ್ಯಕ್ತಿ ಉಪನ್ಯಾಸ ಕೊಡದಿದ್ದರೂ ಆ ಕಲ್ಲು ನಡೆಯುವವರಿಗೆ ಚುಚ್ಚಿಕೊಳ್ಳುತ್ತದೆಂದು ತೆಗೆದು ಪಕ್ಕಕ್ಕೆ ಹಾಕುತ್ತಾನೆ. ಇಲ್ಲಿ ಸೇವೆ ಕುರಿತು ಉಪನ್ಯಾಸ ಹೇಳಿದವರಿಗಿಂತ ಕಲ್ಲು ತೆಗೆದು ಕಾಕಿದವನನ್ನೇ ಭಗವಂತನು ಅನುಗ್ರಹಿಸುತ್ತಾನೆಂದುಖಚಿತವಾಗಿ ಹೇಳಬಹುದು.

ಹೀಗೆ ಹೇಳುತ್ತಾ ಹೋದರೆ ಎಷ್ಟೋ ಇರುತ್ತವೆ. ಆದ್ದರಿಂದ ಭಗವಂತನು ಪೂಜೆಗಳಿಗಿಂತ, ಪ್ರಾರ್ಥನೆಗಳಿಗಿಂತ, ಭಜನೆಗಳಿಗಿಂತ, ನಮಾಜುಗಳಿಗಿಂತಲೂ, ಗುಣಗಳಿಗೆ ಪ್ರಾಧಾನ್ಯತೆ ಕೊಡುತ್ತಾನೆಂದು ನೆನಪಿಟ್ಟುಕೊಳ್ಳಬೇಕು.

ಮತ್ತೆ ಭಗವಂತನು ಮೆಚ್ಚುವ ಗುಣಗಳನ್ನು ಹೊಂದಿರಬೇಕು ಅಂದರೆ ಧ್ಯಾನವನ್ನು ಮಾಡಬೇಕು. ಧ್ಯಾನ ಮಾಡುವುದರಿಂದ ಮನಸ್ಸು ಶುದ್ಧತ್ವಕ್ಕೆ ಬರುತ್ತದೆ. ಒಳ್ಳೆಯ ಗುಣಗಳಿಂದ ಒಳ್ಳೆಯ ಕೆಲಸಗಳನ್ನು ಮಾಡುತ್ತೇವೆ. ಭಗವಂತನ ಅನುಗ್ರಹವನ್ನು ಹೊಂದುತ್ತೇವೆ.

# 24. ರೂಪವನ್ನಲ್ಲ, ಗುಣವನ್ನು ಸರಿಪಡಿಸಿಕೊಳ್ಳಬೇಕು!

ಹೊರಗಡೆ ಹೋಗುವಾಗ ಅಂದರೆ ಸಿನಿಮಾಗಾಗಲಿ, ಸಮಾರಂಭಕ್ಕಾಗಲಿ, ಪಾರ್ಟಿಗಾಗಲಿ ಹೋಗುವಾಗ ಯಾರಾಗಲಿ ರೂಪವನ್ನು ಕನ್ನಡಿಯಲ್ಲಿ ನೋಡಿಕೊಂಡು ಸರಿ ಮಾಡಿಕೊಳ್ಳುತ್ತಾರೆ. ಕಾರಣ ಇರುವುದರಲ್ಲಿಯೇ ಇತರರಿಗೆ ಚೆನ್ನಾಗಿ, ಅಂದವಾಗಿ ಕಾಣಿಸಬೇಕೆಂದು, ತಮ್ಮನ್ನು ಇತರರು ಕಡಿಮೆಯಾಗಿ ಬಾವಿಸಬಾರದೆಂದು.

ಎಷ್ಟು ಹೊತ್ತು ಇಷ್ಟ ಮಾತ್ರವೇ ಆಲೋಚಿಸುತ್ತೇವೆ. ಆದರೆ ಸರಿ ಮಾಡಿಕೊಳ್ಳಬೇಕಾಗಿರುವುದು ರೂಪವನ್ನಲ್ಲ ಗುಣಗಳು. ಪ್ರತಿ ದಿನ ರೂಪವನ್ನು ಹೇಗೆ ಸರಿಮಾಡಿಕೊಳ್ಳುತ್ತೇವೆಯೋ ಗುಣಗಳನ್ನು ಕೂಡ  ಹಾಗೆಯೇ ಸರಿಮಾಡಿಕೊಳ್ಳಬೇಕು.

ರೂಪವನ್ನು ಇತರರು ಮೆಚ್ಚಿಕೊಳ್ಳುತ್ತಾರೆ. ಆದರೆ ಗುಣಗಳನ್ನು ಭಗವಂತನು ಮೆಚ್ಚಿಕೊಳ್ಳುತ್ತಾನೆ. ಇತರರು ಮೆಚ್ಚಿಕೊಳ್ಳುವುದರಿಂದ ಬರುವ ಪ್ರಯೋಜನ ಏನೂ ಇಲ್ಲ. ಆದರೆ ಭಗವಂತನು ಮೆಚ್ಚಿಕೊಳ್ಳುವ ಗುಣಗಳನ್ನು ಹೊಂದಿದ್ದರೆ ಜೀವನವೇ ಧನ್ಯವಾಗುತ್ತದೆ. ಆದ್ದರಿಂದ ಯಾವ ಕೆಲಸವನ್ನಾಗಲೀ, "ಇತರರು ಏನೆಂದುಕೊಳ್ಳುತ್ತಾರೋ ಎಂದು ಅಲ್ಲ, ಭಗವಂತನು ಏನೆಂದುಕೊಳ್ಳುತ್ತಾನೋ ಎಂದು ಮಾಡಬೇಕು."

ನಿಜ ಜೀವನದಲ್ಲಿ ತಿಳುವಳಿಕೆಯಿಲ್ಲದೆ  ನಾವು  ರೂಪಕ್ಕೆ ಪ್ರಾಮೂಕ್ಯತೆ ಕೊಡುತ್ತಿದ್ದೇವೆ. ಆದರೆ ಗುಣಗಳಿಗೆ ಪ್ರಾಮೂಕ್ಯತೆ ಕೊಡುತ್ತಿಲ್ಲ. ರೂಪವನ್ನು ನೋಡಿಕೊಳ್ಳಲು ಕನ್ನಡಿ ಇದೆ. ಅದರಲ್ಲಿ ನಮ್ಮ ಲೋಪದೀಷಗಳು ಕಾಣಿಸುತ್ತವೆ. ಆದರೆ ಗುಣಗಳನ್ನು ನೋಡಿಕೊಳ್ಳುವುದಕ್ಕೆ, ಕನ್ನಡಿ, ದರ್ಪಣಗಳು ಇಲ್ಲವಲ್ಲ? ಆದರೆ ಅವುಗಳನ್ನು ಹೇಗೆ ನೋಡಿಕೊಳ್ಳಬೇಕು? ಹೇಗೆ ಸರಿಮಾಡಿಕೊಳ್ಳುತ್ತೇವೆ? ಎಂದು ಅನ್ನಿಸಬಹುದು. ಆದರೆ ನಮ್ಮ ಗುಣಗಳು ಪ್ರತಿಬಿಂಬಿಸುವ ದರ್ಪಣಗಳು ಕೂಡ ಇವೆ.

ಅವು ಯಾವುವೆಂದರೆ ನಮ್ಮ ಮನೆಯಲ್ಲಿ ಅಲಂಕರಿಸಿಕೊಳ್ಳುವ, ಮಹಾತ್ಮರ, ಯೋಗಿಗಳ, ದೇವರುಗಳ ಫೋಟೋಗಳು. ಏಕೆಂದರೆ ಅವರಫೋಟೊಗಳನ್ನು

ನೋಡಿದ ತಕ್ಷಣ, ಅವರ ಜೀವನದಲ್ಲಿ ಅವರು ಅನುಸರಿಸಿದ ಮಾರ್ಗಗಳು, ಅವರ ಬೋಧನೆಗಳು, ಅವರ ಮಾತುಗಳು, ಅವರ ಕೆಲಸಗಳು, ಅವರ ಗುಣಗಳು, ಇವನ್ನು ನೆನಪಿಗೆ ತಂದುಕೊಳ್ಳಬೇಕು. ಅವುಗಳನ್ನು ನೋಡಿ ನಮ್ಮ ಗುಣಗಳನ್ನು ಸರಿಮಾಡಿಕೊಳ್ಳಬೇಕು. ಹಾಗೆ ಅವು ನಮ್ಮ ಗುಣಗಳನ್ನು ಪ್ರತಿಬಿಂಬಿಸುವ ದರ್ಪಣಗಳಂತೆ ಉಪಯೋಗವಾಗುತ್ತವೆ.

ಅವರ ಫೋಟೋಗಳನ್ನು ನೋಡಿದಾಗಲೆಲ್ಲಾ ನಮ್ಮ ಗುಣಗಳಲ್ಲಿರುವ ಲೋಪ ದೋಷಗಳನ್ನು ತಿಳಿದುಕೊಳ್ಳಬೇಕು. ಅವುಗಳನ್ನು ಸರಿಪಡಿಸಿಕೊಂಡು ವರ್ತನೆಯನ್ನು ಬದಲಾಯಿಸಿಕೊಳ್ಳಬೇಕು. ನಮ್ಮ ಮನೆಯಲ್ಲಿ, ನಮ್ಮ ಕೋಣೆಯಲ್ಲಿ ಅವರ ಫೋಟೊಗಳನ್ನು ಇಟ್ಟುಕೊಳ್ಳುವುದಕ್ಕೆ ಕಾರಣ ಇದೆ. ಹಾಗೆ ಅವರ ಬೋಧನೆಗಳು ಅಂದರೆ ಸತ್ಯವನ್ನು ನುಡಿಯುವುದು, ಧರ್ಮವನ್ನು ಆಚರಿಸುವುದು, ಎಲ್ಲಾ ಪ್ರಾಣಿಗಳ ಮೇಲೆ ಪ್ರೇಮ, ಕರುಣೆ ತೋರಿಸುವುದು, ಇಂತಹವುಗಳನ್ನು ಎಷ್ಟೋ ನಾವು ತಿಳಿದುಕೊಳ್ಳಬಹುದು. ಅಷ್ಟೇ ಅಲ್ಲ ನಿರಾಡಂಬರದಿಂದ ಜೀವಿಸುವುದು, ಎಲ್ಲರಿಗೆ ಉಪಕಾರ ಮಾಡುವುದು, ಶಾಂತತೆ, ದಯೆ ಇಟ್ಟುಕೊಳ್ಳುವುದು, ಇನ್ನೂ ಎಷ್ಟೋ ಆದರ್ಶಪ್ರಾಯವಾದ ಗುಣಗಳನ್ನು ಅವರಿಂದ ಕಲಿಯಬಹುದು. ಹಾಗೆ ಅವರ ಫೋಟೊಗಳನ್ನು ನೋಡಿದೊಡನೆ ಅವರ ಗುಣಗಳಿಗೆ, ನಮ್ಮ ಗುಣಗಳಿಗೆ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳುವುದರಿಂದ ಫೋಟೊಗಳು ನಮಗೆ ದರ್ಪಣಗಳಾಗಿ ಉಪಯೋಗಕ್ಕೆ ಬರುತ್ತವೆ.

ಉದಾಹರಣೆಗೆ ಗೌತಮ ಬುದ್ಧನ ಫೋಟೊ ನೋಡಿದೊಡನೆ ಆತನ ಜೀವನದಲ್ಲಿ ನೆನಪಿಗೆ ಬರುವ ಕೆಲವು ಸಂಘಟನೆಗಳನ್ನು ನೋಡೋಣ.

ಅತನ ಎದುರು ಮಧುರವಾದ ಆಹಾರ ತಿನಿಸುಗಳನ್ನು ಇಟ್ಟರೆ, ತಕ್ಷಣವೇ ಆತನು ತನ್ನ ಹೊಟ್ಟೆಯ ಕಡೆ ನೋಡುತ್ತಿದ್ದನಂತೆ. ಆತನಿಗೆ ಹಸಿವು ಅನ್ನಿಸಿದರೆ ತೆಗೆದುಕೊಳ್ಳುತ್ತಿದ್ದನಂತೆ ಇಲ್ಲದಿದ್ದರೆ ಮುಟ್ಟುತ್ತಿರಲಿಲ್ಲವಂತೆ.

ಅದೇ ನಾವಾದರೆ ಹೊಟ್ಟೆಯ ಕಡೆ ನೋಡುವುದಿಲ್ಲ. ಪದಾರ್ಥಗಳ ಕಡೆಗೆ ನೋಡುತ್ತೇವೆ. ಹಸಿವು ಇಲ್ಲದಿದ್ದರೂ ಪದಾರ್ಥಗಳು ರುಚಿಯಾಗಿವೆ ಎಂದರೆ ಹೊಟ್ಟೆ ತುಂಬಾ ತುಂಬಿಕೊಂಡು ಬಿಡುತ್ತೇವೆ. ಬುದ್ಧನ ಫೋಟೋ ನೋಡಿದೊಡನೆ ನಾವು ತಿಳಿದುಕೊಳ್ಳಬೇಕಾದದ್ದು, ಆತನು ಆಹಾರಕ್ಕೆ, ರುಚಿಗೆ ಪ್ರಾಮುಖ್ಯತೆ ಕೊಡುವುದಿಲ್ಲ. ಹಸಿವಿಗೆ, ಧ್ಯಾನಕ್ಕೆ ಸಹಕರಿಸುವ ಆಹಾರಕ್ಕೆ ಪ್ರಾಮುಖ್ಯತೆ ಕೊಡುತ್ತಾರೆಂದು ತಿಳಿಯುತ್ತದೆ.

ಒಂದು ಸಾರಿ ಗೌತಮ ಬುದ್ದನು ಭಿಕ್ಷಾಟನೆಗೆ ಹೋದಾಗ ಒಂದು ಮನೆ

ಯಜಮಾನ ಆತನನ್ನು ನಿನಗೆ ಕೆಲಸವಿಲ್ಲವೇ? ಪ್ರತಿದಿನ ಬರುತ್ತಿದ್ದೀಯಾ ಎಂದು ನಾನಾ ವಿಧವಾಗಿ ಬಯ್ಯಲು ತೊಡಗಿದನು. ಆಗ ಬುದ್ಧನು ಆ ಯಜಮಾನನನ್ನು ಹಾಗೆ ಬಯ್ಯಲು ಬಿಟ್ಟು, ಎಲ್ಲಾ ಆದ ನಂತರ ಆ ಯಜಮಾನನಿಗೆ ಈ ವಿಧವಾಗಿ ಕೇಳಿದನು. ತಮ್ಮ ನೀನು ಹಾಕುವ ಭಿಕ್ಷೆ ನಾನು ಸ್ವೀಕರಿಸದೆ ಇದ್ದರೆ ಅದು ಯಾರಿಗೆ ಸೇರುತ್ತದೆ? ಎಂದು ಕೇಳಿದನು. ಆಗ ಆಮನೆಯ ಯಜಮಾನ ನೀನು ತೆಗೆದುಕೊಳ್ಳದಿದ್ದರೆ ನನಗೆ ಸೇರುತ್ತದೆ ಎಂದು ಸಮಾಧಾನ ಕೊಟ್ಟನು. ಆಗ ಬುದ್ಧನು ಹಾಗಾದರೆ ಇಲ್ಲಿಯವರೆಗೆ ನೀನು ಬೈದಿರುವ ಬೈಗಳು ನಾನು ಸ್ವೀಕರಿಸಲಿಲ್ಲ ಮತ್ತೆ ಅವು ಯಾರಿಗೆ ಸೇರುತ್ತವೆ? ಎಂದು ಕೇಳಿದನು. ಆ ಮನೆಯ ಯಜಮಾನ ಆ ಮಾತುಗಳನ್ನು ಅರ್ಥ ಮಾಡಿಕೊಂಡು ತಕ್ಷಣವೇ ಬುದ್ಧನ ಕಾಲಮೇಲೆ ಬಿದ್ದನು.

ಇದನ್ನು ನೋಡಿದರೆ, ನಮ್ಮನ್ನು ಯಾರಾದರೂ ಬೈದಾಗ ತಿರುಗಿ ಸಮಾಧಾನ ಹೇಳದಿದ್ದರೂ, ಅವುಗಳ ಕುರಿತು ಆಲೋಚಿಸದಿದ್ದರೂ ಅದು ಬೈದವರಿಗೆ ಸೇರುತ್ತದೆಂದು ನಾವು ತಿಳಿದುಕೊಳ್ಳಬೇಕು. ಹಾಗೆ ದೇವರ ಫೋಟೋಗಳನ್ನು ನೋಡಿದ ತಕ್ಷಣ ಅವರ ಜೀವನದಲ್ಲಿಯ ವಿಷಯಗಳು ಒಂದು ಸಂದೇಶದಂತೆ ನಮ್ಮ ಜೀವನವನ್ನು, ನಮ್ಮ ಗುಣಗಳನ್ನು ಸರಿಮಾಡಿಕೊಳ್ಳುವ ದರ್ಪಣದಂತೆ ಉಪಯೋಗವಾಗುತ್ತವೆ ಎಂದು ತಿಳಿದುಕೊಳ್ಳಬೇಕು.

ಹಾಗೆಯೇ ಶಿರಡಿ ಸಾಯಿ ಬಾಬಾ, ಯೋಗಿ ವೇಮನ, ರಾಮಕೃಷ್ಣ ಪರಮಹಂಸ, ರಮಣ ಮಹರ್ಷಿಯಂತಹ ಯೋಗಿಗಳ ಪೋಟೋಗಳನ್ನು ನೋಡಿದಾಗ ಅವರೆಲ್ಲ ಶರೀರಕ್ಕೆ, ಶಾರೀರಕ ಸುಖಗಳಿಗೆ, ಭೋಗ ಭಾಗ್ಯಗಳಿಗೆ, ಹೆಸರು ಕೀರ್ತಿ ಪ್ರಖ್ಯಾತಿಗಳಿಗೆ, ಪ್ರಾಮುಖ್ಯತೆ ಕೊಡಲಿಲ್ಲವೆಂದು ತಿಳಿಯುತ್ತದೆ.

ಆದರೆ ನಾವು ಅವರೆಲ್ಲ ಯಾವ ಭೋಗ ಭಾಗ್ಯಗಳಿಗೆ, ಸಿರಿ ಸಂಪತ್ತುಗಳಿಗೆ ಶರೀರ ಸೌಕರ್ಯಗಳಿಗೆ, ಹೆಸರು ಕೀರ್ತಿಗಳಿಗೆ, ಅದಿಕಾರಕ್ಕೆ ಪ್ರಾಮುಖ್ಯತೆ ಕೊಡಲಿಲ್ಲವೊ ಅವುಗಳಿಗೇ ಪ್ರಾಮುಖ್ಯತೆ ಕೊಡುತ್ತಿದ್ದೇವೆ. ಅವರು ಯಾವುದಕ್ಕೆ ಪ್ರಾಮುಖ್ಯತೆ ಕೊಟ್ಟರೂ ಅವುಗಳಿಗೆ ಅಸಲು ಪ್ರಾಮುಖ್ಯತೆಯೇ ಕೊಡಲಿಲ್ಲ. ಇವು ಅವರ ಫೋಟೊ ನೋಡಿದಾಗ ನಾವು ಗ್ರಹಿಸಬಹುದು.

ಅವರೆಲ್ಲಾ ಶಕ್ತಿವಂತರು, ಅವರು ಮಾಡಲಾಗದ್ದು ಯಾವುದೂ ಇಲ್ಲ, ಅವರಿಗೆ ತಿಳಿಯದ್ದು ಯಾವುದೂ ಇಲ್ಲವೆಂದು ಅವರನ್ನು ಆರಾಧಿಸುತ್ತಿದ್ದೇವೆ ಅಷ್ಟೇ ಹೊರತು ಅವರು ಆಚರಿಸಿ ತೋರಿಸಿದ್ದು, ಅವರು ಬೋಧಿಸಿದ್ದು, ನಾವು ಎಷ್ಟು ಮಾತ್ರವೂ ಅನುಸರಿಸುತ್ತಿಲ್ಲ. ಅವರಲ್ಲಿ ಯಾವ ಭೋಗ ಭಾಗಗಳನ್ನು, ಶಾರೀರಿಕ ಸುಖಗಳನ್ನು

ಕೆಲಸಕ್ಕೆ ಬಾರದೆಂದು ಪೂರ್ತಿಯಾಗಿ ತ್ಯಜಿಸಿದರೂ ಅವನ್ನೇ ನಮಗೆ ಕೊಡೆಂದು ಅವರನ್ನು ಪೂಜಿಸುತ್ತಾ ಬೇಡಿಕೊಳ್ಳುತ್ತಿದ್ದೇವೆ.

ಆದ್ದರಿಂದ ನಾವು "ಲೋಕವು ಮೆಚ್ಚುವ ರೂಪವನ್ನಲ್ಲ" "ಭಗವಂತನು ಮೆಚ್ಚುವ ಗುಣಗಳನ್ನು ಸರಿಪಡಿಸಿಕೊಳ್ಳಬೇಕು. ಭಗವಂತನ ಪೋಟೋ ಇಟ್ಟಿದೇವೆಂದರೆ ಅರ್ಥ ಅದೆ. ಫೋಟೊಗಳು ನಮ್ಮಲ್ಲಿರುವ ಗುಣಗಳಲ್ಲಿನ ಲೋಪಗಳನ್ನು ತೋರಿಸುವ ದರ್ಪಣಗಳೆಂದು ತಿಳಿದುಕೊಳ್ಳಬೇಕು.

ನಾವು ದೇವರುಗಳನ್ನು ಆರಾಧಿಸುತ್ತಿದ್ದೇವೆ, ಆದರೆ ಅವರು ಹೇಳಿದ್ದನ್ನು ಆಚರಿಸಲಾಗುತ್ತಿಲ್ಲ. ಅವರು ಹೇಳಿದ್ದನ್ನು ಆಚರಿಸಬೇಕಂದರೆ ಧ್ಯಾನವನ್ನು ಶ್ರದ್ದೆಯಿಂದ ಮಾಡಬೇಕು. ಹಾಗೆ ಮಾಡಿದರೆ ನಿಧಾನವಾಗಿ ನಮ್ಮ ಗುಣಗಳು ಬದಲಾಗಿ, ಒಳ್ಳೆಯ ವರ್ತನೆ ಅಭ್ಯಾಸವಾಗುತ್ತದೆ. ಒಳ್ಳೆಯ ಕೆಲಸಗಳನ್ನು ಮಾಡುವುದರಿಂದ ಭಗವಂತನ ಅನುಗ್ರಹವನ್ನುಕೂಡಾ ಹೊಂದಬಲ್ಲವರಾಗುತ್ತೇವೆ.

ದೇವರ ಫೋಟಗಳು ನಮಸ್ಕರಿಸಿಕೊಳ್ಳುವುದಕ್ಕಾಗಿ, ಕಷ್ಟ–ಕೋರಿಕೆಗಳು ಹೇಳುವುದಕ್ಕಲ್ಲ. ಅವು ನಮ್ಮ ಗುಣಗಳನ್ನು ಪ್ರತಿಬಿಂಬಿಸುವ ದರ್ಪಣಗಳೆಂದು ತಿಳಿದುಕೊಳ್ಳಬೇಕು. ಧ್ಯಾನವನ್ನು ಮಾಡಿದರೆ ಎಷ್ಟೋ ಸತ್ಯಗಳು ತಿಳಿಯುತ್ತವೆ.

# 25. ಅಂತರ್ ಶುದ್ಧಿ ಮುಖ್ಯ!

ನಾವು ಆಲಯಗಳಿಗೆ, ಚರ್ಚ್‌ಗಳಿಗೆ, ಮಸೀದಿಗಳಿಗೆ ಹೋಗುವಾಗ ಶುಭ್ರವಾಗಿ ಸ್ನಾನ ಮಾಡಿ ಒಳ್ಳೆಯ ಬಟ್ಟೆಗಳು ಧರಿಸಿ, ಅಲಂಕರಿಸಿಕೊಂಡು ಹೋಗುತ್ತಾ, ಶುಚಿ, ಶುಭ್ರತೆ ಪಾಲಿಸುತ್ತೇವೆ. ಆದರೆ ಒಂದು ವಿಷಯವನ್ನು ಮಾತ್ರ ಗ್ರಹಿಸುತ್ತಿಲ್ಲ.

ಭಗವಂತನು ಕೋರಿಕೊಳ್ಳುವುದು ಬಾಹ್ಯವಾದ ಶುಚಿ, ಶುಭ್ರತೆಯಲ್ಲ. ಆತನು ಬಯಸುವುದು ನಮ್ಮ ವರ್ತನೆಯಲ್ಲಿ ಶುಚಿ, ನಮ್ಮ ಗುಣಗಳು ಶುಭ್ರವಾಗಿ ಇರಬೇಕೆಂಬುದು. ಅಷ್ಟೇ ಹೊರತು ಗುಡಿಗೆ ಹೋಗಿ ತೆಂಗಿನಕಾಯಿ ಹೊಡೆದ ಮಾತ್ರಕ್ಕೆ ಚರ್ಚ್‌ಗೆ ಹೋಗಿ ಪ್ರಾರ್ಥಿಸಿದ ಮಾತ್ರಕ್ಕೆ, ಮಸೀದಿಗೆ ಹೋಗಿ ನಮಾಜು ಮಾಡಿದ ಮಾತ್ರಕ್ಕೆ, ಸಾಯಿಬಾಬಾ ಗುಡಿಗೆ ಹೋಗಿ ಭಜನೆ ಮಾಡಿದ ಮಾತ್ರಕ್ಕೆ ಪ್ರಯೋಜನ ಇಲ್ಲ.

ಭಗವಂತನು ಹೇಳದಿದ್ದರೂ ಶರೀರವನ್ನು ಶುಭ್ರವಾಗಿಟ್ಟುಕೊಳ್ಳುತ್ತಿದ್ದೇವೆ. ಆದರೆ ಅಂತರಾತ್ಮ ರೂಪದಲ್ಲಿ ಭಗವಂತನು ಹೇಳಿದರೂ, ನಮ್ಮ ಮಾತುಗಳಲ್ಲಿ ಕೆಲಸಗಳಲ್ಲಿ ಶುಚಿಯನ್ನು ಪಾಲಿಸಲಾಗುತ್ತಿಲ್ಲ.

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಭಗವಾನನು ನಾವು ಹೇಗೆ ಇರಬೇಕು? ಏನು ಮಾಡಬೇಕು? ಹೇಗೆ ವರ್ತಿಸಬೇಕು? ಜೀವನವೆಂದರೆ ಏನು? ಎಂದು ಬೋಧಿಸಿದ್ದಾರೆ. ಹಾಗೇ ಜೀಸಸ್ ಬೈಬಲ್‌ನಲ್ಲಿ ಎಷ್ಟೋ ವಿಷಯಗಳನ್ನು ನಮಗೆ ಆದೇಶವಾಗಿ ಕೊಟ್ಟಿದ್ದಾರೆ. ಅದೇ ರೀತಿಯಾಗಿ ಕುರ್-ಆನ್‌ನಲ್ಲಿ ನಾವು ಹೇಗೆ ವರ್ತಿಸಬೇಕೆಂದು ಹೇಳಲ್ಪಟ್ಟಿದೆ.

ಆದರೆ ನಾವು ಇವು ಏನನ್ನೂ ಹಿಡಿಸಿಕೊಳ್ಳದೆ ಅವರು ಹೇಳಿದ್ದನ್ನು ಆಚರಿಸದೆ ಶುಚಿಯಾಗಿ, ಶುಭ್ರವಾಗಿ ತಯಾರಾಗಿ, ಅವರನ್ನು ಪೂಜಿಸುತ್ತಾ, ಪ್ರಾರ್ಥಿಸುತ್ತಾ, ನಮಾಜು ಮಾಡುತ್ತಾ ಸಮಯವನ್ನು ಕಳೆಯುತ್ತಿದ್ದೇವೆ. ಅಷ್ಟೇ ಹೊರತು ಮನಸ್ಸನ್ನು ನಿರ್ಮಲ ಮಾಡಿಕೊಳ್ಳುತ್ತಿಲ್ಲ. ಗುಣಗಳನ್ನು ಬದಲಾಯಿಸಿಕೊಳ್ಳುತ್ತಿಲ್ಲ. ನಮ್ಮಲ್ಲಿರುವ ಸ್ವಾರ್ಥವನ್ನು, ರಾಕ್ಷಸತ್ವವನ್ನು, ದುರ್ಮಾರ್ಗವನ್ನು, ಕಾಠಿಣ್ಯತೆಯನ್ನು, ಲೋಭವನ್ನು,

ಅಹಂಕಾರವನ್ನು ಬಿಡುತ್ತಿಲ್ಲ. ಆದರೆ ಇವುಗಳನ್ನೆಲ್ಲಾ ಬಿಟ್ಟರೇನೇ ಭಗವಂತನಿಗೆ ಹತ್ತಿರವಾಗುತ್ತೇವೆ. ಆದ್ದರಿಂದ ಭಗವಂತನ ಬಳಿ, ನಮ್ಮಲ್ಲಿರುವ ದುರ್ಗುಣಗಳನ್ನು, ದುಷ್ಟ ಭಾವನೆಗಳನ್ನು ಬಿಟ್ಟು ಹೋಗಬೇಕು. ಚಪ್ಪಲಿಗಳನ್ನು, ಮಾಸಿದ ಬಟ್ಟೆಗಳನಲ್ಲ.

ಇದೇ ಸಂದರ್ಭದಲ್ಲಿ ಬ್ರಹ್ಮರ್ಷಿ ಪತ್ರಿಯವರೊಡನೆ ನಡೆದ ಅನುಭವವನ್ನು ತಿಳಿಯೋಣ. ಒಂದು ಗ್ರಾಮದಲ್ಲಿ ಒಬ್ಬಾತನು ಪತ್ರೀಜಿಯವರನ್ನು ನೋಡಿ, ಚಪ್ಪಲಿ ಬಿಟ್ಟು, ಆತನನ್ನು ಸಮೀಪಿಸುತ್ತಿದ್ದಾಗ, ತಕ್ಷಣವೇ ಪತ್ರೀಜಿಯವರು ಆತನನ್ನು ಚಪ್ಪಲಿಯನ್ನು ಏಕೆ ಬಿಟ್ಟೆ? ಎಂದು ಕೇಳಿದರು. ಅದಕ್ಕೆ ಆತನು ಗುರುಗಳ ಬಳಿ ಬರುವಾಗ ಚಪ್ಪಲಿಗಳನ್ನು ಬಿಡಬೇಕಲ್ಲವೇ? ಎಂದನು. ಆಗ ಪತ್ರೀಜಿಯವರು ಕೋಪಗೊಂಡು, ಗುರುಗಳ ಬಳಿ ಬರುವಾಗಬಿಟ್ಟು ಬರಬೇಕಾದ್ದು ಚಪ್ಪಲಿಗಳನ್ನಲ್ಲ, ನಿನ್ನಲ್ಲಿರುವ ದುರ್ಗುಣಗಳನ್ನು, ನಿನ್ನಲ್ಲಿರುವ ಸ್ವಾರ್ಥಗುಣಗಳನ್ನು, ನಿನ್ನಲ್ಲಿರುವ ರಾಕ್ಷಸ ಗುಣಗಳನ್ನು ಅಷ್ಟೇ ಹೊರತು, ಚಪ್ಪಲಿಗಳನ್ನು, ಮಾಸಿದ ಬಟ್ಟೆಗಳನಲ್ಲ. ಆ ಚಪ್ಪಲಿಗಳ ಏನು ಕರ್ಮ ಮಾಡಿವೆ? ಅವು ಇನ್ನು ನಿನ್ನನ್ನು ಹೊರುತ್ತಿವೆ, ನಿನಗೆ ಸೇವೆ ಮಾಡುತ್ತಿವೆ. ನಿನ್ನ ಕಾಲುಗಳನ್ನು ಕಾಪಾಡುತ್ತಿವೆ. ತಕ್ಷಣವೇ ಚಪ್ಪಲಿಗಳನ್ನು ಹಾಕಿಕೊ ಎಂದು ಅವರು ಹೇಳಿದರು. ಇದರಿಂದ ನಾವು ಸದ್ಗುರುಗಳ ಬಳಿಗಾಗಲೀ, ಭಗವಂತನ ಬಳಿಗಾಗಲೀ ಹೋಗುವಾಗ ಬಿಡಬೇಕಾದದ್ದು ನಮ್ಮಲ್ಲಿರುವ ಕೆಟ್ಟ ಗುಣಗಳನ್ನಾಗಲಿ, ಮಾಸಿದ ಬಟ್ಟೆಗಳನ್ನಾಗಲೀ ಅಲ್ಲ, ಅಂದರೆ ಭಗವಂತನು ಪ್ರಾಮುಖ್ಯತೆ ಕೊಡುವುದು ಅಂತಃಶುದ್ಧಿಯನ್ನೇ ಹೊರತು, ಬಾಹ್ಯಶುದ್ಧಿಯನ್ನಲ್ಲ. ಆತನು ಆಶಿಸುವುದು ಒಳ್ಳೆಯ ಗುಣಗಳಿಂದ ನಮ್ಮಿಂದ ಲೋಕಕ್ಕೆ ಆಗುವ ಉಪಕಾರವನ್ನೇ.

ನಿಜವಾದ ಭಕ್ತನು ಬಾಹ್ಯವಾದ ಆಡಂಭರಗಳನ್ನು ಪ್ರದರ್ಶಿಸದಿದ್ದರೂ, ಅಂತರಾತ್ಮ ರೂಪದಲ್ಲಿರುವ ಭಗವಂತನು ಕೊಟ್ಟ ಆದೇಶಗಳನ್ನು, ಧರ್ಮಗಳನ್ನು ಚಾಚೂ ತಪ್ಪದಂತೆ ಪಾಲಿಸುತ್ತಾನೆ. ಅಂತಹವನನ್ನೇ ಭಗವಂತನು ನಿಜವಾದ ಭಕ್ತನೆಂದು ಭಾವಿಸುತ್ತಾನೆ. ಅಷ್ಟೇ ಹೊರತು ಆತನ ಆದೇಶಗಳನ್ನು ಧಿಕ್ಕರಿಸಿ ಬಾಹ್ಯವಾದ ಕ್ರಿಯೆಗಳಿಂದ ಆತನ ಮೆಚ್ಚುಗೆ ಗಳಿಸಬೇಕೆಂದು ಪ್ರಯತ್ನಿಸುತ್ತಿರುವುದು ಯಾವುದು ಭಕ್ತಿ ಅಲ್ಲವೇ ಅಲ್ಲ.

"ಅಂತರ್ ಶುದ್ದಿ" ಅಂದರೆ "ಮನಃಶುದ್ದಿ" ಅದಕ್ಕೆ ಒಂದೇ ಮಾರ್ಗ ಅದೇ ಶ್ವಾಸದ ಮೇಲೆ ಗಮನ ಧ್ಯಾನದ ಮೂಲಕ ಮನಸ್ಸು ಶುದ್ಧವಾಗುತ್ತದೆ, ಪವಿತ್ರವಾಗುತ್ತದೆ. ಅದರಿಂದಾಗಿ ಒಳ್ಳೆಯ ಕಾರ್ಯಗಳನ್ನು ಮಾಡುತ್ತೇವೆ. ಅಂತರಾತ್ಮನು ಕೇಳಿಕೊಳ್ಳಬಲ್ಲವರಾಗುತ್ತೇವೆ. ಭಗವಂತನ ಮೆಚ್ಚುಗೆಗೆ ಪಾತ್ರರಾಗುತ್ತೇವೆ.

# 26.“ಭಾವವನ್ನ ಭಗವಂತನು ನೋಡುತ್ತಾನೆ!

ನಮಗೆ ಕೋಡಲ್ಪಟ್ಟಿರುವುದರಲ್ಲಿಯೆ ಸ್ವಲ್ಪ ಸಮಾಜಕ್ಕೆ ಉಪಯೋಗಿಸಬೇಕೆಂದು, ನಮ್ಮ ಶಕ್ತಾನುಸಾರ ವಿಧವಿಧಗಳಲ್ಲಿ ಇತರರಿಗೆ ಸಹಾಯ ಮಾಡುತ್ತೇವೆ. ಸೇವೆಗಳನ್ನು ಮಾಡುತ್ತೇವೆ ಹಾಗೆ ಮಾಡುತ್ತಾ ಬಹಳ ತೃಪ್ತಿಯನ್ನು ಹೊಂದುತ್ತೇವೆ ದೊಡ್ಡದಾಗಿ ಹೇಳಿಕೊಳ್ಳುತ್ತೇವೆ.

ಆದರೆ ಸೃಷ್ಟಿ ಸಿದ್ದಾಂತ ಅಂದರೆ ಭಗವಂತನ ಸಿದ್ಧಾಂತದ ಪ್ರಕಾರ ನಾವು ಏನು ಮಾಡಿದರೂ, ಮಾಡಿದ ಕೆಲಸಕ್ಕಿಂತ ಆ ಕೆಲಸ ಮಾಡಿದಕ್ಕೆ ನಮ್ಮ ಭಾವವು ಏನು ಎನ್ನುವುದಕ್ಕೆ ಪ್ರಾಮುಖ್ಯತೆ ಕೊಡಾಲಾಗುತ್ತದೆ, ಅಂದರೆ ನಾವು ಯಾವ ಉದ್ದೇಶದಿಂದ ಮಾಡಿದೆವು? ಆ ಕೆಲಸ ಮಾಡಲು ನಮ್ಮ ಬಾವವೇನು? ಎಂಬುದನ್ನೇ ನೋಡಲಾಗುತ್ತದೆ.

ಭಾವವನ್ನು ಹಿಡಿದೆ ಮಾಡಿದ ಕೆಲಸಕ್ಕೆ ಫಲಿತವಿರುತ್ತದೆ. ಆದ್ದರಿಂದ ನಾವು ಎಂತಹ ಉತ್ತಮ ಕೆಲಸಮಾಡಿದರೂ, ಎಂತಹ ಒಳ್ಳೆಯ ಕೆಲಸ ಮಾಡಿದರು ಒಳ್ಳೆಯ ಭಾವದಿಂದ ಮಾಡಬೇಕು. ಅದರಲ್ಲಿ ಯಾವುದೇ ತರಹದ ಸ್ವಾರ್ಥ ಕಲ್ಮಷವುಇರಬಾರದು ಯಾವುದೇ ರೀತಿಯಾ ಫಲವನ್ನು ಆಶಿಸಬಾರದು. ಆ ಸಹಾಯ ಪಡೆದವರರಿಂದ ಯಾವುದೇ ಕೃತಜ್ಞತಾಭಾವವನ್ನು ಆಶಿಸಬಾರದು. ಪೂರ್ತಿಯಾಗಿ ಲೋಕ ಕಲ್ಯಾಣ ಭಾವದಿಂದ ಅದು ನಮ್ಮ ಧರ್ಮವೆಂದು ಬಾವಿಸಿ ಮಾಡಬೇಕು. ನಮಗೆ ಕೊಡಲ್ಪಟ್ಟ ಅದೃಷ್ಟವೆಂದು ಬಾವಿಸಿ ಮಾಡಬೇಕು. ಆಗಲೇ ಮಾಡಿದ ಕೆಲಸದಿಂದ, ಸೇವೆಯಿಂದ ನಮಗೆ ಫಲಿತಾಂಶ ಬಂದೋದಗುತ್ತದೆ.

ಪ್ರಜೆಗಳು, ಪ್ರಾರ್ಥನೆಗಳು, ಭಜನೆಗಳು, ಸ್ತೋತ್ರಗಳು, ಪಾರಾಯಣಗಳು ವ್ರತಗಳು ಮಾಡುತ್ತಿರುತ್ತೇವೆ. ಅವುಗಳನೆಲ್ಲ ಮಾಡಲು ಕಾರಣ ಕೋರಿಕೆಗಳು, ಅಂದರೆ ಕೊರಿಕೆಗಳು ತರಬೇಕೆಂದು ಎನ್ನುವ ಭಾವದಿಂದ ಮಾಡುತ್ತಿದ್ದೇವೆ ಅಷ್ಟೆ ಹೊರೆತು ಯಾವ ಬಯಕೆ ಇಲ್ಲದೆ ಭಗಂವತನಿಗಾಗಿ ಆರಾಧಿಸುತ್ತಿಲ್ಲ ಅಂದರೆ ಕೆಲಸಗಳು ಭಗವಂತನನ್ನು

ಆರಾಧಿಸುತ್ತಿರುವಂತೆ ಕಾಣಿಸುತ್ತಿದ್ದರೆ, ಭಾವ ಪ್ರಧಾನ ಆಗಿರುವುದರಿಂದ ಭಾವವು ಕೋರಿಕೆಗಳೆ ಆಗಿರುವುದರಿಂದ ಫಲಿತಾಂಶ ಬರುವುದಿಲ್ಲ.

ಕೆಲವರು ನಾವು ಏನನ್ನು ಕೋರುವುದಿಲ್ಲ, ನಮಗೆ ಯಾವ ಕೋರಿಕೆಯು ಇಲ್ಲ. ನಾವು ನಿಷ್ಕಾಮದಿಂದಲೇ ಪೂಜಿಸುತ್ತಿದ್ದೇವೆ, ಆರಾಧಿಸುತ್ತಿದ್ದೇವೆ ಎನ್ನುತ್ತಾರೆ. ನಿಷ್ಕಾಮ ಎಂದರೆ ಏನನ್ನೂ ಕೋರದಿರುವುದು ಎಂದು ಅಂದುಕೊಳ್ಳುತ್ತಾರೆ. ಕೋರುವುದು ಎನ್ನುವುದು ಕರ್ಮ ಕೋರದಿರುವುದು ಮೆಲ್ನೋಟಕ್ಕೆ ಯಾವ ಕರ್ಮ ಮಾಡದಂತೆಯೇ ಕಾಣಿಸುತ್ತದೆ. ಇಲ್ಲಿ ಯಾವ ಕರ್ಮ ಮಾಡದಿದ್ದರೂ ಭಾವನೆ ಮುಖ್ಯವಾಗುತ್ತದೆ. ಅಂದರೆ ಪೂಜೆ ಮಾಡಲು, ಭಜನೆ ಮಾಡಲು, ಸ್ತೋತ್ರಗಳನ್ನು ಓದಲು ಭಾವವೇನು? ಎನ್ನುವದೇ ನೋಡಲ್ಪಡುತ್ತದೆ. ಜೀವನದಲ್ಲಿ ತನಗೆ ತನ್ನ ಕುಟುಂಬಕ್ಕೆ ಒಳ್ಳೆಯದಾಗಬೇಕೆಂಬುದೆ ಅವರ ಭಾವ ಕೋರಿದರೆ ಫಲವಿರುವುದಿಲ್ಲವೆಂದು ಕೋರಿಕೊಳ್ಳದೆ ಮಾಡುತ್ತಿರುತ್ತಾರೆ ಆದರೆ ಇಲ್ಲಿ ಕೋರದಿದ್ದರೂ ಒಳ್ಳಯದಾಗಬೆಂಬ ಭಾವದಿಂದದಾಗಿ ಕಾಮ್ಯ ಕರ್ಮವೆ ಆಗುತ್ತದೆ.

ಆದರೆ "ನಿಷ್ಕಾಮ ಕರ್ಮ ಅಲ್ಲ" ಫಲಿತಾಂಶ ಬರುವುದಿಲ್ಲ ಯಾರಾದರೂ ಹೊಗಳಿದರೆ, ಇವನು ನನ್ನನ್ನು ಹೊಗುಳುವುದೇ ಇವನಿಗೆ ಏನು ಉದ್ದೇಶವಿದೆ? ಎಂದು ಆಲೋಚಿಸುತ್ತೇವೆ. ಹಾಗೆಯೇ ಭಗವಂತನು ನಮ್ಮ ಉದ್ದೇಶವೆನೆಂದು ನೋಡಿದನೆ?

ಬಹಳ ಜನ ಆಲಯಗಳನ್ನು ಕಟ್ಟಿಸುತ್ತಾರೆ, ಕಲ್ಯಾಣ ಮಂಟಪಗಳು, ಛತ್ರಗಳನ್ನು ನಿರ್ಮಿಸುತ್ತಾರೆ ಕೆಲವರು ದೇಣಿಗೆ ನೀಡುತ್ತಾರೆ. ಆದರೆ ಆವುಗಳ ಮೇಲೆ ದೊಡ್ಡ ದೊಡ್ಡ ಅಕ್ಷರಗಳಿಂದ ತಮ್ಮ ಹೆಸರುಗಳನ್ನು ಬರೆಸಿ ಕೊಳ್ಳುತ್ತಾರೆ. ಅಂದರೆ ಅವುಗಳನ್ನು ಕಟ್ಟಿಸಿದ್ದು ಹೆಸರಿಗಾಗಿ ಅಲ್ಲವೆ? ನಿಜವಾಗಿಯೂ ಲೋಕ ಕಲ್ಯಾಣ ಕ್ಕಾಗಿಯೆ ಆಗಿದ್ದರೆ ಹೆಸರುಗಳು ಏಕೆ? ಇಲ್ಲಿ ಫಲಿತಕ್ಕಿಂತ ಹೆಸರೆ ಆಶಿಸುತ್ತಿರುವುದರಿಂದ ಫಲವನ್ನು ಹೊಂದಲಾರರು.

ಇನ್ನು ಅನ್ನದಾನಗಳು, ವಸ್ತ್ರದಾನಗಳು ಮಾಡುತ್ತೇವೆ, ವೈದ್ಯಕೀಯ ಶಿಬಿರಗಳನ್ನು ಏರ್ಪಾಡಿಸುತ್ತೇವೆ, ಆರ್ಥಿ ಸಹಾಯ ಮಾಡುತ್ತಿರುತ್ತೇವೆ ಹಾಗೆ ಎಷ್ಟೋ ರೀತಿಯ ಸೇವೆಗಳನ್ನು ಮಾಡುತ್ತಾ, ಕೀರ್ತಿ, ಪ್ರಖ್ಯಾತಿಗಳನ್ನು ಆಶಿಸುತ್ತೇವೆ, ಪತ್ರಿಕೆಗಳಲ್ಲಿ ಬರಬೇಕೆನ್ನುತ್ತೇವೆ, ವಾರ್ತೆಗಳಲ್ಲಿ ಕಾಣಿಸಿಕೊಳ್ಳಬೆಕೆನ್ನುತ್ತೇವೆ, ಅಷ್ಟೇ ಅಲ್ಲದೆ ಸಹಾಯ ಹೊಂದಿದವರಿಂದ ಕೃತಜ್ಞತಾ ಭಾವವನ್ನು ಕೂಡಾ ಆಶಿಸುತ್ತೇವೆ ಹಾಗೆ ಸಹಾಯ ಮಾಡಿದ ಭಾವ ಬೇರೆ ಇರುವುದರಿಂದ ಫಲವನ್ನು ಹೊಂದಲು ಆಗುತ್ತಿಲ್ಲ.

ಇನ್ನು ನಮ್ಮ ಹತ್ತಿರ ಕೆಲಸ ಮಾಡುವವರಿಗೆ, ಕೆಳಗಿನವರಿಗೆ ಉಳಿದು ಬಿಟ್ಟವೆ ಎಂದು, ಕೆಟ್ಟ ಹೋಗಿದೆ ಎಂದು, ವಾಸನೆ ಬರುತ್ತಿವೆ ಎಂದು, ಬೂಸ್ಟ್ ಹಿಡಿದಿದೆ ಎಂದು,

ಹಣ್ಣು, ತಿನಿಸುಗಳನ್ನು, ಹರಿದು ಹೋದ ವಸ್ತ್ರಗಳನ್ನು ಕೊಡುತ್ತೇವೆ ಹಾಗೆ ಕೊಡುತ್ತಾ ಅವರಿಗೆ  ಬಹಳ ಉಪಾಕರ ಮಾಡುತ್ತಿದ್ದೆವೆಂದು ಉಬ್ಬಿ ಹೋಗುತ್ತೇವೆ  ಆದರೆ ಆವು ಹಾಳಾಗಿ ಹೋಗಿವೆ, ಉಳಿದು ಹೋಗಿವೆ, ಹರಿದು ಹೊಗಿವೆ, ಕೆಲಸಕ್ಕೆ ಬಾರದವು ಎನ್ನುವ ಭಾವವನ್ನು ಕೊಡುವುದರಿಂದ ಫಲವು ಬರುವುದಿಲ್ಲ ಏಕೆಂದರೆ ನಾವು ಯಾವ ಭಾವದಿಂದ ಆ ಕೆಲಸವನ್ನು ಮಾಡಿದ್ದೇವೆ ಎಂಬುದು ಫ್ರಾಮುಖ್ಯತೆ ಕೋಡಲ್ಪಡುತ್ತದೆ.

ಆದ್ದರಿಂದ ಯಾವ ಕೆಲಸ ಮಾಡಿದರೂ, ಯಾವ ಸೇವೆ ಮಾಡಿದರೂ, ಯಾವ ಪುಣ್ಯ ಕರ್ಮಮಾಡಿದರೂ, ಸತ್ಕರ್ಮಗಳು ಮಾಡಿದರೂ, ಭಾವವು ಸರಿಯಾದ ಶುದ್ಧವಾದದ್ದು ಆಗಿರದಿದ್ದರೆ, ಆ ಕೆಲಸಗಳನ್ನು ಎಷ್ಟು ಮಹತ್ಕಾರ್ಯವಾಗಿದ್ದರೂ ಫಲಿತವು ಮಾತ್ರ ಶೂನ್ಯ. ಅದಕ್ಕಾಗಿ "ಭಾವ ಶುಧ್ಧಿಯೇ ಜ್ಞಾನ ಸಿಧ್ಧಿ" ಎಂದಿದ್ದಾರೆ

ಆದ್ದರಿಂದ ಭಗವಂತನು ಭಾವವನ್ನೆ ನೋಡುತ್ತಾನೆಂದು ತಿಳಿಯಬೇಕು ಭಾವವನ್ನಾಧರಿಸಿ ಫಲಿತವಿರುತ್ತದೆ. ಕೆಲಸಗಳನ್ನಾಧರಿಸಿ ಅಲ್ಲ ಆದ್ದ ರಿಂದ  ಭಾವ ಶುಧ್ಧಿಯಾಗಿರಬೇಕು ನಾವು ದೇಹವನ್ನು ಶುಧ್ಧಿ ಮಾಡುತ್ತಿದ್ದೇವೆ. ಬಟ್ಟೆಗಳನ್ನು ಶುದ್ದಿ ಮಾಡುತ್ತಿದ್ದೇವೆ, ಮನೆಯನ್ನು ಶುಧ್ಧಿಮಾಡುತ್ತಿದ್ದೇವೆ, ಆದರೆ ಭಾವಗಳನ್ನೂ ಅಂದರೆ ಮನಸ್ಸನ್ನು ಶುದ್ದಿ ಮಾಡಿಕೊಳ್ಳುತ್ತಿಲ್ಲ. ಮನಸ್ಸು ಶುದ್ದಿ ಮಾಡಬೇಕೆಂದರೆ ಒಂದೇ ಮಾರ್ಗ ಅದೆ "ಅನಾಪಾನಸತಿ" ಧ್ಯಾನ, ಮನಶುಧ್ಧಿಯಿಂದ ಅಂದರೆ ಭಾವಶುದ್ದಿಯಿಂದ ಮಾಡುವ ಕೆಲಸವು ವ್ಯರ್ಥವಾಗುದಿಲ್ಲ ಆದ್ದರಿಂದ ಭಗವಂತನು ನೋಡುವ ಭಾವವನ್ನು ಧ್ಯಾನದಿಂದ ಶುದ್ದಿ ಮಾಡಿ ಕೊಳ್ಳಬೇಕು.

# 27. "ಪ್ರಾರ್ಥನೆ ಅಂದರೆ ಭಗವಂತನನ್ನು ಬದಲಾಯಿಸುವುದಲ್ಲ ನಾವು ಬದಲಾಗಬೇಕು!

ನಾವು ವಿವಿಧ ರೀತಿಯ ಕೋರಿಕೆಗಳಿಂದ ಭಗವಂತನನ್ನು ಪ್ರಾರ್ಥಿಸುತ್ತೇವೆ, ಹಾಗೆ ಪ್ರಾರ್ಥನೆಯಿಂದ ಭಗವಂತನನ್ನು ಪ್ರಸನ್ನ ಗೊಳಿಸಿಕೊಳ್ಳುವುದರಿಂದ ನಮ್ಮ ಕಷ್ಟಗಳು, ದುಃಖಗಳು, ರೋಗಗಳು, ಸಮಸ್ಯೆಗಳು ತೋಲಗಿಸಿಕೊಳ್ಳ ಬಹುದೆಂದು ಭಾವಿಸುತ್ತೇವೆ

ಇನ್ನು ಭಗವಂತನು ದಯಾಮಯನು, ಕರುಣಾಮಯನು. ಆದ್ದರಿಂದ ನಮ್ಮ ಪ್ರಾರ್ಥನೆಗಳಿಗೆ ಪರಮವಶನಾಗಿ, ನಮ್ಮ ಕಷ್ಟಗಳನ್ನು, ಕೋರಿಕೆಗಳನ್ನು ತೀರಿಸುತ್ತಾನೆಂದುಕೊಳ್ಳುತ್ತೇವೆ. ಆತನು ನಿಶ್ಚಲವಾಗಿ ನಮ್ಮ ಪ್ರಾರ್ಥನೆಗಳನ್ನು ಆಲಿಸುತ್ತಾ, ನಿಧಾನವಾಗಿ ನಮ್ಮ ತಪ್ಪುಗಳನ್ನು ನಿಧಾನವಾಗಿ ತಿಳಿದುಕೊಳ್ಳುವಂತೆ ಮಾಡುತ್ತಾನೆ. ಹಾಗೆ ನಿಧಾನವಾಗಿ ನಮಗೆ ಪಶ್ಚಾತ್ತಾಪವಾಗುವಂತೆ ಮಾಡುತ್ತಾನೆ. ನಮ್ಮ ಗುಣಗಳನ್ನು ನಾವೇ ಬದಲಾಯಿಸಿ ಕೊಳ್ಳುವಂತೆ ಮಾಡುತ್ತಾನೆ. ನಡೆಯುವ ಸಂಘಟನೆಗಳೆಲ್ಲಾ ನಾವು ಪಾಠಗಳನ್ನು ಕಲಿಯುವುದಕ್ಕೆಂದು, ನಾವು ತಿಳಿದುಕೊಳ್ಳುವಂತೆ ಮಾಡುತ್ತಾನೆ ನಮ್ಮಲ್ಲಿ ಬದಲಾವಣೆಗಳನ್ನು ತರುತ್ತಾನೆ. ಮೆಲ್ಲಗೆ ನಮ್ಮನ್ನು ಒಳ್ಳೆಯವರನ್ನಾಗಿ ಬದಲಾಯಿಸುತ್ತಾನೆ ಕೊನೆಗೆ ನಮ್ಮನ್ನು ಭಗವಂತನನ್ನಾಗಿ ಬದಲಾಯಿಸುತ್ತಾನೆ ಅಲ್ಲಿಯವರೆಗೆ ಆತನು ಸಾಕ್ಷಿಭೂತವಾಗಿ ಹಾಗೆ ಗಮನಿಸುತ್ತಲೆ ಇರುತ್ತಾನೆ

ನಾವು ಭಗವಂತನ ಹತ್ತಿರ ಆತನ ರಕ್ಷಣೆಗಾಗಿ ಹೋಗುತ್ತೇವೆ. ಹಾಗೆ ಆತನ ಸನ್ನಿಧಿಯಲ್ಲಿ ನಿಧಾನವಾಗಿ ನಮ್ಮ ತಪ್ಪುಗಳನ್ನು ತಿಳಿದುಕೊಳ್ಳುತ್ತೇವೆ. ಇನ್ನು ತಪ್ಪುಗಳು ಮಾಡುವುದಿಲ್ಲವೆಂದುಕೊಂಡು, ಸರಿಪಡಿಸಿಕೊಳ್ಳುತ್ತೇವೆ. ಹಾಗೇ ನಮ್ಮಷ್ಟಕ್ಕೆ ನಾವು ಬದಲಾಗಿ ಮೆಲ್ಲನೆ ನಮ್ಮ ಜೀವನವನ್ನು ನಾವೇ ಸರಿಪಡಿಸಿಕೊಂಡು ದುಃಖಗಳಿಂದ ನಿವಾರಣೆ ಹೊಂದುತ್ತೇವೆ. ನಮ್ಮ ಸ್ಥಿತಿಯನ್ನು ಆಧರಿಸಿ ಈ ಸತ್ಯವನ್ನು ಅರ್ಥ ಮಾಡಿಕೊಳ್ಳಲು ಕೆಲವು ವರ್ಷಗಳೇ ಹಿಡಿಯ ಬಹುದು. ಇಲ್ಲಾ ಕೆಲವು ಜನ್ಮಗಳೇ ಹಿಡಿಯಬಹುದು ಆದರೆ ನಡೆಯುತ್ತಿರುವುದು ಮಾತ್ರ ಅದೇ ಪೂಜೆಗಳ ಮೂಲಕ, ಪ್ರಾರ್ಥನೆಗಳ ಮೂಲಕ, ನಮಾಜುಗಳ ಮೂಲಕ ನಾವು ಭಗವಂತನನ್ನು

ಬದಲಾಯಿಸುತ್ತಿಲ್ಲ ನಮಗೆ ನಾವೇ ಬದಲಾಗುತ್ತಿದ್ದೇವೆ.

ಇದನ್ನಾಧರಿಸಿ ಪೂಜಿಸುವುದೆಂದರೆ, ಪ್ರಾರ್ಥಿಸುವುದೆಂದರೆ, ನಮಾಜು ಮಾಡುವುದೆಂದರೆ ನಮ್ಮ ಗುಣಗಳನ್ನು ಬದಲಾಯಿಸಿಕೊಂಡು ನಾವು ಬದಲಾಗಿ, ನಮ್ಮ ಜೀವವನ್ನು ಆನಂದಮಯ ಮಾಡಿಕೊಳ್ಳುವುದೇ. ಅಂದರೆ ನಾವು ಬದಲಾಗುಬೇಕೇ ಹೊರೆತು, ಭಗವಂತನು ಬದಲಾಗಿ ನಮ್ಮನ್ನು ಅನುಗ್ರಹಹಿಸುವುದಿಲ್ಲ. ಧ್ಯಾನ ಮಾಡಿದರೆ ಇದು ನಮಗೆ ಚೆನ್ನಾಗಿ ಅರ್ಥ ಆಗುತ್ತದೆ.

# 28. ‘‘ಭಗವಂತನು ಬೀಜಗಳನ್ನೆ ಕೊಡುತ್ತಾನೆ, ಫಲಗಳನ್ನು ಕೊಡುವುದಿಲ್ಲ!

“ಏನನ್ನೂ ಬಿತ್ತಿದರೆ ಅದನ್ನೆ ಕೊಯ್ಯೂತ್ತೇವೆ” ಎಂದು ಜೀಸಸ್‌ಕ್ರೈಸ್ಟ್ ಎಂದಿದ್ದಾರೆ. ಮಾವಿನ ಬೀಜವನ್ನು ಬಿತ್ತಿದರೆ ಮಾವಿನ ಹಣ್ಣುನ್ನು ಕೊಯ್ಯುತ್ತೇವೆ ಅಷ್ಟೆ ಹೊರೆತು ಬೇವಿನ ಬೀಜವನ್ನು ಬಿತ್ತಿ ಮಾವಿನ ಹಣ್ಣುನ್ನು ಕೊಯ್ಯುಲಾರೆವು. ಹುಲ್ಲಿನ ಬೀಜ ಹಾಕಿ, ಭತ್ತ ಬೆಳೆ ಕೊಯ್ಯಲಾರೆವು.

ಹಾಗೇಯೆ ಜೀವನದಲ್ಲಿ ಯಾವ ಕರ್ಮಗಳನ್ನು ಮಾಡಿದರೆ, ಆ ಕರ್ಮ ಫಲಗಳನ್ನೇ ಅನುಭವಿಸುತ್ತೇವೆ. ಪುಣ್ಯಕರ್ಮಗಳನ್ನು ಮಾಡಿದರೆ, ಭೊಗಗಳನ್ನು ಅನುಭವಿಸುತ್ತೇವೆ, ಪಾಪಕರ್ಮಗಳನ್ನು ಮಾಡಿದರೆ ದುಃಖವನ್ನು ಅನುಭವಿಸುತ್ತೇವೆ. ಅದ್ದರಿಂದ ಹಿಂದೆ ಮಾಡಿದ ಕರ್ಮ ಫಲಗಳೆ ಪ್ರಸ್ತುತ ಅನುಭವಿಸುತ್ತಿದ್ದೇವೆ. ಹಾಗೆಯೇ ಪ್ರಸ್ತುತ ಮಾಡುವ ಕರ್ಮಫಲಗಳು ಭವಿಷ್ಯ ತ್ತಿನಲ್ಲಿ ಅನುಭವಿಸುತ್ತೇವೆ. ಕಷ್ಟಗಳು, ರೋಗಗಳು, ಭಾಧೆಗಳು ಅನುಭವಿಸುತ್ತಿದ್ದೇವೆಂದರೆ, ಹಿಂದೆ ನಾವು ಬಿತ್ತಿದ ಕೆಟ್ಟ ಕರ್ಮಗಳ ಫಲಿತವೆಂದು ತಿಳಿದುಕೊಳ್ಳಬೇಕು.

ಭಗವಂತನು ಕಷ್ಟಗಳಿಲ್ಲದ ಒಳ್ಳೆಯ ಜೀವನವನ್ನು ಕೊಡುತ್ತಾನೆಂದು, ಪೂಜೆಗಳು, ಪ್ರಾರ್ಥನೆಗಳು, ನಮಾಜುಗಳು, ಮಾಡುತ್ತಿದ್ದೇವೆ. ಆದರೆ ಭಗವಂತನು ಜೀವನವನ್ನು ಆನಂದ ಮಯ ಮಾಡಿಕೊಳ್ಳುವ ದಾರಿಯನು ತೋರಿಸುತ್ತಾನೆ. ಆದರೆ ಕೋರಿದವುಗಳನ್ನು ಕೊಡುವುದಿಲ್ಲ. ಆದಾರಿಯಿಂದೆ ನಡೆದು, ನಮಗೆ ನಾವೇ ಜೀವನವನ್ನು ಆನಂದಮಯ ಮಾಡಿಕೊಳ್ಳಬೇಕು. ನಮ್ಮ ದುಃಖಗಳನ್ನು ರೋಗಗಳನ್ನು ಕಳೆದುಕೊಳ್ಳಬೇಕು

ನಾವು ಆರಾಧಿಸುವ ದೇವರುಗಳೆಲ್ಲಾ ನಮಗೆ ಭಗವದ್ಗೀತೆ, ಬೈಬಲ್, ಖುರಾನ್‌ಗಳ ಮೂಲಕ ತಪ್ಪುಗಳನ್ನು ಮಾಡದಂತೆ ಜೀವನ ದನ್ಯ ಮಾಡಿಕೊಳ್ಳುವ ಮಾರ್ಗವನ್ನು ಬೋಧಿಸಿದ್ದಾರೆ, ಅಂದರೆ ಒಳ್ಳೆಯ ಜೀವನ ಫಲಗಳು ಹೊಂದುವ ಒಳ್ಳೆಯ ಬೀಜಗಳನ್ನು ಕೊಟ್ಟಿದ್ದಾರೆ.

ಭಗವಾನ್ ಸತ್ಯ ಸಾಯಿಬಾಭಾರವರು ಮಧುರ ಫಲಗಳನ್ನು ಕೊಡುವ ಬೀಜಗಳನ್ನು ಅಂದರೆ ಲೋಕವನ್ನು ಪ್ರೀತಿಸುವುದು, ಸಹ ಮಾನವರಿಗೆ ಸೇವೆ ಮಾಡುವುದು, ಸಹ ಜೀವಿಗಳೊಂದಿಗೆ ದಯ, ಕರುಣೆ ತೋರಿಸುವುದು, ಸತ್ಯವನ್ನು ಹೇಳುವುದು, ಧರ್ಮವನ್ನು ಆಚರಿಸುವುದು, ಜೀವಹಿಂಸೆಯನ್ನು ಬಿಡುವುದು ಎನ್ನುವಂತಹ ಬೀಜಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಬಿತ್ತಿದರೆ ಅಂದರೆ ಅಚರಿಸಿದರೆ ಜೀವನದಲ್ಲಿ ನಾವು ಬಯಸುವ ಸುಖ ಸಂತೋಷವನ್ನು, ಆರೋಗ್ಯ ಶಾಂತಿಗಳಂತಹವುಗಳನ್ನು ಹೊಂದ ಬಹುದು,

ಅಂತಹ ಬೀಜಗಳು ಫಲವತ್ತಾದ ನೆಲದಲ್ಲಿ ನಾಟಿದರೆ ನಿಸ್ವಾರ್ಥದಿಂದ ಪ್ರತಿಫಲ ಅಪೇಕ್ಷಿಸದೆ ಜೀವನವನ್ನು ಆಚರಿಸಿದರೆ ತಪ್ಪದೆ ಒಳ್ಳೆಯ ಫಲಿತಾಂಶ ಕೋರಿಕೆಗಳನ್ನು ಹೊಂದುತ್ತೇವೆ ಹಾಗೆಯೆ ಬಾಭಾರವರು ಕೊಟ್ಟ ಭಿಜಗಳು ಅಂದರೆ ಒಳ್ಳೆಯ ಕೆಲಸಗಳನ್ನು ಸ್ವಾರ್ಥದಿಂದ, ಸ್ವಲಾಭಕ್ಕಾಗಿ, ಅಂದರೆ ಪ್ರತಿಪಲಾಪೇಕ್ಷೆಯಿಂದ ಮಾಡಿದರೆ ಸಾರವಿಲ್ಲದೆ ಭೂಮಿಯಲ್ಲಿ ಬಿತ್ತಿದ ಬೀಜಗಳು ಯಾವ ರೀತಿಯಲ್ಲಿ ಮೊಳಕೆ ಬರುವುದಿಲ್ಲ ವೋ ಅದೇ ರೀತಿಯಾಗಿ ಜೀವನದಲ್ಲಿ ಫಲಗಳನ್ನು ಹೊಂದುವುದಿಲ್ಲ ಬಾಬಾರವರು ಫಲಗಳನ್ನೆ ಕೊಡುವವರಾದರೆ ರೋಗಗಳಿಂದ ಬಂದವರಿಗೆ ಉಚಿತ ವೈಧ್ಯಕೀಯ ಸೇವೆಗಳನ್ನು ಏಕೆ ಮಾಡಿಸುತ್ತಾರೆ? ಅವರ ಮಹಿಮೆಯಿಂದಲೆ ಅವರ ರೋಗಗಳುನ್ನು ವಾಸಿಮಾಡಿ ಕಳುಹಿಸುತ್ತಿದರಲ್ಲ ಅಂದರೆ ಭಗವಂತನು ಎಂದಿಗೂ ಫಲವನ್ನು ಕೊಡುವುದಿಲ್ಲ ಬೀಜಗಳನ್ನೇ ಕೊಡುತ್ತಾನೆಂದು ತಿಳಿದುಕೊಳ್ಳಬೇಕು.

ಹಾಗೇ ಕೃಷ್ಣನು, ಬುದ್ಧನು, ಜೀಸಸ್, ಮಹಮ್ಮದ್, ಗುರುನಾನಕ್, ರಾಮ, ಕೃಷ್ಣಪರಮಾಹಂಸ, ವೀರಬ್ರಹ್ಮೇಂದ್ರಸ್ವಾಮಿ , ಯೋಗಿಗಳು, ರಮಣ ಮಹರ್ಷಿ ಇವರೆಲ್ಲಾ ನಮಗೆ ಎಷ್ಟೋ ಒಳ್ಳೆಯ ಬೀಜಗಳನ್ನು ಕೊಟ್ಟಿದ್ದಾರೆ ನಾವು ಅವುಗಳನ್ನು ಸಾರವಂತವಾದ ನೆಲದಲ್ಲಿ ಅಂದರೆ ನಿಸ್ವಾರ್ಥದಿಂದ ಅಂದರೆ ಪ್ರತಿಫಲಾಪೇಕ್ಷೇ ಇಲ್ಲದೆ ಜೀವನದಲ್ಲಿ ಆಚರಿಸಿದರೆ ತಪ್ಪದೆ ಒಳ್ಳೆಯ ಫಲಗಳನ್ನು ಹೊಂದುತ್ತೇವೆ.

ನಾವು ಅವರು ಕೊಟ್ಟಿರುವ ಬೀಜಗಳನ್ನಲ್ಲದೆ, ಬೇರೆ ನಮಗೆ ಇಷ್ಟಬಂದ ಬೀಜಗಳನ್ನು ಬಿತ್ತುತ್ತೇವೆ. ಅಂದರೆ ಅವರು ಹೇಳೀದ ಒಳ್ಳೆಯ ಕೆಲಸಗಳು ಮಾಡದೇ ಕೆಟ್ಟ್ ಕೆಲಸಗಳನ್ನು ಮಾಡುತ್ತಿದ್ದೇವೆ ಅವುಗಳಿಂದ ಕೆಟ್ಟ ಫಲಗಳನ್ನು ಅಂದರೆ ದುಃಖ ರೋಗ ನೋವುಗಳು ಅನುಭವಿಸುತ್ತಿದ್ದೇವೆ.

ಭಗವಂತನು ಫಲಗಳನ್ನು ಕೊಡುತ್ತಾನೆಂದು ಆಶಿಸಬಾರದು ಅವರನ್ನು

ಪೂಜೆಸುತ್ತಾ ಭಜನೆಗಳನ್ನು ಮಾಡುತ್ತಾ ಪ್ರಾರ್ಥನೆಗಳನ್ನು ಮಾಡುತ್ಥಾ ನಮಾಜು ಮಾಡುತ್ತಾ ಜೀವನವನ್ನು ವ್ಯರ್ಥ ಮಾಡಿಕೊಳ್ಳಬಾರದು

ಬ್ರಹ್ಮರ್ಷಿ ಪತ್ರೀಜೀಯವರು ನಮಗೆ ಧ್ಯಾನವೆನ್ನುವ ದಿವ್ಯವಾದ ಕಲ್ಪವೃಕ್ಷದ ಬೀಜವನ್ನು ಕೊಟ್ಟಿದ್ದಾರೆ. ಅದನ್ನು ಹೊಂದುತ್ತೀಯ ಅಂದರೆ ಧ್ಯಾನ ಮಾಡಿದರೆ ನೀನು ಏನು ಕೋರಿ ಕೋಂಡದರೆ ಅದನ್ನು ಹೊಂದುತ್ತೀಯ ಅಂಧರೆ ಧ್ಯಾನ ಮಾಡಿದರೆ ನಾವು ಕೋರಿಕೊಳ್ಳುವು ಎಲ್ಲಾ ಲಾಭಗಳನ್ನು ಅಂದರೆ ಆನಂದ, ಆರೋಗ್ಯ, ಶಾಂತಿ ಸೌಲಭ್ಯವನ್ನು ಹೊಂದಬಹುದು ನಮಗಿರುವ ತಾತ್ಕಾಲಿಕ ಸಮಸ್ಯೆಗಳಿಂದ ಹೊರ ಬೀಳುವುದಿಲ್ಲದೆ ಜನ್ಮ ಜನ್ಮದ ಕರ್ಮಗಳು ಕಳೆದುಕೊಂಡು ಪ್ರತಿಯೊಬ್ಬರೂ ಕೋರಿಕೊಳ್ಳುವ ಶಕ್ತಿ, ಮೋಕ್ಷವನ್ನು ಹೊಂದಬಹುದು ಜೀವನ್ಮುಕ್ತರಾಗಬಹುದು

# 29. ಪ್ರೇಮ ಎನ್ನುವುದು ಸಹಜ ಗುಣವಾಗಬೇಕು !

**ಶ್ಲೋಕ ॥ ಆತ್ಮೆ ಪಯ್ಯೇನ ಸರ್ವತ್ರ ಸಮಂ ಪಶ್ಯತಿಯೋರ್ಜುನ।**
**ಸುಖಂ ವಾಯದಿವಾ ದುಃಖಂ ನಯೋಗಿ ಪರಮೋಮತಃ**

**॥ (ಭಗವದ್ಗೀತೆ 6–32)**

**ತಾತ್ಪರ್ಯ:** ಓ, ಅರ್ಜುನಾ ! ಯಾವನು ಸಮಸ್ತ ಭೂತಗಳೊಂದಗಿನ ಸುಖ ದುಃಖಗಳು ತನ್ನ ದುಃಖಗಳೆಂದು ನೋಡುವನೋ ಅಂತಹವನು ಎಲ್ಲರಲ್ಲಿ ನನಗೆ ಬಹಳ ಪ್ರಿಯನು, ಪ್ರೀತಿ ಪಾತ್ರನು.

ಈ ಶ್ಲೋಕದ ಮೂಲಕ ಶ್ರೀ ಕೃಷ್ಣ ಭಗವಾನನ ಸಂದೇಶ ಏನೆಂದರೆ ಯಾವ ಮಾನವನಾದರೂ ತಾನು ಸುಖವಾಗಿ ಇರಬೇಕೆಂದು ಹೇಗೆ ಕೋರಿಕೊಳ್ಳುವನೋ ಹಾಗೆಯೇ ಭಗವಂತನಿಂದ ಸೃಷ್ಟಿಸಲ್ಪಟ್ಟ ಪ್ರತಿಜೀವಿ, ಪ್ರತಿ ಮಾನವನು ಹಾಗೆಯೇ ಕೋರಿಕೊಳ್ಳುತ್ತಾನೆಂದು ಗ್ರಹಿಸಿಕೊಳ್ಳಬೇಕು. ಹಾಗೆಯೇ ತನಗೆ ಕಷ್ಟ, ದುಃಖವಾದಾಗ ಹೇಗೆ ಭಾಧೆ ಪಡುತ್ತಾನೋ ಈ ಸೃಷ್ಟಿಯಲ್ಲಿ ಪ್ರತಿ ಜೀವಿಯೊಂದರ ಬಾಧೆ ತನ್ನಂತದ್ದೇ ಎಂದು ಗ್ರಹಿಸಬೇಕು. ಹಾಗೆ ಯಾರಾದರೆ ಗ್ರಹಿಸುತ್ತಾರೊ ಅವರು ಭಗವಂತನಿಗೆ ಅತ್ಯಂತ ಪ್ರೀತಿ ಪಾತ್ರರಾಗುತ್ತಾರೆ.

ಜೀಸಸ್ ಈ ವಿಧವಾಗಿ ತಿಳಿಸಿದ್ದಾರೆ "ನಿನ್ನನ್ನು ನೀನು ಪ್ರೀತಿಸಿಕೊಳ್ಳುವಂತೆ ನೆರೆಹೊರೆಯವರನ್ನು ಪ್ರೀತಿಸು"

ಸತ್ಯ ಸಾಯಿಬಾಬಾರವರ ಮುಖ್ಯವಾದ ಸಂದೇಶ "ಎಲ್ಲರನ್ನೂ ಪ್ರೀತಿಸಿರೆಂದು" ಮೇಲಿನವುಗಳನನಾಧರಿಸಿ ನಾವು ಭಗವಂತನಿಗೆ ಇಷ್ಟದವನಾಗಬೇಕೆಂದರೆ ಭಗವಂತನ ಅನುಗ್ರಹ ಹೊಂದಬೇಕೆಂದರೂ ಸಮಸ್ತ ಜೀವಿಗಳನ್ನು ನಮ್ಮಂತೆ ಪ್ರೀತಿಸಬೇಕು.

ನಮಗೆ ಭಗವಂತನೆಂದರೆ ಭಕ್ತಿ, ಗೌರವ, ಭಯವಿದ್ದರೆ ಆತನು ಹೇಳಿದಂತೆ ಮಾಡಬೇಕು. ಆತನನ್ನು ಪೂಜಿಸಿದರೆ ಸರಿ ಹೋಗದು ಪ್ರಾರ್ಥಿಸಿದರೆ ಸರಿಹೋಗದು, ಸಮಾಜು ಮಾಡಿದರೆ ಸರಿಹೋಗದು.

ಹೇಗೆ ಪ್ರೀತಿಸಬೇಕೆಂದರೆ ನಮ್ಮನ್ನು ನಾವು ಪ್ರೀತಿಸಿಕೊಂಡಂತೆ, ಅಷ್ಟೇ ಹೊರತು, ಹೆಂಡತಿಯನ್ನು, ಪುತ್ರನನ್ನು, ಸಹೋದರನನ್ನು, ತಂದೆ–ತಾಯಿಗಳನ್ನು ಪ್ರೀತಿಸಿದಂತೆ ಅಲ್ಲ.

ಈ ಪ್ರೀತಿ ಕುರಿತು ದೇವರುಗಳು ಅಷ್ಟು ಬಲವಾಗಿ ಏಕೆ ಬೋಧಿಸಿದ್ದಾರೆ? ಎಂದು ಆಲೋಚಿಸಿದರೆ, 'ಪ್ರೇಮವೇ ಭಗವಂತನು' ಎಂದು ತಿಳಿಯುತ್ತದೆ. ಆದ್ದರಿಂದ ನಮಗ ಜೀವನದಲ್ಲಿ ಇರಬೇಕಾದ ಮೊಟ್ಟ ಮೊದಲನೇ ಗುಣ ಪ್ರೇಮ. ಪ್ರೇಮ ಮಾನವನ ಸಹಜ ಗುಣವಾಗಬೇಕು. ಪ್ರೇಮವಿಲ್ಲದಿದ್ದರೆ ಮಾನವನೇ ಅಲ್ಲ.

ಜೀವನದಲ್ಲಿ ಸಂಪಾದಿಸಿಕೊಳ್ಳಬೇಕಾಗಿರುವುದು ಪ್ರೇಮ, ಪ್ರೇಮ ನಮಗೆ ಅಂದವಾದ ಅಭರಣ. ಪ್ರೇಮ ನಮ್ಮ ಬಳಿ ಇರುವ ಶಕ್ತಿವಂತವಾದ ಆಯುಧ. ಪ್ರೇಮ ನಮ್ಮ ಜೀವನಕ್ಕೆ ಪರಿಪೂರ್ಣತೆಯನ್ನು ಕೊಡುವುದು. ಏಕೆಂದರೆ ಒಬ್ಬ ಸ್ತ್ರೀ ತನ್ನ ಅಲಂಕಾರದಿಂದ, ಅಲಂಕರಿಸಿಕೊಂಡು ಆಕರ್ಷಣೀಯವಾಗಿ ತಯಾರಾಗಿ ಗಂಡನನ್ನು ಆಕರ್ಷಿಸಬಲ್ಲಳು. ಆದರೆ ಈ ಆಕರ್ಷಣೆ ತಾತ್ಕಾಲಿಕವಾದದ್ದು.

ಭೌತಿಕ ಆಕರ್ಷಣೆಯಿಂದ ಹತ್ತಿರವಾದ ಗಂಡನು ಅವುಗಳಲ್ಲಿ ಯಾವುದೇ ಲೋಪವಾದರೂ ದೂರವಾಗುತ್ತಾನೆ.

ಆದರೆ ಅಂದವಿಲ್ಲದಿದ್ದರೂ, ಅಲಂಕಾರಗಳು ಇಲ್ಲದಿದ್ದರೂ, ಗಂಡನಿಗೆ ಬೇಕಾದ ಪ್ರೇಮವನ್ನು ಕೊಡಬಲ್ಲ ಸ್ತ್ರೀ, ಗಂಡನ ಪ್ರೇಮವನ್ನು ಶಾಶ್ವತವಾಗಿ ಹೊಂದಬಲ್ಲಳು. ಈ ವಿಧವಾಗಿ ಗಂಡನು ಹೆಂಡತಿಯನ್ನು ಪ್ರೀತಿಸಬೇಕು. ಹಾಗೆಯೇ ಇತರ ಕುಟುಂಬದ ಸದಸ್ಯರಿಂದ ಕೂಡ ಪ್ರೇಮವನ್ನು ಹೊಂದಬಹುದು. ಇವರೇ ಅಲ್ಲ ಬಂಧುಗಳು, ಸ್ನೇಹಿತರಿಂದ ಕೂಡಾ. ಆದ್ದರಿಂದ ಅಮೂಲ್ಯವಾದ ಆಬರಣಗಳಿಗಿಂತ, ವಜ್ರ ವೈಢೂರ್ಯಗಳಿಗಿಂತ, ಅಂದಕ್ಕಿಂತ 'ಪ್ರೇಮ' ಅಮೂಲ್ಯವಾದದ್ದು ಎಂದು ತಿಳಿಉಕೊಳ್ಳಬೇಕು.

ಹಾಗೇ ಬಲದಿಂದಾಗಲಿ, ಆಯುಧಗಳಿಂದಾಗಲಿ, ಜಯಿಸಲಾರದ್ದು, ಪ್ರೇಮದಿಂದ ಜಯಿಸಬಹುದು. ಯಾವುದಾದರೂ ಕಾರ್ಯಗಳನ್ನು ಸಾಧಿಸಬೇಕೆಂದರೆ "ಪ್ರೇಮದಿಂದ ಹಗುರವಾಗಿ ಸಾಧಿಸಬಹುದು. ಘರ್ಷಣೆಯಿಂದ, ವಿರೋಧದಿಂದ, ದೌರ್ಜನ್ಯದಿಂದ, ಪರಿಷ್ಕಾರವಾಗದವು ಪ್ರೇಮದಿಂದ ಸಾಧಿಸಿದವು ಬಹಳ ಇವೆ. ಆದ್ದರಿಂದ ಪ್ರೇಮವನ್ನು ಮೀರಿದ ಆಯುಧ ಇಲ್ಲವೆಂದು ಬಲವಾಗಿ ಹೇಳಬಹುದು.

ಹಾಗೆಯೇ ನಮಗೆ ಎಷ್ಟಿದ್ದರೂ, ಅಂದರೆ ಅಂದ, ಬಲ, ಹಣ, ಅಂತಸ್ತುಗಳು ಹೀಗೆ ಎಷ್ಟಿದ್ದರೂ ಪ್ರೇಮವೆನ್ನುವ ಗುಣವಿಲ್ಲದಿದ್ದರೆ, ಜೀವನ ಪರಿಪೂರ್ಣವಾಗದು.

ಸಮಾಜದಲ್ಲಿ ಸರಿಯಾದ ಗೌರವ ಲಭಿಸದು. ಯಾರೂ ನಮ್ಮನ್ನು ಹಿಡಿಸಿಕೊಳ್ಳುವುದಿಲ್ಲ. "ಕಾಯಿ ಪಲ್ಲೆಗಳಲ್ಲಿ ಎಲ್ಲಾ ವಿಧದವುಗಳನ್ನು ಹಾಕಿ ರುಚಿಯಾಗಿ, ಮಧುರವಾಗಿ ತಯಾರು ಮಾಡಿದರೂ, ಮೇಲೆ ಘಮ ಘಮಿಸಿದರೂ ಉಪ್ಪು ಇಲ್ಲದಿದ್ದರೆ ಆ ಪಲ್ಯ ರುಚಿ ಇಲ್ಲದ್ದೇ ಆಗುತ್ತದೆ" ಹಾಗೆಯೇ 'ಪ್ರೇಮವೆಂಬ ಗುಣ ಇಲ್ಲದಿದ್ದರೆ ಜೀವನಕ್ಕೆ ಬೆಲೆಯೇ ಇಲ್ಲ'

ನಾವು 'ಪ್ರೇಮ' ಎಂಬ ಗುಣವನ್ನು ಸಂಪಾದಿಸಿಕೊಳ್ಳುವುದಕ್ಕೆ ಪ್ರಯತ್ನಿಸಬೇಕು. ಅದು ಸಹಜವಾಗಿರಬೇಕು. ಅದು ಅಂತರಂಗದಿಂದತುಂಬಿ ತುಳುಕುತ್ತಿರಬೇಕು. ಪ್ರವಾಹದಂತೆ ಪ್ರವಹಿಸಬೇಕು. ಅಷ್ಟೇ ಹೊರತು ಪ್ರೇಮದಿಂದ ಇರಬೇಕೆಂದು ಪ್ರಯತ್ನಿಸಿದರೆ ಪ್ರಯೋಜನವಿಲ್ಲ. ಅಲಂಕರಿಸಿಕೊಂಡ ಅಂದವು ಸ್ವಲ್ಪ ಹೊತ್ತು ಮಾತ್ರವೇ ಇರುವಂತ ಪ್ರೇಮದಿಂದ ಇರಬೇಕೆಂದು ಪ್ರಯತ್ನಿಸಿದರೆ ಅದು ತಾತ್ಕಲಿಕವೇ ಆಗುತ್ತದೆ. ಆದರೆ ಸಹಜ ಸಿದ್ಧವಾದ "ಪ್ರೇಮ" ಎಲ್ಲಾ ಸಂದರ್ಭಗಳಲ್ಲಿ ಎಲ್ಲಾ ಸಮಯಗಳಲ್ಲಿ ಎಲ್ಲರ ವಿಷಯದಲ್ಲಿ ಕೂಡ ಪರಿಮಳವನ್ನು ಹರಡುತ್ತದೆ.

ಪ್ರೇಮ ಸಹಜ ಗುಣವಾಗಬೇಕಾದರೆ ಒಂದೇ ಮಾರ್ಗ 'ಆನಾಪಾನಸತಿಧ್ಯಾನ' ಮಾಡುವುದರಿಂದ ಪ್ರೇಮ ಮೂರ್ತಿಗಳಾಗುತ್ತೇವೆ. ಅಸಲು ಧ್ಯಾನಕ್ಕೆ ಪರಾಕಾಷ್ಠೆ 'ಪ್ರೇಮ' ಅಂದರೆ ನಮ್ಮಲ್ಲಿ ಧ್ಯಾನ ಸ್ಥಿತವಾಗಿದೆ ಎಂದು ಹೇಳುವುದಕ್ಕೆ ಗುರುತು ನಮ್ಮಲ್ಲಿ ಪ್ರೇಮವು ತುಂಬಿ ಹರಿಯುವುದೇ. ಎಲ್ಲವನ್ನು ಪ್ರೀತಿಸುವುದೇ ಕುಟುಂಬ ಸದಸ್ಯರೇ ಅಲ್ಲದೆ, ನೆರೆಹೊರೆಯವರನ್ನಲ್ಲದೆ, ಸಮಸ್ತ ಜೀವಿಗಳನ್ನು, ಪ್ರಾಣಿಗಳನ್ನು ಸಮಾನವಾಗಿ ನೋಡುವುದೇ, ಯಾರೊಂದಿಗೂ ಭೇದ ಭಾವವಿಲ್ಲದೆ ಇರುವುದೇ.

ಇತರರಿಗೆ ಸಂಭವಿಸಿದರೂ, ಅವರಿಗೆ ಏನೂ ಸಂಭವಿಸಿದರೂ, ಕಷ್ಟಗಳಲ್ಲಿದ್ದಾಗಲೂ ಸ್ಪಂದಿಸುವವನೇ ನಿಜವಾದ ಪ್ರೇಮಮೂರ್ತಿ. ಆದ್ದರಿಂದ ಧ್ಯಾನಮಾಡಿ, 'ಪ್ರೇಮ' ವೆನ್ನುವ ಗುಣವನ್ನು ಸ್ವಂತವಾಗಿಸಿಕೊಳ್ಳೋಣ.

# 30. ನಾವು ಮಾಡುವ ಎಲ್ಲಾ ಪುಣ್ಯ ಕರ್ಮಗಳು ಒಂದೇ ಫಲಿತಾಂಶವನ್ನು ಕೊಡುವುದಿಲ್ಲ!

ಸಾಧಾರಣವಾಗಿ ನಾವು ಪೂಜೆಗಳು, ಪ್ರಾರ್ಥನೆಗಳು, ಪಾರಾಯಣಗಳು, ಕೀರ್ತನೆಗಳು, ಭಜನೆಗಳು, ತೀರ್ಥಯಾತ್ರೆಗಳು, ಪುಣ್ಯ ಸ್ನಾನಗಳು, ವ್ರತಗಳು, ಸ್ತೋತ್ರಗಳು, ಜಪಗಳು ಇಂತಹ ಎಷ್ಟೋ ರೀತಿಯ ಪುಣ್ಯ ಕರ್ಮಗಳನ್ನು ಮಾಡುತ್ತಿದ್ದೇವೆ.

ಆದರೆ ಅದರಿಂದ / ಯಾವುದರಿಂದ ಎಷ್ಟು ಫಲವು ಬರುತ್ತದೋ ನಮಗೆ ಗೊತ್ತಿಲ್ಲ. ಆದರೆ ಎಲ್ಲರೂ ಮಾಡುತ್ತಿದ್ದಾರೆಂದು, ಆಚಾರವಾಗಿ ಬರುತ್ತಿದೆ ಎಂದು, ಮಾಡಬೇಕಾದದ್ದು ಎಂದು, ಹೀಗ ನಮಗೆ ಇಷ್ಟವಾದವು, ನಮಗೆ ತೋಚಿದವು ಮಾಡುತ್ತಿದ್ದೇವೆ. ಎಲ್ಲಾ ಭಗವಂತನ ಕಾರ್ಯಕ್ರಮಗಳೇ ಎಂದು ಮಾಡುತ್ತಿದ್ದೇವೆ.

ಆದರೆ ಎಲ್ಲಾ ಒಂದೇ ವಿಧವಾದ ಫಲವನ್ನು ಕೊಡುವುದಿಲ್ಲ. ಈ ವಿಷಯವನ್ನು ನಾವು ತಿಳಿದುಕೊಂಡರೆ ಹೆಚ್ಚು ಫಲವನ್ನು ಕೊಡುವ ಕರ್ಮಗಳನ್ನೆ ಮಾಡುತ್ತೇವೆ. ಕಡಿಮೆ ಸಮಯದಲ್ಲಿ ಕಡಿಮೆ ಶ್ರಮದಿಂದ ನಾವು ಕೋರಿಕೊಂಡ ಫಲವನ್ನು ಹೊಂದಬಲ್ಲವರಾಗುತ್ತೇವೆ.

ಉತ್ತರ ಗೀತೆಯಲ್ಲಿ

**ಶ್ಲೋಕ॥ ಪೂಜ ಕೋಟಿ ಸಮಂ ಸ್ತೋತ್ರಂ, ಸ್ತೋತ್ರ ಕೋಟಿ ಸಮೋ ಜಪಂ**

**ಆಪಕೋಟಿ ಸಮಂ ಧ್ಯಾನಂ, ಧ್ಯಾನಕೋಟಿ ಸಮೋಲಯಃ ॥**

**(ಉ.ಗಿ. 4–52)**

ಮೇಲಿನ ಶ್ಲೋಕದಲ್ಲಿ ಅರ್ಥವನ್ನು ಸ್ವಲ್ಪ ವಿಶ್ಲೇಷಿಸಿಕೊಳ್ಳೋಣ. ಕೋಟಿ ಪೂಜೆಗಳು (ಅಂದರೆ ನಾವು ಮಾಡುವ ಪೂಜೆಗಳು, ಪ್ರಾರ್ಥನೆಗಳು, ಭಜನೆಗಳು, ಕೀರ್ತನೆಗಳು, ವ್ರತಗಳು ಮುಂತಾದವುಗಳು(ಒಂದು ಸ್ತೋತ್ರಕ್ಕೆ (ಅಂದರೆ ಲಲಿತಾ ಸಹಸ್ರನಾಮಂ, ವಿಷ್ಣು ಸಹಸ್ರನಾಮ) ಸಮವೆಂದು. ಹಾಗೆ ಕೋಟಿ ಸ್ತೋತ್ರಗಳು ಒಂದು ಜಪಕ್ಕೆ ಸಮಾನವೆಂದು(ಜಪದಲ್ಲಿ 3 ರೀತಿಗಳಿವೆ (1) ವಾಚಕ ಜಪ, (2) ಉಪಾಸ್ಸು ಜಪ (3)

ಮಾನಸಿಕ ಜಪ. ಈ ಮಾನಸಿಕ ಜಪವನ್ನೇ ಧ್ಯಾನವೆಂದುಕೊಳ್ಳುತ್ತಾರೆ) ಅಂತಹ ಕೋಟಿ ಜಪಗಳು ಒಂದು ಧ್ಯಾನಕ್ಕೆ ಸಮಾನವೆಂದು ಸಾಕ್ಷಾತ್ ಕೃಷ್ಣ ಭಗವಾನನು ಮೇಲಿನ ಶ್ಲೋಕದ ಮೂಲಕ ನಮಗೆ ತಿಳಿಸಿದ್ದಾರೆ.

ಅಂದರೆ ಒಂದು ಗಂಟೆ ಧ್ಯಾನ ಮಾಡುವುದರಿಂದ ಕೋಟಿ ಗಂಟೆಗಳು ಅಂದರೆ ಒಂದು ಜನ್ಮವೆಲ್ಲಾ ಮಾನಸಿಕ ಜಪ ಮಾಡಿದರೆ ಬರುವ ಫಲವನ್ನು ಹೊಂದಬಹುದೆಂದು ತಿಳಿಸಿದ್ದಾರೆ. ಅದರೆ ಎಲ್ಲಕ್ಕಿಂತಲೂ, ಧ್ಯಾನ ಅತ್ಯಂತ ಶಕ್ತಿವಂತವಾದದ್ದು ಎಂದು, ಶ್ರೀಕೃಷ್ಣನ ಸಂದೇಶ. ಇದನ್ನು ಆಧರಿಸಿ ಧ್ಯಾನವೊಂದರ ಶ್ರೇಷ್ಠತೆಯನ್ನು ನಾವು ಅರ್ಥಮಾಡಿಕೊಳ್ಳಬೇಕು ಹಾಗೂ ಅದರ ಮಹತ್ವವು ಸಹ ನಮಗೆ ಅರ್ಥವಾಗುತ್ತದೆ.

ಶ್ರೀ ಕೃಷ್ಣನು ಕೊಟ್ಟ ಸಂದೇಶವನ್ನಾಧರಿಸಿ, ಪೂಜೆಗಿಂತ ಸ್ತೋತ್ರವು ಶಕ್ತಿಯುತವಾದದ್ದು, ಸ್ತೋತ್ರಕ್ಕಿಂತ ಜಪ ಶಕ್ತಿವಂತವಾದದ್ದು, ಜಪಕ್ಕಿಂತ ಧ್ಯಾನವು ಶಕ್ತಿವಂತವಾದದ್ದೆಂದು ತಿಳಿಯುತ್ತದೆ. ಕಾರಣ ಪೂಜೆ ಶರೀರದಿಂದ ಮಾಡುವುದು, ಸ್ತೋತ್ರವು ಬಾಯಿಂದ ಮಾಡುವುದು, ಜಪವನ್ನು ಮನಸ್ಸಿನಿಂದ ಮಾಡುವುದು, ಆದರೆ ಧ್ಯಾನ. . .ಮನಸ್ಸು ಇಲ್ಲದಂತೆ ಅಂದರೆ ಆಲೋಚನೆಗಳು ಇಲ್ಲದೆ ಮಾಡುವ ಸಾಧನೆ.

ದೇಹದಿಂದ ಮಾಡುವ ಸಾಧನೆಗಿಂತ, ಬಾಯಿಯಿಂದ ಮಾಡುವ ಸಾಧನೆ ಶಕ್ತಿವಂತವಾದದ್ದು. ಬಾಯಿಯಿಂದ ಮಾಡುವ ಸಾಧನೆಗಿಂತ ಮನಸ್ಸಿನಿಂದ ಮಾಡುವ ಸಾಧನೆ ಶಕ್ತಿವಂತವಾದದ್ದು, ಮನಸಸಿನಿಂದ ಮಾಡುವ ಸಾಧನೆಗಿಂತ ಮನಸ್ಸಿಲ್ಲದೆ (ಆಲೋಚನೆಗಳು ಇಲ್ಲದೆ) ಇರುವ ಸ್ಥಿತಿಯ ಅಂದರೆ ಧ್ಯಾನ ಅತ್ಯಂತ ಶಕ್ತಿವಂತವಾದದ್ದು ಎಂದು ತಿಳಿಯುತ್ತದೆ.

ನಾವು ಮಾಡುವ ಸಣ್ಣ ಸಣ್ಣ ಪೂಜೆಗಳು, ಸ್ತೋತ್ರಗಳು, ಜಪಗಳಿಂದ ಜನ್ಮ, ಜನ್ಮಗಳಿಂದ ಸೇರಿಕೊಂಡಿರುವ ಸಂಚಿತ ಕರ್ಮಗಳನ್ನು ತೊಲಗಿಸಿಕೊಳ್ಳಲಾರೆವು. ಧ್ಯಾನ ಸಾಧನೆಯೊಂದರಿಂದಲೇ ಕರ್ಮಗಳನ್ನು ದಗ್ಧ ಮಾಡಿಕೊಳ್ಳಬಲ್ಲೆವು. ಅಂದರೆ ಕರ್ಮಗಳಿಂದ ವಿಮುಕ್ತ ಹೊಂದಬಲ್ಲೆವು. ಮುಕ್ತಿಹೊಂದಬಲಲೆವು. ಅಂದರೆ ಅನಾರೋಗ್ಯದಿಂದ ಮುಖ್ತಿ, ಅಶಾಂತಿಯಿಂದ ಮುಕ್ತಿ, ಭಯದಿಂದ ಮುಕ್ತಿ, ಸಮಸ್ಯೆಗಳಿಂದ ಮುಕ್ತಿ, ದುಃಖದಿಂದ ಮುಕ್ತಿ, ಕೊನೆಗೆ ಶಾಶ್ವತವಾದ ಮುಕ್ತಿ ಅಂದರೆ ಮೋಕ್ಷವನ್ನು ಕೂಡಾ ಹೊಂದಬಲ್ಲೆವು.

ಒಂದು ವಿಷಯ ಆಲೋಚಿಸೋಣ. ನಮಗೆ ಒಂದು ಕೋಟಿ ರೂಪಾಯಿಗಳು ಸಾಲವಿರುವಾಗ ಒಂದು ಸಣ್ಣ ಕಿರಾಣಿ ಅಂಗಡಿಯಂತಹ ವ್ಯಾಪಾರ, ಲ್ಯಾಂಡ್ರಿ ವ್ಯಾಪಾರ, ತರಕಾರಿಗಳ ವ್ಯಾಪಾರ ಇಲ್ಲ, ಬೀದಿ ಬದಿ ವ್ಯಾಪಾರ ಮಾಡಿದರೆ ನಮ್ಮ ಸಾಲವು

ತೀರುವುದಿಲ್ಲವಲ್ಲ! ಬಡ್ಡಿ ಮೇಲೇರಿ ಸಂಪೂರ್ಣವಾಗಿ ಮುಳುಗಿ ಹೋಗುತ್ತೇವೆ. ಆದರೆ ಅದಕ್ಕೆ ತಕ್ಕ ವ್ಯಾಪಾರ ಮಾಡಿದರೇನೇ ಕೋಟಿ ರೂಪಾಯಿ ಸಾಲವನ್ನು ತೀರಿಸಬಲ್ಲೆವು. ಹಾಗೆಯೇ ನಾವು ಅನೇಕ ಜನ್ಮಗಳಲ್ಲಿ ಮಾಡಿದಂತಹ ಸಂಚಿತಕರ್ಮಗಳೆಂಬ ದೊಡ್ಡ ಬೆಟ್ಟವನ್ನು ದಗ್ಧವಾಗಬೇಕೆಂದರೆ ಸಾಮಾನ್ಯವಾದ ಪೂಜೆಗಳು, ಸ್ತೋತ್ರಗಳು, ಜಪಗಳು ಇವುಗಳಿಂದ ಸಾಧ್ಯವಾಗುವುದಿಲ್ಲ. ಸರಿ ಹಾಗಾದರೆ ಇನ್ನು ಕರ್ಮಗಳು ಇನ್ನೂ ಬೆಳೆಯುತ್ತವೆ, ಜನ್ಮ ವ್ಯರ್ಥವಾಗುತ್ತದೆಯೇ ಹೊರತು ನಾವು ಕೋರಿಕೊಂಡ ಫಲಗಳು, ಲಾಭಗಳನ್ನು ಹೊಂದಲಾರೆವು. ಶಕ್ತಿವಂತವಾದ ಧ್ಯಾನ ಮಾಡಿದರೆ ಜ್ಞಾನಿಗಳಾಗಿ, ಜನ್ಮರಾಹಿತ್ಯವನ್ನು ಹೊಂದಿ ಇನ್ನು ಎಷ್ಟೋ ಉನ್ನತ ಲೋಕಗಳಿಗೆ ಹೋಗಿ ಶಾಶ್ವತ ಸೌಖ್ಯವನ್ನು ಹೊಂದಬಲ್ಲೆವು.

ಈ ಭೂಲೋಕವೆನ್ನುವುದು ಒಂದು ಪಾಠಶಾಲೆಯಂತದ್ದು. ಒಬ್ಬ ವ್ಯಕ್ತಿ 5ನೇ ತರಗತಿಯಲ್ಲಿ ಎಷ್ಟೋ ವರ್ಷಗಳು ಇರುವಂತೆ, ನಾವು ಈ ಭೂಲೋಕದಲ್ಲಿ ಎಷ್ಟೋ ನೂರು ಜನ್ಮಗಳನ್ನು ತೆಗೆದುಕೊಂಡು ದುಃಖ ಪಡುತ್ತಾ, ಜೀವಿಸಿದರೆ ಏನೂ ಪ್ರಯೋಜನವಿಲ್ಲ. ಸ್ವಲ್ಪ ನಮ್ಮ ಬುದ್ಧಿ ಉಪಯೋಗಿಸಿ, ಧ್ಯಾನ ಸಾಧನೆ ಮಾಡಿ ಪ್ರಾಥಮಿಕ ಶಾಲೆಯಿಂದ, ಅಂದರೆ ಈ ಭೂಲೋಕವನ್ನು ಬಿಟ್ಟು ಸೃಷ್ಟಿಯಲ್ಲಿರುವ ಪ್ರೌಢಶಾಲೆಯಂತಹ ಲೋಕಗಳಿಗೆ, ಕಾಲೇಜಿನಂತಹ ಲೋಕಗಳಿಗೆ, ವಿಶ್ವವಿದ್ಯಾಲಯದಂತ ಲೋಕಗಳಿಗೆ ಹೋಗಲು ಪ್ರಯತ್ನಿಸಬೇಕು. ಇದೇ ಮಾನವ ಜನ್ಮದೊಂದು ಲಕ್ಷ್ಯವೆಂದು ತಿಳಿದು ಕೊಳ್ಳಬೇಕು. ಇದೇ ಪತ್ರೀಜಿಯವರು ಕೊಟ್ಟಿರುವ ಸಂದೇಶವೂ ಕೂಡ.

# 31. ಭಗವಂತನ ಮೆಚ್ಚುಗೆ ಹೊಂದಬೇಕು!

ಭಗವಂತನು ಏನೆಂದುಕೊಳ್ಳುತ್ತಾನೋ ನಮಗೆ ತಿಳಿಯದಾಗಲಿ ನಾವು ಏನೆಂದುಕೊಳ್ಳುತ್ತೇವೆಯೋ ಅದು ಭಗವಂತನಿಗೆ ಗೊತ್ತು. ಭಗವಂತನು ಪೂಜಾ ಮಂದಿರದಲ್ಲಿ, ಗುಡಿಯಲ್ಲಿ, ಚರ್ಚ್‌ನಲ್ಲಿ ಇಲ್ಲಾ, ಮಸೀದಿಯಲ್ಲಿ ಇದ್ದಾನೆಂದುಕೊಂಡು ಆತನನ್ನು ಅಲ್ಲಿಗೆ ಪರಿಮಿತಗೊಳಿಸಿ, ಅಲ್ಲಿ ಮಾತ್ರವೇ ಪವಿತ್ರವಾಗಿ ಇರುತ್ತಿದ್ದೇವೆ. ಆದರೆ ಭಗವಂತನು ನಮ್ಮಲ್ಲಿ ಅಂತರ್ಲೀನನಾಗಿ ಆತ್ಮರೂಪದಲ್ಲಿ ಇರುತ್ತಾ ನಮ್ಮ ದುಷ್ಟ, ಸ್ವಾರ್ಥಪೂರಿತ ಆಲೋಚನೆಗಳು, ನಮ್ಮ ಅಸತ್ಯದ ಮಾತುಗಳು, ಪಾಪಕಾರ್ಯಗಳನ್ನು ಗಮನಿಸುತ್ತಿದ್ದಾನೆ. ಆತನಿಗೆ ಏನೂ ಗೊತ್ತಿಲ್ಲವೆಂದು ನಾವೇ ಬುದ್ಧಿವಂತರೆಂದು ಅಂದುಕೊಳ್ಳುತ್ತಿದ್ದೇವೆ.

ಭಗವಂತನು ಅಂತರ್ಲೀನನಾಗಿ ಇರುವುದಲ್ಲದೆ, ಪ್ರತಿ ಸಂದರ್ಭದಲ್ಲಿ, ಪ್ರತಿ ವಿಷಯದಲ್ಲಿ, ನಮ್ಮನ್ನು ಎಚ್ಚರಿಸುತ್ತಲೇ ಇರುತ್ತಾನೆ. ಆದರೆ ನಾವು ಅದು ಭಗವಂತನ ಎಚ್ಚರಿಕೆ ಎಂದು ತಿಳಿದುಕೊಳ್ಳದೆ, ಅವುಗಳನ್ನು ಹಿಡಿಸಿಕೊಳ್ಳದೆ, ಎಷ್ಟೋ ತಪ್ಪುಗಳನ್ನು, ಪಾಪಗಳನ್ನು ಮಾಡುತ್ತಾ ಕೊನೆಗೆ ಅವುಗಳಿಗೆ ತಕ್ಕ ಶಿಕ್ಷೆಗಳನ್ನು ಅನುಭವಿಸುತ್ತಿದ್ದೇವೆ, ದುಃಖ ಪಡುತ್ತಿದ್ದೇವೆ.

ಭಗವಂತನಂದರೆ ನಿಜವಾಗಿ ಭಕ್ತಿ, ಭಯವಿದ್ದರೆ, ಅಂತರಾತ್ಮ ರೂಪದಲ್ಲಿ ಆತನು ಕೊಡುವ ಸಲಹೆಗಳು ಪಾಲಿಸಿ ಆತನನ್ನು ಮೆಚ್ಚಿಸಬೇಕು, ಅಷ್ಟೇ ಹೊರತು ಅತನನ್ನು, ಪೂಜೆಗಳು, ಪ್ರಾರ್ಥನೆಗಳು, ನಮಾಜು, ಭಜನೆಗಳು, ಹರಕೆಗಳು, ಅಲ್ಪವಾದ ಕಾಣಿಕೆಗಳ ಮೂಲಕ ಮೆಚ್ಚಿಸಲಾಗುವುದಿಲ್ಲವೆಂದು ತಿಳಿದುಕೊಳ್ಳಬೇಕು.

ನಮ್ಮ ಆಲೋಚನಾ ವಿಧಾನ ಹೇಗೆ ಇದೆ ಎಂದರೆ ಭಗವಂತನು ಗುಡಿಯಲ್ಲಿ, ಮಂದಿರದಲ್ಲಿ, ಚರ್ಚಿನಲ್ಲಿ, ಮಸೀದಿಯಲ್ಲಿ ಮಾತ್ರವೇ ಇದ್ದಾನೆ. ನಮಗೆ ತಿಳಿದಾಗ, ತೋಚಿದಾಗ, ನಾವು ಹೋದಾಗ ನಮಗಾಗಿ ಎದುರು ನೋಡುತ್ತಾ ನಾವು ಕೊಡುವ ಕಾಣಿಕೆಗಾಗಿ ಆಸೆ ಪಡುತ್ತಾ, ನಾವು ಕೇಳಿದ ತಕ್ಷಣ ನಮ್ಮ ಕಾಣಿಕೆಗಳನ್ನು ತೆಗೆದುಕೊಂಡು

ನಮ್ಮ ಪಾಪಗಳನ್ನು, ತಪ್ಪುಗಳನ್ನು, ಮೋಸಗಳನ್ನು, ದುರ್ಮಾರ್ಗಗಳನ್ನು ತನ್ನ ಶಕ್ತಿಯಿಂದ ಶುದ್ಧಿ ಮಾಡಿ, ಅಂದರೆ ಕ್ಷಮಿಸಿ, ಇನ್ನು ಪರವಾಗಿಲ್ಲ ನೀನು ಹೆಚ್ಚು ಪಾಪಗಳನ್ನು, ದುರ್ಮಾರ್ಗಗಳನ್ನು ಮಾಡಿ, ಇನ್ನು ಹೆಚ್ಚು ಕಾಣಿಕೆಗಳನ್ನು ತಂದು ನನ್ನ ಮೆಚ್ಚುಗೆಗೆ ಪಾತ್ರನಾಗು, ನಾನು ಇಲ್ಲಿ ನಿನಗಾಗಿ, ನಿನ್ನ ಕಾಣಿಕೆಗಳಿಗಾಗಿ ಎದುರು ನೋಡುತ್ತಾ ಇರುತ್ತೇನೆ ಎನ್ನುವಂತೆ ವರ್ತಿಸುತ್ತಿದ್ದೇವೆ ಎಂದರೆ, ಭಗವಂತನ ಕುರಿತು ನಮ್ಮ ಆಲೋಚನಾ ವಿಧಾನ ಹೇಗಿದೆಯೋ? ನಾವು ಭಗವಂತನ ಶಕ್ತಿಯನ್ನು ಎಷ್ಟು ಕೇವಲವಾಗಿ ಅಂದಾಜು ಮಾಡುತ್ತಿದ್ದೇವೋ? ತಿಳಿದುಕೊಳ್ಳಬೇಕು.

ಇನ್ನು ನಮ್ಮ ಆಲೋಚನಾ ವಿಧಾನ ಹೇಗಿದೆಯಂದರೆ ಭಗವಂತನು ಕರುಣಾಮಯನು, ದಯಾಮಯನು, ಆತನು ನಮ್ಮ ತಪ್ಪುಗಳನ್ನು, ಪಾಪಗಳನ್ನು ಕ್ಷಮಿಸುವುದಕ್ಕೇ ಇದ್ದಾನೆ. ಆದ್ದರಿಂದ ನಮ್ಮ ಜೀವನದಲ್ಲಿ ನಮ್ಮ ಇಷ್ಟ ಬಂದಂತೆ ವರ್ತಿಸಿ, ಪಾಪಗಳನ್ನು ಮಾಡಿ, ಪೂಜೆಯಿಂದಲೋ, ಪ್ರಾರ್ಥನೆಯಿಂದಲೋ, ನಮಾಜಿನಿಂದಲೋ, ನಮ್ಮ ಪಾಪಗಳನ್ನು ತೊಲಗಿಸಿಕೊಳ್ಳಬಹುದೆಂದು ಭಾವಿಸುತ್ತೇವೆ. ಅಷ್ಟೇ ಹೊರತು ಭಗವಂತನು ಒಳ್ಳೆಯವರಿಗೆ ಎಷ್ಟು ದಯೆಯಿಂದ ಇರುತ್ತಾನೋ, ದುರ್ಮಾರ್ಗಿಗಳ ಬಗ್ಗೆಯು, ಪಾಪವನ್ನು ಮಾಡುವವರ ಬಗ್ಗೆಯು ಅಷ್ಟೇ ಕಠಿಣವಾಗಿ ವ್ಯವಹರಿಸುತ್ತಾನೆಂದು ತಿಳಿದುಕೊಳ್ಳದೆ ಹೋಗುತ್ತಿದ್ದೇವೆ.

ಭಗವಂತನು "ದುಷ್ಟರನ್ನು ಶಿಕ್ಷಿಸುತ್ತಾನೆ, ಶಿಷ್ಟರ ರಕ್ಷಣೆ ಮಾಡುತ್ತಾನೆ" ಆದ್ದರಿಂದ ಭಗವಂತನ ಕುರಿತು ತಿಳಿದುಕೊಳ್ಳದೆ, ಭಗವಂತನ ಶಕ್ತಿಯನ್ನು ಅರ್ಥ ಮಾಡಿಕೊಳ್ಳಲಾಗದೆ, ಪಾಪಗಳನ್ನು ಮಾಡುತ್ತಾ ಜೀವನದಲ್ಲಿ ಬಾಧೆಗಳು, ದುಃಖಗಳು, ಕಷ್ಟಗಳು, ಸಮಸ್ಯೆಗಳು, ರೋಗಗಳು, ತಂದುಕೊಂಡು ಬಳಲುತ್ತಿದ್ದೇವೆ. ಇವೆಲ್ಲವೂ ನಾವು ಮಾಡಿದ ಪಾಪಗಳ ಫಲಗಳೇ ಎಂದು ತಿಳಿದುಕೊಳ್ಳದೆ ಬೇರೆ ಬೇರೆ ಕಾರಣಗಳನ್ನು ಹೇಳುತ್ತಿದ್ದೇವೆ.

ಆದ್ದರಿಂದ ನಮ್ಮ ಆಲೋಚನೆಗಳು ಶುದ್ಧಿ ಮಾಡಿಕೊಳ್ಳಬೇಕು. ಮಾತುಗಳನ್ನು ಶುದ್ಧಿಮಾಡಿಕೊಳ್ಳಬೇಕು. ಕೆಲಸಗಳನ್ನು ಶುದ್ಧಿ ಮಾಡಿಕೊಳ್ಳಬೇಕು. ಗುಡಿಗಳಲ್ಲಿದ್ದಾಗ, ಚರ್ಚ್‌ನಲ್ಲಿದ್ದಾಗ, ಮಸೀದಿಗಳಲ್ಲಿದ್ದಾಗ ಹೇಗೆ ವರ್ತಿಸುತ್ತೇವೆಯೋ, ಪ್ರತಿಕ್ಷಣವೂ ಎಲ್ಲಾ ಕಡೆಯೂ ಹಾಗೆಯೇ ವರ್ತಿಸಬೇಕು. ಅಂತರಾತ್ಮದ ಎಚ್ಚರಿಕೆಗಳನ್ನು ಪಾಲಿಸಬಕು.

ಭಗವಂತನ ಕೃಪೆಗೆ ಪಾತ್ರರಾಗಬೇಕೆಂದರೆ, ಭಗವಂತನ ಶಕ್ತಿಯನ್ನು ಕಡಿಮೆಯಾಗಿ ಅಂದಾಜು ಮಾಡಬಾರದು. ಸಾಮಾನ್ಯವಾದ ಚಟುವಟಿಕೆಗಳಿಂದ ವಶಮಾಡಿಕೊಳ್ಳಲಾರೆವೆಂದು ಗುರುತಿಸಬೇಕು. ಒಳ್ಳೆಯ ಕೆಲಸಗಳನ್ನು ಮಾಡಬೇಕು.

ಒಳ್ಳೆಯ ಗುಣಗಳನ್ನು ಹೊಂದಿರಬೇಕು, ಲೋಕಕಲ್ಯಾಣಕ್ಕಾಗಿ ಶ್ರಮಿಸಬೇಕು, ಸ್ವಾರ್ಥವನ್ನು ಬಿಡಬೇಕು. ನಾವು ಮಾಡುವ ಪ್ರತಿಯೊಂದು ಒಳ್ಳೆಯ ಕೆಲಸ, ಪ್ರತಿ ಕೆಟ್ಟ ಕೆಲಸವು ಗಮನಿಸಲ್ಪಡುತ್ತದೆ ಎಂದು ಮರೆಯಬಾರದು. ನಾವು ಮಾಡುವ ಪ್ರತಿ ಕೆಲಸಕ್ಕೆ ಫಲಿತಾಂಶವು ಬಂದೇ ಬರುತ್ತದೆ. ಪ್ರ್ಯೇಕವಾಗಿ ಪ್ರಾರ್ಥಿಸುವ ಆಗತ್ಯವಿಲ್ಲ, ಪೂಜೆಯನ್ನು ಮಾಡಬೇಕಾಗಿಲ್ಲ, ಪೂಜಿಸಿ ಕೂರಬೇಕಾಗಿಲ್ಲ.

ನಾವು ಅರ್ಥ ಮಾಡಿಕೊಳ್ಳಬೇಕಾದದದು ಏನೆಂದರೆ, ನಮ್ಮ ಅಂತರಾತ್ಮನ ಸೂಚನೆಯ ಪ್ರಕಾರ ನಡೆದುಕೊಂಡರೆ ಅಂದರೆ ಸಾಕ್ಷಾತ್ ಭಗವಂತನು ಹೇಳಿದಂತೆ ನಡೆದುಕೊಂಡರೆ ಪ್ರತ್ಯೇಕವಾಗಿ ಭಗವಂತನನ್ನು ಪೂಜಿಸುವ ಅಗತ್ಯವಿಲ್ಲ. ಪ್ರಾರ್ಥಿಸಬೇಕಾಗಿಲ್ಲ, ನಮಾಜು ಮಾಡಬೇಕಾಗಿಲ್ಲ, ಏಕೆಂದರೆ ನಾವು ಸಾಕ್ಷಾತ್ ಭಗವಂತನ ಅದೇಶದ ಪ್ರಕಾರವೇ ನಡೆಯುತ್ತಿದ್ದೇವೆ. ಆದ್ದರಿಂದ ಭಗವಂತನ ಆದೇಶ ಅಲ್ಲವೆಂದು ಭಗವಂತನ ವಿಗ್ರಹವನ್ನು ಪೂಜಿಸುವುದು ಅರ್ಥವಿಲ್ಲದ ಕಾರ್ಯವಾಗುತ್ತದೆ.

ಒಂದು ಅಂಗಡಿಯ ಯಜಮಾನ ತನ್ನ ಗುಮಾಸ್ತನಿಗೆ ತನ್ನ ಅಂಗಡಿಯನ್ನು ಒಪ್ಪಿಸಿ ಊರಿಗೆ ಹೋಗಿ ಒಂದು ತಿಂಗಳ ನಂತರ ತಿರುಗಿ ಬಂದನು. ಈ ತಿಂಗಳಲ್ಲಿ ಆ ದಿನಗಳಲ್ಲಿ ಆ ಗುಮಾಸ್ತ ಯಜಮಾನಿ ಹೇಳಿದವುಗಳನ್ನು ಯಾವುದನ್ನೂ ಮಾಡುವುದಿಲ್ಲ. ಆದರೆ ಆ ಗುಮಾಸ್ತ ಮಾತ್ರ ಮನೆಯ ಹತ್ತಿರ ಪ್ರತಿದಿನ ಆ ಯಜಮಾನನ ಫೋಟೊ ಇಟ್ಟು ಪೂಜಿಸುತ್ತಾನೆ, ಆರತಿ ಮಾಡತ್ತಾನೆ. ಎಷ್ಟೋ ಭಕ್ತಿಯಿಂದ ಇರುವಂತೆ ವರ್ತಿಸುತ್ತಾನೆ.

ಸ್ವಲ್ಪ ಆಲೋಚಿಸಿರಿ, ಈಗ ಯಜಮಾನ ತನಗೆ ನಷ್ಟ ಉಂಟು ಮಾಡಿ ತಾನು ಹೇಳಿದ್ದಕ್ಕೆ ಭಿನ್ನವಾಗಿ ವರ್ತಿಸಿದ್ದಕ್ಕೆ ಗುಮಾಸ್ತನನ್ನು ಶಿಕ್ಷಿಸುತ್ತಾನಾ? ಇಲ್ಲಾ! ತನಗ ನಷ್ಟವಾದರೂ ತನ್ನನ್ನು ಪೂಜಿಸುತ್ತಿದ್ದಾನೆಂದು ಆತನನ್ನು ಕ್ಷಮಿಸುತ್ತಾನ? ಹಾಗೇ ಮಾಡಿದರೆ ಹೀಗೆ ಎಷ್ಟು ಸಾರಿ ಕ್ಷಮಿಸಬಲ್ಲ. ಗುಮಾಸ್ತ ತನ್ನನ್ನು ಪೂಜಿಸುತ್ತಿದ್ದಾನೆಂದು ಹೇಳಿ ಎಷ್ಟು ಆತನ ನಷ್ಟವನ್ನು ಭರಿಸುತ್ತಾನೆ? ಖಂಡಿತವಾಗಿ ನಿಂದಿಸುತ್ತಾನಲ್ಲವೇ?

ನಾನೆಂದರೆ ಎಷ್ಟು ಭಕ್ತಿ, ಗೌರವ ಇರುವಾಗ, ನಾನು ಹೇಳಿದಂತೆ ಏಕೆ ಮಾಡಲಿಲ್ಲ? ನಾನು ಹೇಳಿದಂತೆ ಮಾಡದೆ ನಾನೆಂದರೆ ಭಕ್ತಿ ಅಂದರೆ ಅದು ಹೇಗೆ ಸರಿ ಹೋಗುತ್ತದೆ? ನಾನು ಹೇಳಿದಂತೆ ಮಾಡದೆ ನನಗೆ ನಷ್ಟವನ್ನುಂಟು ಮಾಡಿ ನನ್ನನ್ನು ಪೂಜಿಸುತ್ತಿದ್ದೇನೆಂದರೆ ನಾನು ನಂಬುತ್ತೇನೆಯೇ? ನನಗೆ ಬೇಕಾಗಿದ್ದು ನಾನು ಹೇಳಿದಂತೆ ಮಾಡುವುಧೂ ಆಗಿದೆ. ನನಗೆ ನಷ್ಟವನ್ನುಂಟು ಮಾಡದೆ ಇರುವುದು ಆಗಿದೆ. ಅಷ್ಟೇ ಹೊರತು, ನನಗೆ ನಷ್ಟವನ್ನುಂಟು ಮಾಡಿ ನನ್ನನ್ನು ಪೂಜೆ ಮಾಡುತ್ತಿದ್ದೆನೆಂದರೆ, ಅದು

ಬರೀ ನಾಟಕವೆ ಎಂದು ಖಂಡಿತವಾಗಿ ಗುಮಾಸ್ತನನ್ನು ಶಿಕ್ಷಿಸುತ್ತಾನೆ, ಕೆಲಸದಿಂದ ತೆಗೆದುಹಾಕುತ್ತಾನೆ.

ಹಾಗೆ ಸಾಮಾನ್ಯ ಮಾನವನಾದ ಯಜಮಾನನೆ ತನ್ನ ಪೂಜೆಗೆ, ಹೊಗಳಿಕೆಗೆ ಪ್ರಾಮುಖ್ಯತೆ ಕೊಡದಿರುವಾಗ, ಅನಂತ ಶಕ್ತಿಸ್ವರೂಪನಾದ, ಸಕಲ ಚರಾಚರ ಸೃಷ್ಟಿಕರ್ತನಾದ ಪರಮಾತ್ಮ, ಅಂತರಾತ್ಮನ ರೂಪದಲ್ಲಿ ತಾನು ಹೇಳಿದ್ದು ಪಾಲಿಸದೆ, ತನಗೆ ಮಾಡುವ ಪೂಜೆಗಳಿಗೆ, ಭಜನೆಗಳಿಗೆ, ಪ್ರಾರ್ಥನೆಗಳಿಗೆ, ನಮಾಜುಗಳಿಗೆ ಪ್ರಾಮುಖ್ಯತೆ ಹೇಗೆ ಕೊಡುತ್ತಾನೆ? ನಮ್ಮ ತಪ್ಪುಗಳನ್ನು ಎಲ್ಲವನ್ನು ಹೇಗೆ ಕ್ಷಮಿಸುತ್ತಾನೆ?

ಆತನ ಸೃಷ್ಟಿಯನ್ನು ನಮ್ಮ ಸ್ವಾರ್ಥಕ್ಕಾಗಿ, ನಮ್ಮ ಆನಂದಕ್ಕಾಗಿ ಛಿದ್ರಗೊಳಿಸುತ್ತಾ, ಸ್ವೇಚ್ಛೆಯಾಗಿ, ಆನಂದವಾಗಿ ಜೀವಿಸಬೇಕಾಗಿರುವ ಸಹ ಪ್ರಾಣಿಗಳನ್ನು ಸಂಹರಿಸಿ, ಹಿಂಸಿಸುತ್ತಿದ್ದರೆ, ಅಸತ್ಯಗಳನ್ನು ನುಡಿಯುತ್ತಾ ಅಧರ್ಮದಿಂದ ನಡೆದುಕೊಳ್ಳುತ್ತಾ, ಎಲ್ಲರನ್ನು ಮೋಸಗೊಳಿಸುತ್ತಾ ಇದ್ದರೆ ಭಗವಂತನು ನೋಡುತ್ತಾ ಸುಮ್ಮನಿರುತ್ತಾನೆಯೇ? ತಪ್ಪದೆ ಶಿಕ್ಷಿಸಿಯೇ ತೀರುತ್ತಾನೆ.

ಅಷ್ಟೇ ಹೊರತು ನಾವು ಮಾಡುವ ಪೂಜೆಗಳಿಗೆ, ಪ್ರಾರ್ಥನೆಗಳಿಗೆ ವಶವಾಗಲಾರನೆಂದು ಗ್ರಹಿಸಬೇಕು. ಭಗವಂತನ ಶಕ್ತಿಯನ್ನು ತಿಳಿದುಕೊಳ್ಳಬೇಕು. ಭಗವಂತನು ಸರ್ವಾಂತರ್ಯಾಮಿ ಎಂದು ನೆನಪಿಟ್ಟುಕೊಳ್ಳಬೇಕು. ಆದ್ದರಿಂದ ಪೂಜೆಗಿಂತ ಅಂತರಾತ್ಮ ರೂಪದಲ್ಲಿ ಭಗವಂತನು ಹೇಳುವ ವಿಧದಲ್ಲಿ ನಡೆಯುವುದಕ್ಕೆ ಪ್ರಾಮುಖ್ಯತೆ ಕೊಡಬೇಕು. ಅದುವೇ ನಾವು ಭಗವಂತನಿಗೆ ಕೊಡುವ ನಿಜವಾದ ಗೌರವ. ಆತನಿಗೆ ನಾವು ತೋರಿಸುವ ನಿಜವಾದ ಭಕ್ತಿ. ಆಗಲೇ ನಾವು ಅತನ ಶಕ್ತಿಯನ್ನು ಅರ್ಥ ಮಾಡಿಕೊಂಡಂತೆ. ಆವಾಗಲೇ ನಾವು ಆತನ ಮೆಚ್ಚುಗೆಯನ್ನು ಗಳಿಸುತ್ತೇವೆ.

ಆತ್ಮ ರೂಪದಲ್ಲಿ ಭಗವಂತನು ಹೇಳಿದಂತೆ ನಡೆದುಕೊಳ್ಳುವ ಶಕ್ತಿ ಬರಬೇಕೆಂದರೆ ಧ್ಯಾನವನ್ನು ಮಾಡಬೇಕು. ಪ್ರಸ್ತುತ ನಾವು ಮನಸ್ಸಿಗೆ ಪ್ರಾಮುಖ್ಯತೆ ಕೊಡುತ್ತಿದ್ದೇವೆ. ಆತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಿಲ್ಲ. ಧ್ಯಾನ ಚೆನ್ನಾಗಿ ಮಾಡಿದರೆ ಮನಸ್ಸಿನ ಪ್ರಾಮುಖ್ಯ ತಗ್ಗಿ ಆತ್ಮದ ಪ್ರಾಮುಖ್ಯತೆ ಹೆಚ್ಚುತ್ತದೆ. ಆಗ ಭಗವಂತನು ಹೇಳಿದ ಪ್ರಕಾರ ನಡೆದುಕೊಳ್ಳುತ್ತೇವೆ. ಭಗವಂತನ ಮೆಚ್ಚುಗೆಗೆ ಪಾತ್ರರಾಗುತ್ತೇವೆ. ಜೀವನವನ್ನು ಧನ್ಯ ಮಾಡಿಕೊಳ್ಳುತ್ತೇವೆ.

# 32. "ಭಕ್ತಿಯಿಂದ ಮುಕ್ತಿಯನ್ನು ಹೊಂದಿದವರೊಂದಿಗೆ ಹೋಲಿಸಿ ಕೊಳ್ಳಬಾರದು!

ಧ್ಯಾನವನ್ನು ಕುರಿತು ಕೇಳಿದವರು ತಿಳುವಳಿಕೆ ಇಲ್ಲದೆ ಧ್ಯಾನ ಮಾಡಿದರೆ ಭಕ್ತಿಗೆ ಭಗವಂತನಿಗೆ ದೂರವಾಗಿ ಹೊಗುತ್ತಿದ್ದೇವೆ ಏನೋ ಎಂದು ಭಯಪಡುತ್ತಾರೆ. ಭಗವಂತನನ್ನು ಬಿಟ್ಟು ಬಿಡುತ್ತಿದ್ದೇವೆ ಏನೋ ಅಂದುಕೊಳ್ಳುತ್ತಾರೆ. ಆದ್ದರಿಂದ ನಮಗೆ ಧ್ಯಾನದ ಅವಶ್ಯಕತೆ ಇಲ್ಲ. ನಾವು ಯಾವುದೋ ಒಂದು ಭಕ್ತಿ ಮಾರ್ಗದಲ್ಲಿದ್ದೇವೆ. ಪುನಃ ಬೇರೆ ಮಾರ್ಗವೇಕೆ ಎಂದು ಹೇಳುತ್ತಾರೆ.

ಇನ್ನು ಭಕ್ತ ಪ್ರಹ್ಲಾದ, ಧೃವ, ಮಾರ್ಕಂಡೇಯ, ಭಕ್ತ ಪೋತನ, ತ್ಯಾಗಯ್ಯ ಅನ್ನಮಯ್ಯ, ಭಕ್ತ ತುಕಾರಾಂ, ಹೀಗೆ ಎಷ್ಟೇ ಮಂದಿಯನ್ನು ಉದಾಹರಣೆಯಾಗಿ ಹೆಸರಿಸುತ್ತಾ ಅವರೆಲ್ಲ ಭಕ್ತಿ ಮಾರ್ಗದಲ್ಲಿ ಉದ್ಧಾರಗೊಂಡಿರುವಾಗ ನಾವು ಉದ್ಧಾರವಾಗಲಾರೆವೆ? ಹೊಸ ಮಾರ್ಗಗಳು ನಮಗೇತಕ್ಕೆ ಎಂದು ಹೇಳುತ್ತಾರೆ.

ಹಾಗೆ ಪ್ರಹ್ಲಾದ ಮುಂತಾದವರೊಡನೆ ಹೋಲಿಸಿ ಕೊಳ್ಳುತ್ತಾರೆ. ಅವರರೊಂದಿಗೆ ತಾವು ಸಮಾನವಾದವರಂತೆ ಭಾವಿಸುತ್ತಾರೆ. ಆದರೆ ಅವರ ಭಕ್ತಿಗೆ, ಇವರ ಭಕ್ತಿಗೆ ಸಂಬಂಧವೆ ಇಲ್ಲವೆಂದು, ಅಸಲು ಅವರೊಂದಿಗೆ ಹೋಲಿಸಿಕೊಳ್ಳಲು ಕುಡಾ ಸರಿಯಲ್ಲವೆಂದು ಭಾವಿಸುವುದಿಲ್ಲ.

ಭಕ್ತಿ ಮಾರ್ಗದಲ್ಲಿ ಧನ್ಯವಾದವರೆಲ್ಲಾ ಪ್ರಾಪಂಚಿಕ ಸುಖಗಳನ್ನು, ಸಮಸ್ತ ಭೋಗಗಳನ್ನು, ಸಂಸಾರ ಸುಖಗಳ ಮೇಲೆ ಮಮಕಾರವನ್ನು ಬಿಟ್ಟು ಆ ಭಗವಂತನನ್ನು ಪಡೆಯಬೇಕಂಬ ಲಕ್ಷ್ಯದಿಂದ, ಅದೇ ಹಂಬಲದಿಂದ ಜೀವಿಸಿದರು. ಜೀವನದಲ್ಲಿ ಎಷ್ಟು ಕಷ್ಟಗಳು ಎದುರಾದರೂ, ಎಷ್ಟು ಅಡ್ಡಿಗಳು ಬಂದರೂ, ತಮ್ಮ ಲಕ್ಷ್ಯ ಸಾಧನೆಯನ್ನು ಬಿಡಲಿಲ್ಲ. ಅವರ ಪ್ರಯತ್ನವನ್ನು ಬಿಡಲಿಲ್ಲ.

ಆದರೆ ಅಂತಹವರೊಡನೆ ಹೋಲಿಸಿ ಕೊಳ್ಳುತ್ತಾ ಭಕ್ತಿ ಮಾರ್ಗದಲ್ಲಿದ್ದೇವೆ ಎಂದು ಅಂದುಕೊಳ್ಳುತ್ತಾರೆ. ಆದರೆ ಗಮನಿಸಿದರೆ ಅವರಿಗೆ ನಮಗೆ ಅಸಲು ಹೋಲಿಕೆಯೇ ಇರುವುದಿಲ್ಲ. ಅವರೊಡನೆ ಹೋಲಿಸಿ ಕೊಳ್ಳುವುದಕ್ಕೆ ಸರಿಹೋಗಲಾರೆವು ಕೂಡಾ. ನಾವು

ಭಗವಂತನೆಂದರೆ ಇಷ್ಟವೆನ್ನುತ್ತೇವೆ. ಆದರೆ ಆ ಭಗವಂತನ ಮೇಲೆ ದೃಷ್ಠಿ ಇಡುವುದಿಲ್ಲ. ಎಷ್ಟು ಹೊತ್ತೂ ಉಳಿದವುಗಳ ಮೇಲೆ ಅಂದರೆ ಸಂಪಾದನೆಯ ಮೇಲೆ, ಸಂಸಾರದ ಮೇಲೆ, ಸಮಸ್ಯೆಗಳ ಮೇಲೆ, ಟಿ.ವಿ.ಗಳ ಮೇಲೆ, ಕಾರುಗಳ ಮೇಲೆ, ಭೋಗಗಳ ಮೇಲೆ, ಸುಖಗಳ ಮೇಲೆ, ತಿಂಡಿಗಳ ಮೇಲೆ, ಹೀಗೆ ಎಲ್ಲವುಗಳ ಮೇಲೆ ದೃಷ್ಠಿ ಇಡುತ್ತೇವೆ. ಆತನನ್ನು ಹೊಂದಲು ಪ್ರಯತ್ನಿಸುವುದಿಲ್ಲ.

ಆಲೋಚಿಸಿ ನಮ್ಮ ದೃಷ್ಠಿ ಭಗವಂತನ ಮೇಲೆ ಇಲ್ಲದಾಗ, ಭಗವಂತನ ದೃಷ್ಠಿ ನಮ್ಮ ಮೇಲೆ ಹೇಗೆ ಇರುತ್ತದೆ.

ಮೇಲಾಗಿ ಭಗವಂತನೆಂದರೆ ಇಷ್ಟವೆನ್ನುತ್ತೇವೆ. ಆಲೋಚಿಸಿದರೆ ನಮ್ಮ ಇಷ್ಟ ಭಗವಂತನ ಮೇಲೆಗಿಂತ ಕೊರಕೆಗಳ ಮೇಲೆಯೇ ಹೆಚ್ಚಿರುತ್ತದೆ. ನಮ್ಮ ಇಷ್ಟವೆಲ್ಲಾ ಭಗವಂತನು ಕೋರಿಕೆಗಳನ್ನು ತೀರಿಸುತ್ತಾನೆಂದೇ. ಕಷ್ಟಗಳಿಂದ ಹೊರಹಾಕುತ್ತಾನೆಂದೇ. ಅಷ್ಟೇ ಹೊರತು ನಿಜವಾದ ಇಷ್ಟವಲ್ಲ.

ಏಕೆಂದರೆ ಕೋರಿಕೆಗಳು ತೀರದೇ ಹೊದರೆ ಆ ಭಗವಂತನನ್ನೇ ಬದಲಾಯಿಸುತ್ತೇವೆ. ಭಗವಂತನನ್ನು ಬದಲಾಯಿಸುವವರು ಭಗವಂತನ ಭಕ್ತರೇಗೆ ಆಗುತ್ತಾರೆ? ಅದು ಭಕ್ತಿ ಹೇಗಾಗುತ್ತದೆ?

ಮೇಲಾಗಿ ಪ್ರಹ್ಲಾದನೊಂದಿಗೆ ಹೋಲಿಸಿ ಕೊಳ್ಳುತ್ತೇವೆ. ಪ್ರಹ್ಲಾದನೊಂದಿಗೆ ಹೋಲಿಸಿಕೊಳ್ಳುವುದಕ್ಕೆ ಪ್ರಹ್ಲಾದನ ಭಕ್ತಿಗೆ, ನಮ್ಮ ಭಕ್ತಿಗೆ ಅಸಲು ಸಂಬಂಧವಿದೆಯೊ? ಪ್ರಹ್ಲಾದನು ಕಷ್ಟಗಳು ಬಂದರೂ ಭಗವಂತನನ್ನು ಹೊಂದಬೇಕೆಂಬ ಹಂಬಲ, ಲಕ್ಷ್ಯ ಬದಲಾಗಲಿಲ್ಲ. ಎಷ್ಟು ಸಾರಿ ಸಾಯಿಸುವುದಕ್ಕೆ ಪ್ರಯತ್ನಿಸಿದರೂ ಸಾಯಲು ಸಿದ್ಧನಾದನು, ಆದರೂ ಚಲಿಸಲಿಲ್ಲ. ಭಗವಂತನನ್ನು ಬದಲಾಯಿಸಲಿಲ್ಲ.

ಆದರೆ ನಾನು ಭಕ್ತನು ಎನ್ನುವ ನಾವು ಸಣ್ಣ ಕಷ್ಟ ಬಂದರೂ ಭಗವಂತನನ್ನು ಬದಲಾಯಿಸುತ್ತೇವೆ. ಅಸಲು ಕಷ್ಟಗಳು ಇಲ್ಲದೆ ಹೋದರೆ ಭಗವಂತನೇ ಗುರುರ್ತಿರುವುದಿಲ್ಲ. ಮೇಲಾಗಿ ಭಗವಂತನೆಂದರೆ ಇಷ್ಟವೆನ್ನುತ್ತೇವೆ. ಆದರೆ ಇಷ್ಟವಾದ ಭಗವಂತನ ಮೇಲೆ ದೃಷ್ಠಿ ಇಡುವುದಿಲ್ಲ. ಭಗವಂತನ ಮೇಲೆ ದೃಷ್ಟಿ ಇಡುವುದಕ್ಕಾಗಿ ಸಮಯ ಇಲ್ಲವೆನ್ನುತ್ತೇವೆ. ಮೇಲಾಗಿ ಭಕ್ತರೆನ್ನುತ್ತೇವೆ. ಅಂದರೆ ಮಾತುಗಳನ್ನಾಡುತ್ತೇವೆ, ಕೃತಿಗಳಲ್ಲಿರುವುದಿಲ್ಲ. ಹಾಗಾದರೆ ಪ್ರಹ್ಲಾದನೊಡನೆ ಹೇಗೆ ಹೋಲಿಸಕೊಳ್ಳುತ್ತೇವೆ? ಅವರು ನಾವು ಹೇಗೆ ಒಂದೇ ಆಗುತ್ತೇವೆ?

ಆದ್ದರಿಂದ ಅವರೊಡನೆ ಹೋಲಿಸಿಕೊಳ್ಳುವ ಮೊದಲು ಅಸಲು ಭಗವಂತನೆಂದರೆ ಯಾರು? ಹೇಗೆ ಇರುತ್ತಾನೆ? ಆತನ ಭಕ್ತಾನಾಗಬೇಕೆಂದರೆ ಏನು ಮಾಡಬೇಕು? ಅಸಲು

ಭಕ್ತಿ ಅಂದರೆ ಏನು? ಪೂಜೆ ಮಾಡಿ ಕೋರಿಕೆ ಕೋರಿಕೊಳ್ಳುವುದೇನಾ ಭಕ್ತಿ? ಇಲ್ಲಾ ಏನು ಮಾಡಬೇಕು ಎಂದು ತಿಳಿಯಬೇಕು.

ಉಪನಿಷತ್ತಿನಲ್ಲಿ ಭಕ್ತಿ ಅಂದರೆ "ಸ್ವಸ್ವರೂಪಾನು ಸಂಧಾನ ಭಕ್ತಿ ರಿತ್ಯಭಿದಿಯತೆ" ಎಂದು ಹೇಳಲ್ಪಟ್ಟಿದೆ;

ಅಂದರೆ ಯಾರಾದರೆ 'ತನ್ನ ಸ್ವರೂಪದಿಂದ' ಅಂದರೆ "ಆತ್ಮದೊಡನೆ ಅನುಸಂಧಾನವಾಗಿ ಇರುತ್ತಾರೊ ಅದನ್ನೇ ಭಕ್ತಿ" ಎನ್ನುತ್ತಾರೆ ಅಂದರೆ ಆತ್ಮ ಮೇಲೆ ದೃಷ್ಠಿ ಇಡುವುದೇ ಭಕ್ತಿ ಆಗುತ್ತದೆ. ಅದರ ಮಾರ್ಗವೆ ಧ್ಯಾನ. ಅಂದರೆ ಧ್ಯಾನ ಮಾಡಿದ ಭಕ್ತರು, ಧ್ಯಾನ ಮಾಡುವುದೇ ಭಕ್ತಿ ಎಂದು ತಿಳಿಯಬೇಕು. ನಾವು ಹೋಲಿಸಿಕೊಳ್ಳುವವರೆಲ್ಲಾ ನಿತ್ಯವು ಭಗವಂತನ ಮೇಲೆ ಅಂದರೆ ಆತ್ಮದ ಮೇಲೆ ದೃಷ್ಠಿ ಇಟ್ಟಿವರೆ! ಅಂದರೆ ಧ್ಯಾನ ಮಾಡಿದವರೆ! ಆದರಿಂದ ಭಕ್ತಿಯಿಂದ ಮುಕ್ತಿಯನ್ನು ಹೊಂದಿದವರಲ್ಲಿ ನಮ್ಮನ್ನು ಹೋಲಿಸಿಕೊಳ್ಳಬಾರದು.

# 33. “ಭಗವಂತನ ಮೇಲೆ ಇಷ್ಟವನ್ನು ಬೆಳೆಸಿಕೊಳ್ಳುವ ಮೊದಲು !

ಭಗವಂತನೆಂದರೆ ಇಷ್ಟವೆ? ಎಂದು ಕೇಳಿದರೆ ತಕ್ಷಣವೆ ಎಲ್ಲರಿಗಿಂತ ಭಗವಂತನೆಂದರೆನೆ ಇಷ್ಟವೆನ್ನುತ್ತೇವೆ.

ಭಗವಂತನೆಂದರೆ ಅಷ್ಟು ಇಷ್ಟಪಡುವುದಕ್ಕೆ ಕಾರಣವೇನು? ಯಾರಮೇಲೆ ಇಲ್ಲದ ಇಷ್ಟ ಭಗವಂತನ ಮೇಲೆ ಏಕೆ ಇದೆ? ಆಲೋಚಿಸಿದರೆ ಭಗವಂತನೆಂದರೆ ಇಷ್ಟಪಡುವುದಕ್ಕೆ ಮುಖ್ಯಕಾರಣ ಭಗವಂತನು ನಮ್ಮ ಕೋರಿಕೆಗಳು ತೀರಿಸುತ್ತಾನೆ ಎಂದು ಆತನ ಹೊರತು ನಮ್ಮ ಕೋರಿಕೆಗಳು ತೀರಿಸುವವರು, ನಮ್ಮ ಸಮಸ್ಯೆಗಳು ಭಾಗದೆಗಳು ಹೊಗಲಾಡಿಸುವವರು ಯಾರು ಇಲ್ಲವೆಂದೆ!

ಭಗವಂತನೆಂದರೆ ಇಷ್ಟವೆನ್ನುತ್ತೇವೆ. ಆದರೆ ಇಷ್ಟವಾದ ಭಗವಂತನ ಕುರಿತು ತಿಳಿದುಕೊಳ್ಳುವುದಕ್ಕೆ ಮಾತ್ರ ಪ್ರಯತ್ನಿಸುವುದಿಲ್ಲ.

ಆದರೆ ನಾವು ಯಾರ ಮೇಲಾಗಲಿ, ಯಾವುದರ ಮೇಲಾಗಲಿ ಇಷ್ಟವನ್ನು ಬೆಳೆಸಿಕೊಳ್ಳುವ ಮೊದಲು ಆ ವ್ಯಕ್ತಿ ಇಂದಾಗಲಿ, ಆ ವಸ್ತುವಿನಿಂದಾಗಲಿ, ಲಾಭವಾಗುತ್ತದೆಯೇ? ನಮ್ಮ ಅವಸರಗಳು ತೀರುತ್ತವೆಯೇ? ಎಂದು ನೋಡುತ್ತೇವೆ. ತೀರುತ್ತವೆ ಎಂದರೇನೆ ಅವರ ಮೇಲೆ ಇಷ್ಟವನ್ನು ಬೆಳೆಸಿಕೊಳ್ಳುತ್ತೇವೆ. ಅವರನ್ನು ಪಡೆಯಲು ಪ್ರಯತ್ನಿಸುತ್ತೇವೆ.

ಹಾಗೆಯೆ ಒಂದು ವಸ್ತುವನ್ನು ಜೋಡಿಸಿಕೊಳ್ಳುವಾಗ ಎಷ್ಟೋ ಆಲೋಚಿಸುತ್ತೇವೆ ಎಷ್ಟೋ ವಿಚಾರಿಸುತ್ತೇವೆ, ಎಷ್ಟೋ ತಿಳಿದುಕೊಳ್ಳುತ್ತೇವೆ. ಆ ವಸ್ತುವನ್ನು ಯಾರು ತಯಾರು ಮಾಡಿದರು? ಅದರ ಗುಣಮಟ್ಟವೇನು? ಅದನ್ನು ಕೊಂಡರೆ ಚೆನ್ನಾಗಿ ನಮಗೆ ಉಪಯೋಗವಾಗುತ್ತದೆಯೇ? ನಾವು ಭರಿಸಿದಕ್ಕೆ ಬೆಲೆ ಸರಿಹೋಗುತ್ತದೆಯೇ? ಎಂದು ಎಷ್ಟೋ ರೀತಿಯಲ್ಲಿ ಆಲೋಚಿಸಿದ ಹೊರತು. ಆ ವಸ್ತುವಿನ ಮೇಲೆ ಇಷ್ಟವನ್ನು ಬೆಳೆಸಿಕೊಳ್ಳುವುದಿಲ್ಲ. ಅದನ್ನು ಸಂಪಾದಿಸುವುದಿಲ್ಲ. ನಾವು ಹಾಗೆ ಎಲ್ಲವನ್ನು ಕುರಿತು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸುತ್ತೇವೆ. ಆದರೆ ಇಷ್ಟೊಂದು ಇಷ್ಟಪಡುವ ಭಗವಂತನ ಕುರಿತು ಮಾತ್ರ ತಿಳಿದುಕೊಳ್ಳವುದಕ್ಕೆ ಪ್ರಯತ್ನಿಸುವುದಿಲ್ಲ.

ಅಸಲು ಭಗವಂತನೆಂದರೆ ಯಾರು? ಆತನು ಎಲ್ಲಿರುತಾರೆ? ಹೇಗೆ ಇರುತ್ತಾನೆ?

ಆತನ ಶಕ್ತಿ ಎಷ್ಟು? ಆತನ ವರ್ತನೆ ಎಂತಹುದು? ಆತನು ಭೂಮಿಯ ಮೇಲೆ ಕೆಲವರಿಗೆ ಮಾತ್ರವೇ ಸೀಮಿತವೇ? ತನ್ನನ್ನು ಆರಾಧಿಸುವವರನ್ನು ಮಾತ್ರವೇ ಅನುಗ್ರಹಿಸುತ್ತಾನಾ? ಇಲ್ಲಾ ಎಲ್ಲರನ್ನೂ ಅನುಗ್ರಹಿಸುತ್ತಾನಾ? ಆತನು ಆಲಯಗಳಲ್ಲಿ, ಪ್ರಾರ್ಥನ ಮಂದಿರಗಳಲ್ಲಿ ಮಾತ್ರವೇ ಇರುತ್ತಾನಾ? ನಮ್ಮ ಕೋರಿಕೆಗಳಲ್ಲಿ ಭಿನ್ನವಿಸಿಕೊಳ್ಳಬೇಕೆಂದರೆ ಆತನಿಗೆ ಮಧ್ಯವರ್ತಿಗಳು ಅವಸರವೇ? ಆಸಲು ಆತನು ಕೋರಿಕೆಗಳನ್ನು ತೀರಿಸುವವನೇ? ಆತನು ಪಾಪಗಳನ್ನು, ತಪ್ಪುಗಳನ್ನು ಕ್ಷಮಿಸಲು ಮಾತ್ರವೇ ಇದ್ದಾನಾ? ಆತನಿಗೆ ಇನ್ನೇನು ಕೆಲಸವಿಲ್ಲವೇ? ಆತನ ಎಷ್ಟು ಹೊತ್ತೂ ಎಲ್ಲರ ಬಗ್ಗೆ ಪ್ರೇಮ, ದಯೆ, ಕರುಣೆ ಮಾತ್ರವೆ ಉಳ್ಳವನೇ? ಪಾಪಗಳನ್ನು ಮಾಡುವವರ ಬಗ್ಗೆ ಆತನ ವರ್ತನೆ ಹೇಗೆ ಇರುತ್ತದೆ? ಆತನ ಶಿಷ್ಟರ ರಕ್ಷಣೆ ಹೊರತು, ದುಷ್ಟ ಶಿಕ್ಷಣ ಮಾಡುವುದಿಲ್ಲವೇ? ಹೀಗೆ ಆತನ ಕುರಿತು ತಿಳಿದುಕೊಳ್ಳಲು ಪ್ರಯತ್ನಿಸಬೇಕು.

ಆತನು ನಮ್ಮೊಬ್ಬರಿಗೆ ಮಾತ್ರವೇ ಭಗವಂತನೇ? ಸೃಷ್ಟಿಯಲ್ಲಿ ಸಮಸ್ತ ಜೀವಿಗಳಿಗೆ ಆತ ಭಗವಂತನೆ? ಅಸಲು ಆತ ಭೂಮಿಗೆ ಬಂದರೆ ಆತನ ವರ್ತನೆ ಹೇಗಿರುತ್ತದೆ? ಅಸಲು ಆತನು ನಮ್ಮ ಎದುರಿಗೆ ಬಂದರೆ ಆತನನ್ನು ಗುರುತಿಸುತ್ತೇವೆಯೆ? ಆತನೆಂದರೆ ಇಷ್ಟವೆನ್ನುತ್ತೇವೆ, ಎಷ್ಟೋ ಬುದ್ಧಿವತಿಕೆ ಇದೆ ಎಂದು ಕೊಳ್ಳುತ್ತೇವೆ, ಮತ್ತೆ ಇಷ್ಟ ಇದ್ದರೂ ಕೂಡಾ ಆತನು ನಮ್ಮ ಮುಂದೆ ಬಂದರೆ ಗುರ್ತಿಸಲು ಆಗದಿದ್ದಾಗ ನಾವು ಆತನ ಭಕ್ತರೇಗೆ ಆಗುತ್ತೇವೆ?

ಆತನು ಸರ್ವತ್ರಾ ಇರುತ್ತಾನೆಯೇ? ಕೆಲವು ಪ್ರದೇಶಗಳಲ್ಲಿ ಮಾತ್ರವೆ ಇರುತ್ತಾನಾ? ಆತನಿಗೆ ಆಸಲು ರೂಪವಿದೆಯೆ? ಹೆಸರಿದೆಯೆ? ಆತನು ನಮ್ಮಿಂದ ಏನನ್ನು ಆಶಿಸುತ್ತಾನೆ? ನಮ್ಮ ವರ್ತನೆ ಹೇಗೆ ಇರುಬೇಕು ಎನ್ನುತ್ತಾನೆ? ನಮ್ಮ ಗುಣಗಳು ಹೇಗೆ ಇರಬೇಕು? ನಾವು ಏನು ಮಾಡಿದರೆ ಆತನು ಆನಂದಿಸುತ್ತಾನೆ? ಆತನನ್ನು ಸಂತೋಷಪಡಿಸಬೇಕೆಂದರೆ ಏನು ಮಾಡಬೇಕು? ಅಸಲು ನಮ್ಮ ವರ್ತನೆ ಹೇಗಿರಬೇಕು? ಎನ್ನುವುದನ್ನು ಆಲೋಚಿಸಬೇಕು. ಇವುಗಳನ್ನೆಲ್ಲಾ ಆಲಿಚಿಸಿದರೇನೆ ಆತನಿಗೆ ಇಷ್ಟವಾಗುವಂತೆ ವರ್ತಿಸಬಲ್ಲೆವು ಆತನ ಅನುಗ್ರಹ ಹೊಂದಬಲ್ಲೆವು. ಜೀವನವನ್ನು ಧನ್ಯ ಮಾಡಿಕೊಳ್ಳಬಲ್ಲೆವು. ಆದ್ದರಿಂದ ಭಗವಂತನ ಮೇಲೆ ಇಷ್ಟವನ್ನು ಬೆಳೆಸಿಕೊಳ್ಳುವ ಮೊದಲು ಆತನ ಕುರಿತು ತಿಳಿದುಕೊಳ್ಳಬೇಕು. ಆತನ ಬಗ್ಗೆ ಅರಿವನ್ನು ಹೆಚ್ಚಿಸಿ ಕೊಳ್ಳಬೇಕು.

ಭಗವಂತನ ಶಕ್ತಿ ತಿಳಿಯಬೇಕೆಂದರೂ, ಆತನ ಕುರಿತು ತಿಳುವಳಿಕೆ ಪಡೆಯ ಬೇಕೆಂದರೂ ಧ್ಯಾನವನ್ನು ಮಾಡಬೇಕು. ಧ್ಯಾನವನ್ನು ಮಾಡಿದರೆನೆ ನಿರಾಕಾರನಾದ ಭಗವಂತನ ಕುರಿತು ತಿಳಿದುಕೊಳ್ಳುವುದು ಮಾತ್ರವಲ್ಲ, ಆತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬಲ್ಲೆವು.

# 34. ಭಗವಂತನ ಶಕ್ತಿಯನ್ನು ಕಡಿಮೆ ಮಾಡಬಾರದು!

ಸಾಧಾರಣವಾಗಿ ಭಗವಂತನ ಕುರಿತು ಕೇಳಿದಾಗ ಈ ವಿಧವಾಗಿ ಹೇಳುತ್ತೇವೆ. ಭಗವಂತನು ನಿರಾಕಾರನು, ಸರ್ವಾಂತರ್ಯಾಮಿ, ಸರ್ವ ಶಕ್ತಿವಂತನು, ಆತನು ಎಲ್ಲೆಲ್ಲೂ ಇರುವನು, ಅಣುವಣುವು ವ್ಯಾಪಿಸಿ ಇರುತ್ತಾನೆಂದು ಭಕ್ತಪ್ರಹ್ಲಾದನು ಹೇಳಿದೆ, "ಅಲ್ಲಿರುವನು ಇಲ್ಲಿಲ್ಲ ಎಂಬ ಸಂದೇಹ ಬಿಡು. ಎಲ್ಲೆಲ್ಲು ಹುಡುಕಿದರೂ ಅಲ್ಲಲ್ಲಿಯೇ ಇರುವನು" ಎಂದು ಕುಡಾ ಹೇಳುತ್ತೇವೆ.

ಭಗವಂತನು ಸರ್ವಾಂತರ್ಯಾಮಿ ಎನ್ನುತ್ತಾ ಕೂಡಾ, ನಾವು ಗುಡಿಗಳಲ್ಲಿ, ಚರ್ಚ್‌ಗಳಲ್ಲಿ, ಮಸೀದಿಗಳಲ್ಲಿ ಮಾತ್ರವೆ ಪವಿತ್ರವಾಗಿರುತ್ತೇವೆ. ಆದರೆ ಹೊರಗೆ ಆ ಪವಿತ್ರತೆ, ಆ ವಿನಯ, ಎಷ್ಟು ಮಾತ್ರವು ಕಾಣಿಸುವುದಿಲ್ಲ. ನಮ್ಮ ವರ್ತನೆ ಪೂರ್ತಿಯಾಗಿ ಬದಲಾಗಿ ಬಿಡುತ್ತದೆ. ಭಗವಂತನು ಗುಡಿಗಳಲ್ಲಿ ಇರುತ್ತಾನೆ, ವಿಗ್ರಹವೇ ಭಗವಂತ ಎನ್ನುವಂತೆ ಇರುತ್ತದೆ. ಉಳಿದ ಸ್ಥಳಗಳಲ್ಲಿ ಭಗವಂತನು ಇಲ್ಲವೆನ್ನುವಂತೆ ಇರುತ್ತದೆ.

ಆದರೆ ಕೇಳಿದರೆ ಮಾತ್ರ ಆತನು ಸರ್ವಾಂತರ್ಯಾಮಿ, ಆತನು ಗುಡಿಯಲ್ಲಿ ಮಾತ್ರವಲ್ಲ ಎಲ್ಲಾ ಕಡೆ ಇರುತ್ತಾನೆ, ಎಲ್ಲಾ ಕಡೆ ನೋಡಬಲ್ಲನು ಎಂದು ಹೇಳುತ್ತೇವೆ ಮತ್ತೆ ಇವೆಲ್ಲಾ ಹೇಳುತ್ತಿದ್ದೇವೆ ಅಂದರೆ ಭಗವಂತನ ಕುರಿತು ತಿಳಿದಂತೆ ಅಲ್ಲವೆ? ಮತ್ತೆ ತಿಳಿದು ಕೂಡಾ ತಿಳಿಯದವರಂತೆ ಅಜ್ಞಾನದಿಂದ ಏಕೆ ವರ್ತಿಸುತ್ತಿದ್ದೇವೆ? ನಮ್ಮ ವರ್ತನೆ ಆಲಯ, ಚರ್ಚ್, ಮಸೀದಿವರೆಗೆ ಪರಿಮಿತ ಮಾಡುತ್ತಿದ್ದೇವೆ ಎಂದರೆ ಭಗವಂತನ ಶಕ್ತಿಯನ್ನು ಸೀಮಿತಗೊಳಿಸಿದಂತೆ ಅಲ್ಲವೆ? ಆತನ ಶಕ್ತಿಯನ್ನು, ಮಹಿಮೆಯನ್ನು ಕಡಿಮೆಯಾಗಿಸಿ ಈ ರೀತಿಯಾಗಿ ವರ್ತಿಸುವುದು ಅನ್ಯಾಯ ಅಲ್ಲವೆ?

ವಿಗ್ರಹವು ಭಗವಂತನಾದರೆ ಆತನ ಎದುರಿಗೆ ಇರುವಾಗ ನಮ್ಮ ಕೋರಿಕೆಗಳನ್ನು ಹೊರಗೆ ಹೇಳದೆ ಮನಸ್ಸಿನಲ್ಲಿಯೇ ಏಕೆ ಹೇಳಿಕೊಳ್ಳುತ್ತಿದ್ದೇವೆ? ಎಂದು ಕೇಳಿದರೆ ಭಗವಂತನು ಸರ್ವಾಂತರ್ಯಾಮಿ, ಸರ್ವ ಶಕ್ತಿವಂತನು ಮನಸ್ಸಿನಲ್ಲಿ ಅಂದುಕೊಂಡೆರೂ ತಿಳಿದುಕೊಳ್ಳುವ ಶಕ್ತಿ ಇರುವಾಗ, ಗುಡಿಗಳನ್ನು ಚರ್ಚ್‌ಗಳಲ್ಲಿ ಅಲ್ಲದೆ ಎಲ್ಲಿ ಅಂದುಕೊಂಡರೂ ತಿಳಿದುಕೊಳ್ಳಬಲ್ಲ ಅಲ್ಲವೆ? ಹಾಗಿರುವಾಗ ಗುಡಿಗಳಲ್ಲಿ, ಚರ್ಚ್‌ಗಳಲ್ಲಿ

ಅಂದುಕೊಂಡರೇನೇ ತಿಳಯುತ್ತದೆ ಎನ್ನುವಂತೆ ವರ್ತಿಸುತ್ತಾ, ಆತನ ಶಕ್ತಿಯನ್ನು ಗುಡಿಗೆ, ಚರ್ಚ್‌ಗೆ, ಸೀಮಿತಿ ಗೊಳಿಸುವುದು ಅನ್ಯಾಯವಲ್ಲವೆ?

ಪ್ರಪಂಚದಲ್ಲಿ ಯಾರು ಯಾವ ಮೂಲೆಯ ಪ್ರಾಂಥದಲ್ಲಿ ಮನಸ್ಸಿನಲ್ಲಿ ಅಂದುಕೊಂಡರೂ ಭಗವಂತನಿಗೆ ತಿಳಿದುಕೊಳ್ಳ ಬಲ್ಲ ಶಕ್ತಿ ಇದೆಯೆಂದು, ಆತನ ಶಕ್ತಿ ಅಪಾರವೆಂದು ಹೇಳುತ್ತಾ ಇರುತ್ತೇವೆ. ಆದರೆ ಆತನಿಗೆ ಕೇಳಿಸುವುದಿಲ್ಲ ಎನ್ನುವಂತೆ ಮೈಕುಗಳನ್ನು ಇಟ್ಟು, ಭಜನೆಗಳನ್ನು ಮಾಡುತ್ತಾ, ಪ್ರಾರ್ಥನೆಗಳು ಮಾಡುತ್ತಾ ಗಟ್ಟಿಯಾಗಿ ಕಿರುಚುತ್ತೇವೆ. ಮತ್ತೆ ಮೈಕು ಇಟ್ಟು ಗಟ್ಟಿಯಾಗಿ ಅರಚುತ್ತಾ ಭಗವಂತನಿಗೆ ತಿಳಿಯುವುದಿಲ್ಲವೆನ್ನುವಂತೆ ವರ್ತಿಸುವುದು ಆತನ ಶಕ್ತಿಯನ್ನು ತಗ್ಗಿಸುವುದು ಆಗಿದೆಯಲ್ಲವೆ? ಆತನ ಶಕ್ತಿಗೆ ತಕ್ಕಂತೆ ವರ್ತಿಸದಿರುವುದು ಅನ್ಯಾಯವಲ್ಲವೇ?

ಭಗವಂತನಿಗೆ ಮನಸ್ಸಿನಲ್ಲಿ ಅಂದು ಕೊಂಡದ್ದು ಕೂಡಾ ತಿಳಿದುಕೊಳ್ಳು ಬಲ್ಲ ಶಕ್ತಿ ಇರುವಾಗ, ನಮ್ಮ ಕಷ್ಟಗಳು ಆತನಿಗೆ ತಿಳಿಯವೆ? ಹಾಗಿರುವಾಗ ಆತನಿಗೆ ನಮ್ಮ ಕಷ್ಟಗಳ ಕುರಿತು ಪ್ರತ್ಯೇಕಿಸಿ ಹೇಳಬೇಕೆ? ಹಾಗೆ ಹೇಳುತ್ತಿದ್ದೇವೆಂದರೆ ಆತನ ಶಕ್ತಿಯನ್ನು ಶಂಕಿಸಿದಂತೆ ಅಲ್ಲವೆ? ಹಾಗೆ ಶಂಕಿಸುವುದು ಅನ್ಯಾಯವಲ್ಲವೆ?

ಭಗವಂತನನ್ನು ಕೋರುವ ಅವಶ್ಯಕತೆ ಇಲ್ಲ. 'ಮಾಡಬೇಕಾದದ್ದು ಮಾಡಿದರೆ, ಹೊಂದಬೇಕಾದದ್ದನ್ನು ಹೊಂದುತ್ತೇವೆ ಎಂದು ತಿಳಿದುಕೊಂಡು ವರ್ತಿಸುವುದು, ಮಾಡುವುದಕ್ಕೆ ಪ್ರಾಮುಖ್ಯತೆ ಕೊಡುವುದೇ ಭಗವಂತನ ಶಕ್ತಿಯನ್ನು ಅರ್ಥ ಮಾಡಿಕೊಳ್ಳುವುದು ಆಗಿದೆ.

ಭಗವಂತನಿಗೆ ಮನಸ್ಸಿನಲ್ಲಿ ಅಂದುಕೊಂಡವು ತಿಳಿದುಕೊಳ್ಳಬಲ್ಲ ಶಕ್ತಿ ಇರುವಾಗ ನಮ್ಮಲ್ಲಿರುವ ಅವಗುಣಗಳು, ದುಷ್ಟ ಆಲೋಚನೆಗಳು ತಿಳಿಯಲಾರನೇ? ಮತ್ತೆ ನಮ್ಮ ಭಾವಗಳು, ಆಲೋಚನೆಗಳು ಪವಿತ್ರವಾಗಿ ಏಕೆ ಇಟ್ಟುಕೊಳ್ಳುತ್ತಿಲ್ಲ? ನಮ್ಮ ಮನಸ್ಸಿನಲ್ಲಿಯ ಕೋರಿಗೆಳಿಂದ ನಮ್ಮ ಸ್ವಾರ್ಥ ಪೂರಿತ ಆಲೋಚನೆಗಳು, ಮೋಸದಿಂದ ಕೂಡಿದ ಆಲೋಚನೆಗಳು, ದುರ್ಮಾರ್ಗದ ಆಲೋಚನೆಗಳು ಕೂಡ ತಿಳಿಯುತ್ತವೆ ಅಲ್ಲವೆ? ಹಾಗದರೆ ಅಂತಹ ಆಲೋಚನೆಗಳು ಇಲ್ಲದಂತೆ ಮನಸ್ಸನ್ನು ಏಕೆ ಶುದ್ಧವಾಗಿ ಇಟ್ಟುಕೊಳ್ಳುತ್ತಿಲ್ಲಾ? ಹಾಗೆ ವರ್ತಿಸುವುದು ಭಗವಂತನ ಶಕ್ತಿಯನ್ನು ಶಂಕಿಸಿದಂತೆ ಅಲ್ಲವೆ? ಆತನ ಶಕ್ತಿಯನ್ನು ಕಡಿಮೆಗೊಳಿಸಿದಂತೆ ಅಲ್ಲವೆ? ಇದು ಅನ್ಯಾಯವಲ್ಲವೆ?

ದೇವಾಲಯಕ್ಕೊ ಚರ್ಚ್‌ಗೂ ಹೋಗಿ ನಮ್ಮ ಪಾಪಗಳನ್ನು ತೊಲಗಿಸೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ. ಭಗವಂತನು ಆಲಯದೊಳಗೆ ಇದ್ದರೆ ಹೊರಗೆ ನಾವು ಮಾಡುವ ಪಾಪಗಳು ಆತನಿಗೆ ತಿಳಿದಿಲ್ಲವಲ್ಲ? ಭಗವಂತನು ಹೊರಗೆ ಇಲ್ಲದಾಗ ನಾವು

ಮಾಡುವ ಪಾಪಗಳನ್ನು ಯಾರು ರಿಕಾರ್ಡ್ ಮಾಡುತ್ತಾರೆ? ಮತ್ತೆ ರಿಕಾರ್ಡ್‌ನಲ್ಲಿ ಇಲ್ಲದ ಪಾಫಗಳನ್ನು ತೊಲಗಿಸೆಂದು ಪ್ರಾರ್ಥಿಸುವುದು ಏಕೆ? ರಿಕಾರ್ಡ್ ಆಗದ ಪಾಪಗಳ ಕುರಿತು ಆತಂಕ ಏಕೆ? ಪ್ರಾರ್ಥನೆ ಏಕೆ?

ಅಸಲು ನಾವು ಮಾಡುವುದೆಲ್ಲ ಒಳ್ಳೆಯ ಕೆಲಸಗಳೇ ಅಲ್ಲವೆ? ಪಾಪಗಳು ಮಾಡಿಲ್ಲವಲ್ಲ? ಪಾಪಗಳನ್ನು ಕ್ಷಮಿಸೆಂದು ಪ್ರಾರ್ಥಿಸುವುದು ಏಕೆ? ಮತ್ತೆ ಅಷ್ಟು ಗಟ್ಟಿಯಾಗಿ, ದೃಢವಾಗಿ ಪ್ರಾರ್ಥಿಸುತ್ತಿದ್ದೇವೆ ಎಂದರೆ ಪಾಪಗಳನ್ನು ಮಾಡಿದಂತೆ ಅಲ್ಲವೆ? ಪಾಪಗಳನ್ನು ಮಾಡುತ್ತಿದ್ದೇವೆ ಎಂದು ಗೊತ್ತಲ್ಲವೆ? ಮತ್ತೆ ತಿಳಿದೂ ಪಾಪಗಳನ್ನು ಏಕೆ ಮಾಡುತ್ತಿರುವುದು? ಅಸಲು ಪಾಪಗಳನ್ನು ಮಾಡದೆ ಹೋದರೆ ತೊಲಗಿಸೆಂದು ಪ್ರಾರ್ಥಿಸುವ ಅವಸರವಿಲ್ಲವಲ್ಲ? ಭಗವಂತನು ಪಾಪಾಗಳನ್ನು ತೊಲಗಿಸದಿದ್ದರೆ, ಜೀವನದಲ್ಲಿ ಕಷ್ಟಗಳು ಬರುತ್ತವೆಂದು ಗೊತ್ತು, ಆದ್ದರಿಂದ ತೊಲಗಿಸೆಂದು ಪ್ರಾರ್ಥಿಸುತ್ತಿದ್ದೇವೆ. ಮತ್ತೆ ಕನಿಷ್ಠ ಪ್ರಾರ್ಥಿಸಿದ ನಂತರದಿಂದಾದರೂ ಪಾಪಗಳನ್ನು ಮಾಡದಂತೆ ಇರುತ್ತೇವೆಯೆ? ಜೀವನವನ್ನು ಸರಿತಿದ್ದಿ ಕೊಳ್ಳುತ್ತಿದ್ದೇವೆಯೆ? ಸರಿಯಾದ ರೀತಿಯಲ್ಲಿ ಜೀವಿಸುತ್ತಿದ್ದೇವೆ? ಆದ್ದರಿಂದ ಭಗವಂತ ಶಕ್ತಿಯನ್ನು ಗುರುತಿಸಬೇಕು. ಆತನ ಶಕ್ತಿಯನ್ನು ಕಡಿಮೆಗೊಳಿಸಿದರೆ ನಷ್ಟ ಹೊಂದುವುದು ನಾವೇ ಎಂದು ತಿಳಿದುಕೊಳ್ಳಬೇಕು.

ಎಲ್ಲಿ ಕೋರಿಕೊಂಡರೂ ತಿಳಿದುಕೊಳ್ಳಬಲ್ಲ ಶಕ್ತಿ ಭಗವಂತನಿಗೆ ಇರುವಾಗ ನಮ್ಮ ಕೋರಿಕೆಗಳು ತಿಳಿಸಿಹೇಳಲು ಮಧ್ಯವರ್ತಿಗಳ ಅವಸರವಿದೆಯೇ? ನಮ್ಮ ಕಷ್ಟಗಳು ತೊಲಗಿಸೆಂದು ನಮ್ಮ ಪರವಾಗಿ ಇನ್ನೊಬ್ಬರು ಪ್ರಾರ್ಥಿಸಬೇಕೆ? ನಮ್ಮ ಪ್ರಾರ್ಥನೆಯನ್ನು ಭಗವಂತನು ಸ್ವೀಕರಿಸುವುದಿಲ್ಲವೆ? ನಮ್ಮ ಕೋರಿಕೆಗಳನ್ನು ಭಿನ್ನವಿಸಿಕೊಳ್ಳುವುದಕ್ಕೆ ಆತನು ಯಾರನ್ನಾದರೂ ನಿಯಮಿಸಿಕೊಂಡಿರುವನೆ? ಹಾಗೆ ಮಧ್ಯವರ್ತಿ ಇಲ್ಲದೆ ಹೋದರೆ ನಾವು ಕೋರಿಕೊಳ್ಳುವ ಕೋರಿಕೆಗಳು. ಹೇಳಿಕೊಳ್ಳುವ ಕಷ್ಟಗಳು ಕೇಳಿಸಿಕೊಳ್ಳಲಾರನೆ? ಅನುಗ್ರಹಿಸಲಾರನೆ?

ಭಗವಂತನನಿಗೆ ಎಲ್ಲಾ ಒಂದೇ ಅಲ್ಲವೆ? ಎಲ್ಲರೂ ಅತನ ಮಕ್ಕಳೇ ಅಲ್ಲವೆ? ಆತನ ಮಕ್ಕಳ ಬಗ್ಗೆ ಆತನಿಗೆ ಪಕ್ಷಪಾತ ವಿರುತ್ತದೆಯೆ? ಹಾಗೆ ಇದ್ದರೆ ಆತನು ಭಗವಂತನು ಹೇಗಾಗುತ್ತಾನೆ? ಮತ್ತೆ ಭಗವಂತನನ್ನು ಪ್ರಾರ್ಥಿಸುವುದಕ್ಕೆ, ಕೋರಿಕೆಗಳನ್ನು, ಕಷ್ಟಗಳನ್ನು ಹೇಳಿಕೊಳ್ಳುವುದಕ್ಕೆ ಮಧ್ಯವರ್ತನೆಗಳನ್ನು ಏಕೆ ಆಶ್ರಯಿಸುತ್ತಿದ್ದೇವೆ? ಹಾಗೆ ಆಶ್ರಯಿಸುತ್ತಿದ್ದೇವೆಂದರೆ ಭಗವಂತನ ಶಕ್ತಿಯನ್ನು ಶಂಕಿಸಿದಂತೆ ಅಲ್ಲವೆ? ಕಡಿಮೆಗೊಳಿಸಿದಂತಲ್ಲವೆ? ಹಾಗೆ ಕಡಿಮೆಗೊಳಿಸುವುದು ಅನ್ಯಾಯವಲ್ಲವೆ?

ಹಾಗೆ ಪ್ರತಿ ವಿಷಯದಲ್ಲಿ ಭಗವಂತನು ಶಕ್ತಿವಂತನು ಆತನ ಶಕ್ತಿಯು ಅಪಾರ ಎನ್ನುತ್ತಾರೆ. ಆತನ ಶಕ್ತಿಗೆ ತಕ್ಕಂತೆ ವರ್ತಿಸುತ್ತಿಲ್ಲ, ಆತನನ್ನು ವಿಗ್ರಹವಾಗಿಯೋ ಫೋಟವಾಗಿಯೋ ಮಾಡಿ ಆತನನ್ನು ಗುಡಿಗೆ, ಚರ್ಚಿಗೆ, ಮಸೀಧಿಗೆ ಪೂಜೆಮಂದಿರಕ್ಕೆ ಸೀಮಿತಗೊಳಿಸುವಂತ್ತಿದ್ದೇವೆ ಭಗವಂತನು ಅಲ್ಲಿ ಮಾತ್ರವೇ ಇರುವಂತೆ ವಿಗ್ರಹವೇ ಭಗವಂತನೆನನುವಂತೆ ವರ್ತಿಸುತ್ತಿದ್ದೇವೆ ಮತ್ತೆ ಭಗವಂತನು ಸರ್ವಾಂತರ್ಯಾಮಿ ಆದಾಗ ಆತನ ಶಕ್ತಿ ಅಪಾರವಾದಾಗ ನಮ್ಮ ವರ್ತನೆ  ಕಾರ್ಯಗಳು ಅಲ್ಲಿಗೆ ಸೀಮಿತಗೋಳಿಸಬಾರದು ಎಲ್ಲಾ ಕಡೆಯಲ್ಲು ಅದೇ ಭಾವನದಲ್ಲಿರಬೇಕು ಅಧೇ ರೀತಿ ವರ್ತಿಸಬೇಕು ಹಾಗೆ ವರ್ತಿಸಿದರೇನೇ ನಾವು ಭಗವಂತನನ್ನು ಗೌರವಿಸಿದಂತೆ

ಭಗವಂತನು ಈ ಅಖಂಡವಾದ ಸೃಷ್ಟಿಗೆ ಮೂಲಕಾರಕನು ಸಕಲ ಚರಾಚರ ಸೃಷ್ಟಿಯನ್ನು ಸಡೆಸುತ್ತಿರುವವನು ಭೂಮಿಯೊಂದೆ ಅಲ್ಲ ಕೋಟ್ಯಾನು ಕೋಟಿ ಲೋಕಗಳನ್ನು ನಡೆಸುತ್ತಿರುವವನು ಸೃಷ್ಟಿಯಲ್ಲಿ ಕೋಟ್ಯಾನುಕೋಟಿ  ಲೋಕಗಳೆ ಅಲ್ಲ ನಾವು ಇಲ್ಲಿಯವರೆಗೂ ತಿಳಿಯಲಾರದ ಎಷ್ಟೋ ರಹಸ್ಯಗಳಿವೆ ಅಸಲು ನಾವು ಶ್ರೇಷ್ಠವೆಂದು ಭಾವಿಸುವ ಭೂಮಿ ಭಗವಂತನ ದೃಷ್ಟಿಯಲ್ಲಿ ಅಂತಹ ಭೂಮಿ ಭಗವಂತನಸೃಷ್ಟಿಯಲ್ಲಿ ಪರಮಾಣುಗಿಂತ ಚಿಕ್ಕದು ಅಂತಹ ಭೂಮಿ ನಮಗೆ ಅಖಂಡವಾದದು ಅಂತಹ ಭೂಮಿಯ ಮೇಲೆ ನಮ್ಮ ಅಸ್ತಿತ್ವ ಎಷ್ಟೆಂದು ಊಹಿಸಿಕೊಳ್ಳಬಹುದು

ಭಗವಂತನಿಗೆ ಹುಟ್ಟು ಇಲ್ಲ, ಸಾವು ಇಲ್ಲ ಈ ಸೃಷ್ಟಿ ಯಾವಾಗ ನಡೆಯುತ್ತೊ ಹೇಗೆ ನಡೆಯಿತೋ ನಮ್ಮ ಊಹೆಗೆ ನಿಲುಕದ್ದು ಭಗವಂತನ ಸೃಷ್ಟಿಗೆ ಆದಿ ಆಂತ್ಯವು ಇಲ್ಲ ಇದನ್ನು ತಿಳಿದುಕೊಳ್ಳುವ  ಶಕ್ತಿಯು ನಮಗೆ ಇಲ್ಲ ಕೋಟ್ಯಾನು ಕೊಟಿ ವರ್ಷಗಳಿಂದ ನಡೆಯುತ್ತಿರುವ, ಇನ್ನೂ ಮುಂದೆಯು ನಡೆಯುವಂತಹ ಸೃಷ್ಟಿಯಲ್ಲಿ ನಮ್ಮ ಜೀವನ ಎಷ್ಟರದ್ದು? ನಾವೆಷ್ಟು ಇಂತಹ ಅಲ್ಪಾತಿ ಅಲ್ಪವಾದ ನಾವು ಅಂತಹ ಮಹಿಮಾನ್ವಿತವಾದ ನಮ್ಮ ಊಹಿಗೆ ನಿಲುಕುದ ಭಗವಂತನನ್ನು ಆತನ ಶಕ್ತಿಯನ್ನು ಆಲಯಕ್ಕೆ, ಚರ್ಚಿಗೆ, ಸೀಮಿತಗೊಳಿಸಿ ವರ್ತಿಸುತ್ತಿದ್ದೇವೆಂದರೆ ಅನ್ಯಾಯವಲ್ಲವೇ? ಅದು ಎಂತಹ ಅಜ್ಞಾನ? ಎಂತಹ ಎಷ್ಟು ಮೂರ್ಖತನ? ನಿಜವಾಗಿಯೂ ಭಗವಂತನ ಶಕ್ತಿ ಗುರುತಿಸುವಂತಾದರೆ ಅದಕ್ಕೆ ತಕ್ಕಂತೆ ವರ್ತಿಸುತ್ತೇವೆ. ಭಗವಂತನು ಶ್ರೇಷ್ಟನು ಎಂದು ಹೇಳುತ್ತಾ ಆತನ ಶ್ರೇಷ್ಟತೆ ತಕ್ಕಂತೆ ವರ್ತಿಸದೆ ಹೋದರೆ ಆತನ ಶಕ್ತಿಯನ್ನು ತಗ್ಗಿಸಿದಂತೆಯೆ ಆಗುತ್ತದೆ.

ಹಾಗೆ ಕೋಟ್ಯಾನುಕೋಟಿ ಲೋಕಗಳನ್ನು ಕೋಟ್ಯಾನುಕೋಟಿ ಜೀವಿಗಳನ್ನು ಸೃಷ್ಟಿಸಿ ನಮ್ಮ ಊಹೆಗೂ ನಿಲುಕದ ವಿಧದಿಂದ 2 ಭಾಳೇಹಣ್ಣು ಇನ್ನೂ ಅತ್ಯಾಲ್ಪವಾದ ಕಾಣಿಕೆಗಳಿಂದ ಒಂದು ತೆಂಗಿನಕಾಯಿ ಇಲ್ಲಾಂಧರೆ ವಶಮಾಡಿಕೊಳ್ಳಬಹುದೆಂದು ಭಾವಿಸುವುದು ಹಾಗೆ ವರ್ತಿಸುವುದು ಆತನ ಶಕ್ತಿಯನ್ನು ಕಡಿಮೆ ಗೊಳಿಸುವುದೇ ಆಗಲಿ ಶಕ್ತಿಗೆ ತಕ್ಕಂತೆ ವತಿಸುವುದು ಅಲ್ಲ.

ಸಮಸ್ತ ಲೋಕಗಳು ಅವುಗಳಲ್ಲಿಯ ಸಮಸ್ತ ಸಂಪತ್ತುಗಳು ಆತನವೆ ಆಗಿರುವಾಗ ಅದರಲ್ಲಿ ನಾವು ಸಮರ್ಪಿಸುವ ಅಲ್ಪಾತಿ ಅಲ್ಪವಾದ ಕಾಣಿಕೆಗಳು ಆತನಿಗೆಷ್ಟರವುಗಳು ನಾವು ಸಮರ್ಪಿಸುವ ಅಲ್ಪವಾದ ಕಾಣಿಕೆಗಳು ಭಗವಂತನು ಆಶಿಸುತ್ತಿದ್ದಾನೆನ್ನುವಂತೆ ಮಾಡುವುದು ಆತನ ಶಕ್ತಿಯನ್ನು ತಗ್ಗಿಸುವುದೇ ಆಗಲಿ. ಶಕ್ತಿಗೆ ತಕ್ಕಂತೆ ವರ್ತಿಸುವುದು ಅಲ್ಲ.

ಶೃಷ್ಟಿ ಎಲ್ಲಾ ಆತನೇ ಆಗಿರುವಾಗ ಸೃಷ್ಟಿಯಲ್ಲಿನ ಸಮಸ್ತವೂ ಆತನದೇ ಆಗಿರುವಾಗ ಎಲ್ಲವನ್ನು ಬೇರೆ ಬೇರೆಯಾಗಿ ಏಕೆ ನೋಡುತ್ತಿದ್ದಾನೆ ಎಲ್ಲಾ ಆತನೆ ಆಗಿರುವಾಗ ಎಲ್ಲರನ್ನು ಏಕೆ ದ್ವೇಷಿಸುತ್ತಿದ್ದೆವೇ? ಮೋಸಗೋಳಿಸುತ್ತಿದ್ದೇವೆ? ಭಾದಿಸುತ್ತಿದ್ದೇವೆ? ಅವಮಾನಿಸುತ್ತಿದ್ದೇವೆ?

ಎಲ್ಲಾ ಆತನೇ ಆಗಿರುವಾಗ ಯಾರನ್ನೂ ಧ್ವೇಷಿಸಿದರು ಭಗವಂತನ್ನು ದ್ವೇಷಿಸಿದಂತೆಯಲ್ಲವೇ? ಯಾರನ್ನೂ ಹಿಂಸಿಸಬಾರದು, ಯಾವ ಜೀವಿಯನ್ನು ಹಿಂಸಿಸಿದರೂ ಭಗವಂತನನ್ನು ಹಿಂಸಿಸಿದಂತೆಯಲ್ಲವೇ? ಮಾಂಸ ಭಕ್ಷಣೆ ಮಾಡುತ್ತಾ ಎಷ್ಟು ಜೀವಿಗಳನ್ನು ಹಿಂಸಿಸುತ್ತಿದ್ದೇವೆ ಮತ್ತೆ ಈ ಕೆಲಸಗಳನ್ನು ಏಕೆ ಮಾಡುತ್ತಿದ್ದೇವೆ ಹಾಗೇ ಮಾಡಿದರೆ ಭಗವಂತನನ್ನು ಹಿಂಸಿಸಿದಂತೆ ಅಲ್ಲವೆ ಆತನನ್ನು ಹಿಂಸಿಸಿ ಆತನ ಅನುಗ್ರಹವನ್ನು ಹೇಗೆ ಪಡೆಯಯಬಲ್ಲೆವು.

ಭಗವಂತನ ಕುರಿತು ಭಗವಂತನ ಶಕ್ತಿಯನ್ನು ಕುರಿತು ಪೂರ್ತಿಯಾಗಿ ಅರ್ಥಮಾಡಿಕೊಂಡರೆ ಆತನ ಸೃಷ್ಟಿಯನ್ನು ಆತನ ಸೃಷ್ಟಿಯಲ್ಲಿ ಸಮಸ್ತವನ್ನು ಪ್ರಿತಿಸುತ್ತೇವೆ ನಮ್ಮಂತೆಯೇ ನೋಡಿಕೊಳ್ಳುತ್ತೇವೆ ಗೌರವಿಸುತ್ತೇವೆ ಸಮಸ್ತ ಜೀವಿಗಳು ಆತನ ರೂಪಗಳಂತೆ ವರ್ತಿಸಿ ಎಲ್ಲವನ್ನು ಪ್ರೀತಿಸಿದಾಗಲೆ ಭಗವಂತನ ಶಕ್ತಿಯನ್ನು ಅರ್ಥಮಾಡಿಕೊಂಡರೆ ಆಗಲೇ ನಾವು ಭಗವಂತನಿಗೆ ಇಷ್ಟವಾಗುತ್ತೇವೆ ಕೊನೆಗೆ ನಾವೂ ಕೂಡಾ ದೇವರುಗಳಾಗುತ್ತೇವೆ

ಹಾಗೆ ಭಗವಂತನ ಕುರಿತು ಪೂರ್ತಿಯಾಗಿ ಅರ್ಥ ಮಾಡಿಕೊಳ್ಳಬೇಕೆಂದರೆ **ಅಹಂ ಬ್ರಹ್ಮಸ್ಮಿ** ಅಂದರೆ ನಾವು ಕೂಡಾ ಅಂತಹ ಶ್ರೇಷ್ಠ ಭಗವಂತನೆ ಎಂದು ತಿಳಿದುಕೊಳ್ಳಬೇಕೆಂದರೆ ಈ ಸಮಸ್ತ ದುಃಖಗಳಿಂದ ಶಾಶ್ವತವಾಗಿ ವಿಮುಕ್ತಿ ಹೊಂದ ಬೇಕೆಂದರೂ ಒಂದೇ ಮಾರ್ಗ ಅದೇ ಆನಾಪಾನಸತಿಧ್ಯಾನ ಈ ಧ್ಯಾನ ಮಾಡುವುದರಿಂದ ಭಗವಂತನ ಶಕಿಯನ್ನು ಪೂರ್ತಿಯಾಗಿ ಅರ್ಥಮಾಡಿಕೊಂಡು ಆತನ ಶಕ್ತಿಗೆ ತಕ್ಕಂತೆ ವರ್ತಿಸಿ ಜೀವನವನ್ನು ಧನ್ಯ ಮಾಡಿಕೊಳ್ಳುತ್ತೇವೆ ಆದ್ದರಿಂದ ಭಗವಂತನ ಶಕ್ತಿ ತಗ್ಗಿಸ ಬಾರದೆಂದು ತಿಳಿದುಕೊಳ್ಳಬೇಕು ಧ್ಯಾನವನ್ನು ಮಾಡಬೇಕು.

# “ಧ್ಯಾನ ಮಾಡುವ ವಿಧಾನ”

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

## ಧ್ಯಾನವನ್ನು ಯಾರಾದರೂ ಮಾಡಬಹುದು
## ಯಾವ ವಯಸ್ಸಿನವರಾದರೂ ಮಾಡಬಹುದು
## ಯಾವ ಸಮಯದಲ್ಲಿಯಾದರೂ ಮಾಡಬಹುದು
## ಯಾವ ಸ್ಥಳದಲ್ಲಿಯಾದರೂ ಮಾಡಬಹುದು.

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

**ಬ್ಯಾಂಕ್ ಹೆಸರು : ಭಾರತೀಯ ಸ್ಟೇಟ್ ಬ್ಯಾಂಕ್ – State Bank of India**
**ಶಾಖೆಯ ಹೆಸರು : ಚಾಮರಾಜಪೇಟೆ ಶಾಖೆ – Chamarajapete Branch**
**ಖಾತೆ ಸಂಖ್ಯೆ : 30828057680 : I.F.S.C. ಕೋಡ್ – S.B.I.N 0005794**
**ಖಾತೆಯ ಹೆಸರು : ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ – K.P.D.P. Trust A/c. Dhayana Kasturi**

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**



ಎಲ್ಲರು ಭಗವಂತನೆಂದರೆ ಇಷ್ಟವೆನ್ನುತ್ತಾರೆ, ಆದರೆ ಇಷ್ಟವಾದ ಆ ಭಗವಂತನ ಕುರಿತು ತಿಳಿದುಕೊಳ್ಳುದಕ್ಕೆ ಪ್ರಯತ್ನಿಸುವುದಿಲ್ಲ.

ಭಗವಂತನ ಕುರಿತು ತಿಳಿದುಕೊಂಡರೆ, ಆತನ ಶಕ್ತಿಯನ್ನು ಅರಿತುಕೊಂಡರೆ ಆತನ ತತ್ವವನ್ನು ಅರ್ಥ ಮಾಡಿಕೊಂಡರೆ ಅತನನ್ನು ಹೇಗೆ ಆರಾಧಿಸಬೇಕೆಂದು ತಿಳಿಯುತ್ತದೆ. ದುಃಖಗಳಿಂದ ತಾತ್ಕಾಲಿಕವಾಗಿಯೇ ಅಲ್ಲ, ಶಾಶ್ವತವಾಗಿ ಹೊರಬೆಬಹುದು ಮುಕ್ತಿ ಹೊಂದಬಹುದು..

ಭಗವಂತನನ್ನು ಆರಾಧಿಸುವ ಮಾರ್ಗವೆ ಬ್ರಹ್ಮರ್ಷಿ ಪತ್ರೀಜಿ ಬೋಧಿಸುವ "ಶಾಶ್ವದ ಮೇಲೆ ಗಮನ ಧ್ಯಾನ" ಆದ್ಧರಿಂದ "ಧ್ಯಾನವೇ ನಿಜವಾದ ಭಕ್ತಿ" ಇದನ್ನೆ ಉಪನಿಷತ್ತುಗಳಲ್ಲಿ ಸ್ವಸ್ವರೂಪಾನುಸಂಧಾನಂ ಭಕ್ತಿ ರೀತ್ಯಭಿಧಿಯತೇ ಎಂದಿದ್ದಾರೆ.

ಭಗವಂತನ ಕುರಿತು ಪೂರ್ತಿಯಾಗಿ ತಿಳಿದುಕೊಳ್ಳದೆ ಹೋದರೂ, ಸ್ವಲ್ಪವನ್ನಾದರೂ ಅರಿವು ಮಾಡಿಕೊಳ್ಳುವುದಕ್ಕೆ ಮಾಡಿದ ನನ್ನ ಈ ಚಿಕ್ಕ ಪ್ರಯತ್ನವೆ "ಭಗವಂತನೆಂದರೆ?" ವಾಚಕರು ಸಹೃದಯದಿಂದ ಸ್ವೀಕರಿಸಿ, ನಿರಾಕಾರ, ನಿರ್ಗುಣ ಭಗವಂತನ ಆತ್ಮ ತತ್ವವನ್ನು ಅರ್ಥ ಮಾಡಿಕೊಂಡು, ಧ್ಯಾನವನ್ನು ಮಾಡಿ ಅದರ ಮೂಲಕ ನಿಜವಾದ ಆರಾಧನೆ ಮಾಡಿ ಧನ್ಯರಾಗುತ್ತಾರೆಂದು ಆಶಿಸುತ್ತಾ....... ನಿಮ್ಮ

**ತಟವರ್ತಿ ವೀರರಾಘವರಾವ್**

**ರೂ 90/-**


**ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ**

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada ● www.meditationeverywhere.org ● www.pssmovement.org

**ಶ್ರೀರಾಮ ಪಬ್ಲಿಕೇಶನ್ಸ್**

ಶ್ರೀರಾಮಧಾಮ ಧ್ಯಾನಕೇಂದ್ರ, ನಾರಾಯಣಪ್ಪ ಗಾರ್ಡನ್,
ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮಿ ಎಸ್.ಎನ್. + 91 80500 82689